॥ ಪ್ರಸೀದತು ಶ್ರೀ ವೀರಾಂಜನೇಯಃ ॥

# ಹೇಮಪುರ

ಶ್ರೀಕ್ಷೇತ್ರ ಬಂಗಾರಮಕ್ಕಿಯಿಂದ ಹೊರಬರುವ ಧಾರ್ಮಿಕ,
ಪಾರಮಾರ್ಥಿಕ, ನೈತಿಕ ಹಾಗೂ ಲೋಕ ಹಿತಚಿಂತನೆಗಳ ಮಾಸಪತ್ರಿಕೆ

# HEMAPURA

**Shri Kshethra Bangaramakki**
**Post Gerasoppa - 581 384**
**Honnavara Taluk, Uttara Kannada Dist.**

ಗೌರವ ಸಂಪಾದಕರು:
**ಪ.ಪೂ. ಶ್ರೀ ಮಾರುತಿ ಗುರೂಜಿಯವರು**
ಧರ್ಮಾಧಿಕಾರಿಗಳು
ಶ್ರೀಕ್ಷೇತ್ರ ಬಂಗಾರಮಕ್ಕಿ

ಸಂಪಾದಕರು:
**ತೇಜಸ್ವಿ**

ಸಲಹೆಗಾರರು:
**ಶ್ರೀ ರಾಮಚಂದ್ರ ಭಟ್ಟರು, ಶ್ರೀಕ್ಷೇತ್ರ ಬಂಗಾರಮಕ್ಕಿ**
**ಶ್ರೀ ರವೀಶ, ವಕೀಲರು, ಸಾಗರ**
**ಶ್ರೀ ನಾಗರಾಜ್ ನಾಯಕ್, ವಕೀಲರು, ಕಾರವಾರ**
**ಶ್ರೀ ನಾಗರಾಜ್ ಶೇಟ್, ಶಿರಸಿ**
**ಶ್ರೀ ಭೋಗಾನಂದ, ಶಿವಮೊಗ್ಗ**
**ಶ್ರೀ ಪ್ರವೀಣ್, ಬೆಂಗಳೂರು**
**ಶ್ರೀ ಜಿ.ಎಚ್. ನಾಯ್ಕ್, ಹೊನ್ನಾವರ**
**ಶ್ರೀ ಕೆ. ಮನೋಹರ್, ಬೆಂಗಳೂರು**
**ಶ್ರೀ ಡಿ.ಎಂ. ಸತೀಶ್, ತುಮಕೂರು**

ವಿನ್ಯಾಸ, ಅಕ್ಷರ ಜೋಡಣೆ ಮತ್ತು ಸಲಹೆಗಾರರು:
**ಶ್ರೀ ವೀರಾಂಜನೇಯ ಪ್ರಕಾಶನ**
ಶ್ರೀಕ್ಷೇತ್ರ ಬಂಗಾರಮಕ್ಕಿ, ಪೋ: ಗೇರಸೊಪ್ಪಾ-581 384.
ತಾ: ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ.
ದೂ: 08387-268544, 268333, 268545

ಮುದ್ರಕರು:
**ಸಾಯಿನಾಥ ಗ್ರಾಫಿಕ್ಸ್, ಬೆಂಗಳೂರು**

## ಒಳಪುಟಗಳಲ್ಲಿ

ಸಚ್ಚಿಂತನ ........ 2
ಸಂಪಾದಕೀಯ ........ 3
ಆನೋ ಭದ್ರಾಃ ಕೃತವೋಯಂತು ವಿಶ್ವಥಃ ........ 3
ಯಶಸ್ವೀ ಬದುಕಿನ ಮಾರ್ಗ ಮಿಂಚು ........ 4
ಮಧುರ ಪ್ರಕಾಶನದ ಸೌಜನ್ಯದೊಂದಿಗೆ ........ 5
ಶ್ರೀಧರ ಸ್ಮರಣೆ ........ 8
ಶ್ರೀರಾಮ ಕಥಾಸಾರ ........ 8
ಸಂಪ್ರದಾಯ ........ 10
ಪರಮೇಶ್ವರನ ಇಪ್ಪತ್ತೈದು ಲೀಲೆಗಳು ........ 11
ಮಹಾಕ್ಷತ್ರಿಯ ........ 11
ಬದುಕಲೊಂದಿಷ್ಟು ಆಪ್ತಮಾತುಗಳು ........ 14
ಧರೆಗಿಳಿದ ದಿವ್ಯತೇಜ ........ 15
ಕಗ್ಗದ ಬೆಳಕಿನಲ್ಲಿ ........ 18
ವಚನಭಾಗವತ ........ 20
ಜೀವನ ಮೌಲ್ಯ ........ 21
ಸುಂದರಕಾಂಡದ ಸೌಂದರ್ಯ ........ 22
ಔಷಧೀಯ ಸಸ್ಯ ಸಂಪತ್ತು ........ 23
ಮರೆಯಲಾಗದ ವೆಂಭ ವಂದೂರು ........ 23
ಭಾವಪೂರ್ಣ ಶ್ರದ್ಧಾಂಜಲಿ ........ 24
ಪದಬಂಧ-46 ........ 24

**ಹೇಮಪುರ ಘನ ಗಂಭೀರ**

ಘನವಂತ ಬಲವಂತ ಇಷ್ಟಾರ್ಥ ದಾತ
ಭಕ್ತವತ್ಸಲನೆಂಬ ಬಿರುದು ಹೊತ್ತಾತ
ವೀರಾಂಜನೇಯನಿವ ತನ್ನ ಸೇವಿಸುವ
ಭಕ್ತರನು ಉದ್ಧರಿಸಿ ಗುರಿಯ ಮುಟ್ಟಿಸುವ.

ದರ್ಶನದ ಲಾಭವಿದೆ ತಾಪಕಿದೆ ಪರಿಹಾರ
ಹರ್ಷವೇ ಮೈವೆತ್ತಿ ನರ್ತಿಸುವುದಿಲ್ಲಿ
ಆಕರ್ಷಣೀಯವಹ ಲೋಕಹಿತ ಕಾರ್ಯಗಳ
ವರ್ಷದುದ್ದಕು ನಡೆಸುತಿಹನು ಮಾರುತಿಯು

**ಪ್ರಕಟಣೆ: ಪತ್ರಿಕೆಯು ಪ್ರಕಟವಾದ ಒಂದು ವಾರದಲ್ಲಿ ನಮ್ಮ ಅಂತರ್ಜಾಲದಲ್ಲೂ ಲಭ್ಯ www.bangaramakki.org**



ಅಮೇರಿಕನ್ ಕಪ್ ಸಂಬಂಧಿಸಿದ ಕ್ರೀಡೆ – ಯಾಕ್ಟ್ ರೇಸಿಂಗ್

# ನಾಯಮಾತ್ಮಾಬಲಹೀನೇನ ಲಭ್ಯಃ



ಈ ಪ್ರಪಂಚದಲ್ಲಿ ಸಾಧನೆಗೆ ತನ್ನದೇ ಆದಂತಹ ಮಹತ್ವವಿದೆ. ಸಾಧನೆಗೆ ಸಹಸ್ರಾರು ದಾರಿಗಳಿವೆ. ಅನೇಕ ಸ್ಥರಗಳಲ್ಲಿ ಸಾಧನೆಗಳೂ ಆಗಿವೆ. ಸಹಸ್ರಾರು ವಿಷಯಗಳಲ್ಲಿ ಆಯಾಯ ವಿಷಯಾನುಸಾರಿ ಸಾಧನೆಗಳೂ ಆಗಿವೆ. ಹಾಗೆಯೇ ಅಂತಹ ಸಾಧಕರೂ ನಮ್ಮೊಡನೆ ಇದ್ದಾರೆ. ಆದರೆ ಇವೆಲ್ಲ ಸಹಸ್ರಾರು ಸಾಧನೆಗಳಲ್ಲಿ ಆಧ್ಯಾತ್ಮಿಕ ಸಾಧನೆಯೇ ಅಗ್ರಮಾನ್ಯವಾದದ್ದು. ಯಾಕೆಂದರೆ ಆಧ್ಯಾತ್ಮಿಕ ಸಾಧನೆ ಪರಿಪೂರ್ಣವಾದದ್ದು. ಉಳಿದೆಲ್ಲ ಸಾಧನೆಯಲ್ಲಿ ಮತ್ತೆ ಮತ್ತೆ ಸ್ಪರ್ಧೆಗಳು ಏರ್ಪಟ್ಟು ಇಂದಿನ ಸಾಧನೆ ನಾಳೆ ಉಳಿಯುವುದಿಲ್ಲ. ಇಂದು ಏನನ್ನೋ ಸಾಧಿಸಿದವನನ್ನು ನಾಳೆ ಇನ್ನೊಬ್ಬ ಸಾಧಕ ಬಂದು ಆ ಸಾಧನೆಯನ್ನು ಮುರಿದು ತನ್ನ ಇನ್ನೊಂದು ಸಾಧನೆಯನ್ನು ಸಾರ್ಥಕಗೊಳಿಸುತ್ತಾನೆ. ಇದು ಲೌಕಿಕ. ಹಾಗಾಗಿ ಇದು ಕ್ಷಣಿಕ. ಆದ್ದರಿಂದ ಸ್ಪರ್ಧಾತ್ಮಕ ಸ್ಥಿತಿಯೇ ಇಲ್ಲದ ಸಂತೃಪ್ತಿಯ ಸಾಧನೆಯೆಂದರೆ ಅದುವೇ ಆಧ್ಯಾತ್ಮಿಕ ಸಾಧನೆ.

ಆಧ್ಯಾತ್ಮಿಕ ಸಾಧಕನಿಗೆ ಬೇಕಾದ ಅತ್ಯಂತ ಮುಖ್ಯವಾದ ಗುಣಗಳಲ್ಲಿ ಒಂದು – ಭೌತಿಕ ಮತ್ತು ಮಾನಸಿಕ ಬಲ. ಆಧ್ಯಾತ್ಮಿಕ ಜೀವನ ದುರ್ಬಲನಿಗೆ ಅಲ್ಲ. ಉಪನಿಷತ್ತು ಹೇಳುತ್ತದೆ: "ನಾಯಮಾತ್ಮಾಬಲಹೀನೇನ ಲಭ್ಯಃ॥" ಅಂದರೆ ಈ ಆತ್ಮ ಬಲಹೀನನಿಗೆ ಲಭ್ಯವಲ್ಲ.

ಮೊದಲನೇಯದಾಗಿ ದೇಹ ಬಲಯುತವಾಗಿರಬೇಕು. ಅಂದರೆ ಆಧ್ಯಾತ್ಮಿಕ ಸಾಧನೆಯ ಮಾನಸಿಕ ಪ್ರಕ್ರಿಯೆಯನ್ನು ಸಹಿಸುವಷ್ಟು ದೇಹ ಬಲಯುತವೂ ಆರೋಗ್ಯಯುತವೂ ಆಗಿರಬೇಕು. ದೇಹದ ಬಗ್ಗೆ ನಿಷೇಧಾತ್ಮಕವಾದ ಭಾವನೆಯನ್ನು ಇಟ್ಟುಕೊಳ್ಳಬಾರದು. ನಮ್ಮ ದೇಹ ಉತ್ತಮವಾದದ್ದು. ಅದು ಭಗವಂತನ ದೇಗುಲ. ಅದರೊಡನೆ ಒಂದಾಗಬಾರದು. ಅದರೊಡನೆ ಅಂಟಿಕೊಳ್ಳಬಾರದು. ನಾವು ವಾಸಿಸುವ ಮನೆಯ ಹಾಗೆ ಅಥವಾ ನಾವು ಉಪಯೋಗಿಸುವ ಯಂತ್ರದ ಹಾಗೆ ನಮ್ಮ ದೇಹವನ್ನು ಪರಿಗಣಿಸಬೇಕು. ಅದನ್ನು ಶುದ್ಧವಾಗಿ ಲಕ್ಷಣವಾಗಿ ಇಟ್ಟುಕೊಳ್ಳಬೇಕು. ಕ್ರಮಬದ್ಧ ವ್ಯಾಯಾಮ ಮಾಡಬೇಕು. ಯೋಗಾಸನ ಮಾಡಬೇಕು. ಒಳ್ಳೆಯ ಗಾಳಿ ಇರುವ ಕಡೆ ಸರಳವಾಗಿ ಸಾಧನೆ ಮಾಡಬೇಕು. ಆಧ್ಯಾತ್ಮಿಕ ಸಾಧಕರು ತಮ್ಮ ಆರೋಗ್ಯದ ಕಡೆ ನಿರ್ಲಕ್ಷಿಸುವುದು ಹೆಚ್ಚು. ಆಧ್ಯಾತ್ಮಿಕ ಸಾಧನೆಯ ಪ್ರಾರಂಭದ ದಿನಗಳಲ್ಲಿ ಅನೇಕ ಘರ್ಷಣೆಗಳಿಂದ ನಾವು ತೊಳಲುತ್ತಿರುವಾಗ ದೇಹಬಲ ಎಷ್ಟು ಉಪಯುಕ್ತ ಎಂಬುದು ನಮ್ಮ ಗಮನಕ್ಕೆ ಬರುವುದಿಲ್ಲ. ಆದರೆ ಮುಂದೆ ನಮ್ಮ ಆಧ್ಯಾತ್ಮಿಕ ಜೀವನ ಸುಗಮವಾಗಿ ದೀರ್ಘಕಾಲದ ಧ್ಯಾನಾಭ್ಯಾಸ ಸಾಧ್ಯವಾದಾಗ ತಿಳಿದುಬರುವುದು ದೇಹಾರೋಗ್ಯ ಒಂದು ದೊಡ್ಡ ಸಂಪತ್ತು ಎಂದು.

ಈ ದೇಹ ಭವಸಾಗರವನ್ನು ದಾಟಲು ಸಹಾಯಕವಾಗುವ ಒಂದು ದೋಣಿ ಇದ್ದಂತೆ. ಅದು ತೂತಾಗದಂತೆ ನೋಡಿಕೊಳ್ಳಬೇಕು. ಮಿತಿಮೀರಿ ಆಹಾರ ಸೇವನೆ ಮಾಡುವುದನ್ನು ನಿಲ್ಲಿಸಬೇಕು. ಮಿತ ಮತ್ತು ಪೌಷ್ಟಿಕ ಆಹಾರವನ್ನು ಸೇವಿಸಬೇಕು. ಎಲ್ಲಾ ರೀತಿಯ ಇಂದ್ರಿಯ ಸುಖದಿಂದ ದೂರವಿರಬೇಕು. ಮಿದುಳು ತಂಪಾಗಿ ಶಕ್ತಿಯುತವಾಗಿರಲು ಕಟ್ಟುನಿಟ್ಟಿನ ಬ್ರಹ್ಮಚರ್ಯ ಅವಶ್ಯಕ. ಯಾರು ಬ್ರಹ್ಮಚರ್ಯವನ್ನು ಪಾಲಿಸುವುದಿಲ್ಲವೋ ಅವರ ಮಿದುಳು ಬಹುಬೇಗನೇ ಬಿಡಿಯಾಗುವುದು. ಸಾಧನೆ ಹಾನಿಯಾಗುವುದು. ಬ್ರಹ್ಮಚರ್ಯವಿಲ್ಲದೇ ಸುದೀರ್ಘ ಧ್ಯಾನ ಸಾಧ್ಯವಾಗುವುದಿಲ್ಲ.

ಸರಿಯಾಗಿ ಪಳಗಿದ ಕುದುರೆ ಇದ್ದರೆ ಸವಾರಿ ಮಾಡುವುದು ಹೇಗೆ ಸಂತೋಷಕರವೋ ಹಾಗೆಯೆ ಆರೋಗ್ಯಕರವಾದ ಮತ್ತು ಸರಿಯಾಗಿ ಹತೋಟಿಯಲ್ಲಿರುವ ದೇಹದಲ್ಲಿ ವಾಸಿಸುವುದೇ ಒಂದು ಸಂತೋಷದ ಅನುಭವ ನೀಡುತ್ತದೆ. ಇಂದ್ರಿಯಾಸಕ್ತನಿಗೆ ಪರಿಶುದ್ಧ ದೇಹ ಎಂತಹ ಸುಖವನ್ನು ನೀಡುತ್ತದೆ ಎಂಬುದು ತಿಳಿಯುವುದಿಲ್ಲ. ಪ್ರಾರಂಭದಲ್ಲಿ ಆತ್ಮ ನಿಗ್ರಹ ಮಾನಸಿಕ ಬಿಗಿತ ವೇದನೆಗಳಿಗೆ ಕಾರಣವಾಗಬಹುದು. ಆದರೆ ಮುಂದೆ ಅದು ಸುಖ, ಶಾಂತಿ, ಸಂತೃಪ್ತಿಯ ಮೂಲವಾಗುವುದು. ಆರೋಗ್ಯಯುತ ಮತ್ತು ಬಲವಾದ ಮನಸ್ಸು ಬಹಳ ಮುಖ್ಯ. ದುರ್ಬಲ ಮನಸ್ಸಿನವರು ಉನ್ನತ ಆದರ್ಶಗಳನ್ನು ಒಪ್ಪಿಕೊಳ್ಳಲಾರರು. ಆಧ್ಯಾತ್ಮಿಕ ಜೀವನಕ್ಕೆ ಬೇಕಾಗುವ ಹೋರಾಟ ಮತ್ತು ತ್ಯಾಗಕ್ಕೆ ಅವರು ಭಯಪಡುವರು. ಹಾಗಾಗಿ ನಾವೆಲ್ಲರೂ ಇಚ್ಛಾಶಕ್ತಿಯನ್ನು ಬಲಪಡಿಸಿ ದೇಹಾರೋಗ್ಯವನ್ನು ಸಂರಕ್ಷಿಸುತ್ತಾ ಮನಃಪೂರ್ವಕ ಎಂದೂ ಅಳಿವಿಲ್ಲದ, ಸ್ಪರ್ಧೆಯೇ ಇಲ್ಲದ ಸಾಧನೆಯನ್ನು ಆಧ್ಯಾತ್ಮಿಕವಾಗಿ ಮಾಡಿ ಉತ್ತಮ ಸಾಧಕರಾಗೋಣ. ಆಧ್ಯಾತ್ಮಿಕತೆಯಿಂದ ಆತ್ಮಜ್ಞಾನವನ್ನು ಪಡೆಯೋಣ.

**ಶ್ರೀ ರಾಮಸ್ಮರಣಂ**
**ಪರಮಪೂಜ್ಯ ಶ್ರೀ ಮಾರುತಿ ಗುರೂಜಿಯವರು**
**ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಬಂಗಾರಮಕ್ಕಿ.**



**ಆಶಸ್ ಕಫ್ ಸಂಬಂಧಿಸಿದ ಕ್ರೀಡೆ – ಕ್ರಿಕೆಟ್**

# ಪರಾರ್ಥವೇ ಜೀವನದ ಸಾರ್ಥಕತೆ

ಸ್ಮರಂತಿ ಸುಕೃತಾನ್ಯೇವ ನ ವೈರಾಣಿ ಕೃತಾನ್ಯಪಿ।
ಸಂತಃ ಪರಾಥಃ ಕುರ್ವಾಣಃ ನಾವೇಕ್ಷಂತೆ ಪ್ರತಿಕ್ರಿಯಾ॥ ಮಹಾಭಾರತ

ಸಜ್ಜನರು ಒಳ್ಳೆಯದನ್ನು ಮಾತ್ರ ಸ್ಮರಿಸಿಕೊಳ್ಳುತ್ತಾರೆ. ವೈರತ್ವದ ನೆನಪು ಕೆಟ್ಟ ನೆನಪು. ಅದನ್ನು ಸ್ಮರಿಸದೆ ಪರೋಪಕಾರವನ್ನು ಮಾಡಬಯಸುವರೇ ಹೊರತು ಪ್ರತ್ಯುಪಕಾರದ ಬಯಕೆಯಿಂದಲ್ಲ.

ಸಮಾಜದಲ್ಲಿ ಅನೇಕರಿಗೆ ಉಪಕಾರ ಮಾಡುವ ಬುದ್ಧಿ ಇರುತ್ತದೆ. ಅದು ಕೆಲವರಿಗೆ, ನಮ್ಮ ಬಂಧು ಅಥವಾ ನಮಗೆ ಅತಿ ಪರಿಚಿತರಾದವರಿಗೆ ಮಾತ್ರ ಸೀಮಿತ. ಉಪಕಾರ ಮಾಡಿದರೂ ಅದು ಮುಂದಿನ ದಿನಗಳಲ್ಲಿ ನಮಗೆ ಏನು ಪ್ರಯೋಜನವಾದೀತು? ಆ ಪ್ರಯೋಜನದಿಂದ ನಾನು ನನ್ನ ಪರಿವಾರಕ್ಕೆ ಹೇಗೆ ಅನುಕೂಲವಾದೀತು ಎನ್ನುವ ಲೆಕ್ಕಾಚಾರದಲ್ಲಿ ಉಪಕಾರ ಮಾಡುವವರು ಇರುತ್ತಾರೆ.

'ಪ್ರಯೋಜನಮನುಶ್ಚಿಸ್ಯ ನ ಮಂದೋಪಿ ಪ್ರವರ್ತತೆ' ಎನ್ನುವಂತೆ, ಪ್ರಯೋಜನ ಪ್ರಾಪ್ತಿ ಇಲ್ಲದಿದ್ದರೆ ಮಂದಬುದ್ಧಿಯು ಕೂಡ ಕಾರ್ಯ ಪ್ರವರ್ತವಾಗುವುದಿಲ್ಲ.

ಇನ್ನೊಬ್ಬರ ಒಳಿತಿಗಾಗಿ ಉಪಕಾರ ಮಾಡುವುದೇ ಜೀವನದ ಧ್ಯೇಯ, ಹಿಂದೆ ಮಾಡಿದ ಅಪಕಾರವನ್ನು ಒಂದಿಷ್ಟು ಸ್ಮರಿಸದೆ ಕೆಟ್ಟ ನೆನಪುಗಳನ್ನೆಲ್ಲ ಬದಿಗೊತ್ತಿ ಅನ್ಯರ ಸಂತೋಷದಲ್ಲಿ ಸಂತಸ ಪಡುವ ಸಜ್ಜನರನ್ನು ಹೇಗೆ ಸ್ಮರಿಸೋಣ.

ಸಂತರಲ್ಲಿ, ಪಶು ಪಕ್ಷಿಗಳಲ್ಲಿ ಬದುಕಿನ ಸಾರ್ಥಕತೆಯನ್ನು ಕಾಣುತ್ತೇವೆ. ಪರರಿಗಾಗಿ ತನ್ನ ದುಡಿಮೆಯನ್ನು ನಿಸ್ವಾರ್ಥ ಬುದ್ಧಿಯಿಂದ ಮಾಡುತ್ತಾ ದೇಹತ್ಯಾಗ ಮಾಡಿ ಕೊನೆಯುಸಿರೆಳೆದ ಅನೇಕರ ಕಥೆ ಕಣ್ಮುಂದೆ ಬರುತ್ತದೆ. ಪರರಿಂದ ಪ್ರತ್ಯುಪಕಾರ ಬಯಸದೇ ಪರರಿಗಾಗಿ, ಪರರ ಹಿತಕ್ಕಾಗಿ ಬದುಕಿ ಮಹಾತ್ಮರಾದವರ ಜೀವನ, ಸಾರ್ಥಕ ಬದುಕಿನ ಸಂದೇಶವನ್ನು ಸಾರುತ್ತದೆ.

ತನ್ನ ಬದುಕಿನಲ್ಲಿರುವ ಸಂಪತ್ತನ್ನು, ತನ್ನಲ್ಲಿರುವ ಕೌಶಲ್ಯವನ್ನು, ಅಥವಾ ಬದುಕಿನ ಕಲೆಯನ್ನು ಫಲಾಪೇಕ್ಷೆಯಿಲ್ಲದೇ ಅನ್ಯರಿಗೆ ನೀಡಿ ಅದರಿಂದ ತೃಪ್ತಿ ಪಡುವ ಸಾನಂದದ ಬದುಕು ಸರ್ವರಿಂದಲೂ ಸಾಧ್ಯವೇ? ಷಡ್ ವೈರಿಗಳನ್ನು ದೂರವಿಟ್ಟು ಆಂತರಂಗಿಕ ಶುದ್ಧ ಸದ್ಭಾವನೆಯನ್ನು ತನ್ನದಾಗಿಸಿಕೊಳ್ಳುತ್ತಾ ತನ್ಮೂಲಕ ಪಡೆಯುವ ಆತ್ಮಾನಂದ ಅದು ಜೀವನದ ಅಂದ, ಎಂದೂ ಮಾಗದ ಚೆಂದವಲ್ಲವೇನು? ಫಲಾಪೇಕ್ಷೆಯಿಲ್ಲದ ಕಲಾಪ್ರಜ್ಞೆ ಜೀವನದ ಮಹೋನ್ನತಿಗೆ ಸೇತು ಅಲ್ಲವೇ?

ಜೇಷ್ಠ ಮಾಸವನ್ನು ಕಳೆದು ಮಳೆಯೊಂದಿಗೆ ಬಂದಿದೆ ಮಾಸ ಆಷಾಢ

ಭೋರ್ಗರೆವ ಮಳೆಯ ಸುರಿಸುತ ಆಷಾಢ ಬಂತು
ಹಸಿರ ಸೀರೆಯನ್ನುಟ್ಟು ಪ್ರಕೃತಿಯ ರಮ್ಯತೆಯ ತಂತು
ಹಬ್ಬಗಳ ಆರಂಭ ಆಷಾಢದಿ ಪ್ರಥಮ ಏಕಾದಶಿ ವ್ರತ
ಅಂತರಂಗದಿ, ಬಹಿರಂಗದಿ ಎಲ್ಲೆಲ್ಲೂ ಬದಲಾದ ಭೂಮಿಯ ಪಥ ॥

ಪ್ರತಿಫಲಾಪೇಕ್ಷೆ ಇಲ್ಲದ ಜೀವನದ ಅಂತರಂಗದ ಚಿಂತನೆ
ಅನ್ಯರ ಹೃದಯದಲ್ಲಿ ಮೂಡುವದು ಗೌರವದ ಭಾವನೆ
ಅಪಕಾರ ಮಾಡದೆ ಉಪಕರಿಸುವ ಮನದ ಇಂಗಿತ
ಆದರ್ಶ ತತ್ವೋನ್ನತಿಯಿಂದ ಆಗುವನು ಗೌರವಾನ್ವಿತ ॥

ಸಂಪಾದಕರು.

**ಆನೋ ಭದ್ರಾಃ ಕೃತವೋಯಂತು ವಿಶ್ವಥಃ** **ಸಂಗ್ರಹ ಲೇಖನ**

# ಮಹಾಯಜ್ಞ

ಮನುಷ್ಯನ ಬದುಕೆ ಒಂದು 'ಮಹಾಯಜ್ಞ'. ಸುಖದಲ್ಲಿ ಸೃಷ್ಟಿಯ ಬೀಜಾಂಕುರವಗುತ್ತದೆ. ಸುಖ–ಸಂತೋಷವೆಂಬ ಭ್ರಮೆಯ ಬೆನ್ನೇರಿ ಬಾಳು ಸಾಗುತ್ತದೆ. ಹುಟ್ಟು, ಬದುಕು, ಸಾವು, ಸೃಷ್ಠಿ, ಸ್ಥಿತಿ, ಲಯದ ಪ್ರತೀಕ. ಹುಟ್ಟು ಆಕಸ್ಮಿಕವಾದರೆ ಬಾಳು ಅನಿವಾರ್ಯ, ಸಾವು ನಿಶ್ಚಿತ.

ಯಾಗದ ಆರಂಭವೇ ಹುಟ್ಟು. ಪೂರ್ಣಾಹುತಿಯೇ ಸಾವು. ಯಜ್ಞಕ್ಕೆ ಅರ್ಪಿಸುವ ಆಹುತಿ ನಾವು ಬದುಕಿನಲ್ಲಿ ಮಾಡಲೇಬೇಕಾದ ಕರ್ತವ್ಯಗಳು. ಯಜ್ಞದಿಂದ ಉಂಟಾಗುವ ಹೊಗೆ, ಶಾಖವೇ ನಾವು ಎದುರಿಸಬೇಕಾದ ದುಃಖ, ದುಮ್ಮಾನಗಳು. ಯಜ್ಞದಿಂದ ಉಂಟಾಗುವ ಪರಿಮಳವೇ ನಮ್ಮ ಸಂತೋಷಭರಿತ, ವಾಸನಾಯುಕ್ತ ಬದುಕು. ಯಜ್ಞದಿಂದ ಪಡೆಯಬಹುದಾದ ತೇಜಸ್ಸು, ವರ್ಚಸ್ಸೇ ನಮ್ಮ ಬದುಕಿನ ನೆಮ್ಮದಿ, ಶಾಂತಿ.



ಕೆನಡಾ ಕಫ್ ಸಂಬಂಧಿಸಿದ ಕ್ರೀಡೆ – ಗಾಲ್ಫ್

ಯಶಸ್ವೀ ಬದುಕಿನ ಮಾರ್ಗ ಮಿಂಚು

ಲೇ ॥ ವನರಾಗ ಶರ್ಮಾ

# ಗೌರವಿಸು ಜೀವನವ

ನಮ್ಮ ಬದುಕು ಸಾರ್ಥಕ–ಸುಸಂಪನ್ನ ಎನಿಸಿಕೊಳ್ಳಬೇಕೆಂದರೆ ವಸುಧೈವ ಕುಟುಂಬಕಮ್ ಎನ್ನುವ ವಿಶ್ವ ಕುಟುಂಬೀ ಭಾವ ನಮ್ಮದಾಗಬೇಕು. ಅಂತಹ 'ಸಕಲ ಜೀವಾತ್ಮರಲಿ ಲೇಸನೆ ಕಾಣುವ'– ಉದಾತ್ತ ಗುಣ ನಮ್ಮದಾಗ ಬೇಕೆಂದರೆ ಆ ನೆಲೆಯಲ್ಲಿ ಬದುಕನ್ನು ನಾವು ಪ್ರೀತಿಸಬೇಕು, ಸಕಾರಾತ್ಮಕ ಚಿಂತನೆಯೊಂದಿಗೆ ಬಾಳಬೇಕು. ಅಂದಾಗ ಮಾತ್ರ ಬಾಳಿನಲ್ಲಿ ಯಶಸ್ಸನ್ನು ಕಾಣಬಹುದು, 'ಜೀವನಸಿದ್ಧಿ'ಯ ಆನಂದವನ್ನು ಅನುಭವಿಸಬಹುದು.

ನಮ್ಮ ನಾಡಿನ ಬಗ್ಗೆಯೇ ನಮಗೆ ಪ್ರೀತ್ಯಾಭಿಮಾನಗಳಿಲ್ಲದೇ ಹೋದರೆ, ನಮ್ಮ ಜನಗಳ ಬಗ್ಗೆ, ಅವರ ಬದುಕಿನ ಬಗ್ಗೆ ಒಂದು ಜನಪರ ಪ್ರಾಮಾಣಿಕ ಕಾಳಜಿ ಇಲ್ಲದೇ ಹೋದರೆ, ನಾವು ಒಂದರ್ಥದಲ್ಲಿ ಸಮಾಜಕ್ಕೆ ಹೊರೆಯೆಂದೇ ಹೇಳಬಹುದು. ಹಾಗೆಯೇ ಅವನ ಬದುಕನ್ನೇ ಅವನು 'ಲೇಸು ಭಾವ'ದಲ್ಲಿ ಗೌರವಿಸದೇ ಹೋದರೆ ಬಾಲ ಪಯಣದಲ್ಲಿ ಅವನ ಸಾಧನೆ ಶೂನ್ಯವೆನಿಸಿ, ಬಾಳುವಿಕೆ ಅರ್ಥ ಹೀನ ಎನಿಸುವುದು. ಮೇಲರಿಮೆ ಹೇಗೆ ಒಳಿತಲ್ಲವೊ ಹಾಗೆಯೇ ಕೀಳರಿಮೆಯೂ ಒಳಿತಲ್ಲ.

ಅವನನ್ನೇ ಅವನು ಗೌರವಿಸಿಕೊಳ್ಳದೇ ಹೋದರೆ ಅವನು ಬದುಕುವುದಾದರೂ ಎಂತು? ಅದು ನರಸತ್ತ ಬದುಕು ಅಥವಾ ಆತ ಬದುಕಿಯೂ ಬದುಕಿಲ್ಲದಂತೆ. ಅಲ್ಲದೇ ಇದರಲ್ಲೊಂದು ಸೂಕ್ಷ್ಮವನ್ನೂ ನೋಡೋಣ. ಅವನನ್ನು ಅವನು ಗೌರವಿಸಬೇಕು ಎಂದರೆ ಅಂತ ಜೀವನ ಅವನದಾಗಿರಬೇಕಲ್ಲವೆ? ಗೌರವಕ್ಕೆ ಪಾತ್ರವಲ್ಲದ, ತಿರಸ್ಕಾರಾರ್ಹ ಜೀವನ ಅವನದಾಗಿದ್ದರೆ, ಅವನ ಜೀವನವನ್ನು ಆತ ಗೌರವಿಸುವುದಾದರೂ ಹೇಗೆ? ಹಾಗೆಯೆ ಗೌರವಾರ್ಹವಲ್ಲದ ಇತರರ ಜೀವನವನ್ನೂ ಆತ ಆದರ್ಶವಾಗಿ ಸ್ವೀಕರಿಸುವುದು ಸಾಧ್ಯವಿಲ್ಲ. ಅಂದರೆ ನಿಂದನೀಯವಾದ ಜೀವನವೂ ಅವನದಾಗಬಾರದು ಎಂಬುದೂ ಇಲ್ಲಿ ಧ್ವನಿತವಾಗುತ್ತದೆ. ಅದಕ್ಕಾಗಿಯೇ 'ಉದ್ಧರೇದಾತ್ಮನಾತ್ಮಾನಂ ಆತ್ಮಾನಮಸಾದಯೇತ್' (ತನ್ನನ್ನು ತಾನೇ ಉದ್ಧರಿಸಿಕೊಳ್ಳಬೇಕು ಹಾಗೂ ತನ್ನನ್ನು ತಾನೂ ಹಳಿದು ಹೀಗಳೆದುಕೊಳ್ಳಬಾರದು) ಎಂದು ಗೀತೆಯೂ ಉದ್ಘೋಷಿಸುತ್ತದೆ.

ಇದು ನಮ್ಮ ಜಗತ್ತು, ಇದು ನಮ್ಮ ಬದುಕು ಎಂಬ ವಿಶ್ವ ಮಾನವ ಭಾವದಿಂದ, ಎಲ್ಲಿಯೂ ಭೇದವೆಣಿಸದೆ, ಇಡೀ ಜಗತ್ತು ನಿರ್ಮಲಾಂತಃಕರಣದಿಂದ ಪ್ರೀತಿಸುವುದು, ಗೌರವಿಸುವುದು, ಶ್ರೇಷ್ಠ ಮಾನವ ಧರ್ಮ. ಹಾಗೆ ಎತ್ತರಕ್ಕೆ ಏರಬೇಕೆಂದಾದರೆ ಮೊದಲು ಆತ ತನ್ನ ಜೀವನವನ್ನು ಗೌರವಿಸುವುದು, ಒಳಗಿನ ಚೇತನವನ್ನು ಆದರಿಸುವುದು, ಅದರ ಮೂಲ ಪ್ರೇರಣೆಯನ್ನು ಗಮನಿಸಿ ಗೌರವಿಸುವುದು ಬಹಳ ಮುಖ್ಯ. ಅದು ನಮ್ಮ ಆತ್ಮೋನ್ನತಿಗೆ ದಾರಿ ಮಾಡಿಕೊಡುತ್ತದೆ. ಇದನ್ನೇ ಡಿ.ವಿ.ಜಿ.ಯವರು ತುಂಬ ಸೊಗಸಾಗಿ ಹೀಗೆ ಹೇಳುತ್ತಾರೆ:

ಗೌರವಿಸು ಜೀವನವ ಗೌರವಿಸು ಚೇತನವ ।
ಆರದೊ ಜಗವೆಂದು ಭೇದವೆಣಿಸದಿರು ॥
ಹೋರುವುದು ಜೀವನ ಸಮೃದ್ಧಿಗೋಸುಗ ನಿನಗೆ ।
ದಾರಿಯಾತ್ಮೋನ್ನತಿಗೆ ಮಂಕುತಿಮ್ಮ ॥

ಇಂದಿನ ಸಂಕೀರ್ಣ ಬದುಕಿನಲ್ಲಿ ಸಹಜ ಪ್ರೀತಿಯಾಗಲಿ, ವ್ಯವಹಾರವಾಗಲಿ ಕಾಣಸಿಗುವುದು ದುಸ್ತರವೇ ಸರಿ. ಇವನಿಗೆ ಸಹಾಯ ಮಾಡಿದರೆ ತನಗೆ ಎಷ್ಟು ಲಾಭ ಸಿಗಬಹುದು? ಅವನ ಪರವಾಗಿ ಕೆಲಸಮಾಡಿದರೆ ನನಗೆ ಎಷ್ಟು ಹಾನಿಯಾದೀತು? ಹೀಗೆ ಕೂಡು ಕಳೆಯುವ ಲೆಕ್ಕಾಚಾರ ಹಾಕಿಯೇ ಒಬ್ಬ ಇನ್ನೊಬ್ಬನೊಂದಿಗೆ ವ್ಯವಹರಿಸುವ ಸಂದಿಗ್ಧ ಬದುಕಿನಲ್ಲಿ ನಾವು ಜಾರಿ ಹೋಗುತ್ತಿದ್ದೇವೆ. ಈಗಿನ ಪರಿಸ್ಥಿತಿಯಲ್ಲಿ ಒಂದು ಹಂತದವರೆಗೆ ಅದು ಅನಿವಾರ್ಯವೂ ಆಗಿದೆ ಎನ್ನಬಹುದು.

ರೌಡಿಗಳು ರಸ್ತೆಯಲ್ಲಿ ಯಾರನ್ನೊ ಕೊಲೆ ಮಾಡುತ್ತಿದ್ದಾರೆ ಎನ್ನಿ. ಅದನ್ನು ನೋಡುತ್ತಿದ್ದೂ ನಾವೂ ನಿಸ್ಸಾಹಯಕರಾಗಿ ಅಲ್ಲಿಂದ ಜಾಗ ಖಾಲಿ ಮಾಡುವುದು ಅನಿವಾರ್ಯವಿದೆ. ತಡೆಯ ಹೋದರೆ ನಾವೂ ಮರಣವನ್ನು ಆಹ್ವಾನಿಸಿದಂತೆಯೇ! ಮುಂದೆ ಪ್ರತ್ಯಕ್ಷ ಸಾಕ್ಷಿ ನಾವಾಗಿದ್ದರೂ ಪೋಲಿಸರ ಕೈಗೆ ಸಿಕ್ಕು ಬಿದ್ದರೆ ಯಾವುದೋ ಕೇಸಿನ ಸಲುವಾಗಿ ಅದು ಮುಗಿವ ತನಕವೂ ಕೋರ್ಟಿಗೆ ಹಾಜರಾಗುವ, ಸಾಕ್ಷಿ ಹೇಳದಂತೆ ಒತ್ತಡ, ಬೆದರಿಕೆ ಹಾಕುವ ಅಪರಾಧಿಗಳ ಕಡೆಯವರ ಕಿರುಕುಳ, ಪೋಲಿಸರ ಕಿರಿಕಿರಿ ಎಲ್ಲವನ್ನು ಅನುಭವಿಸುತ್ತ ನಮ್ಮ ದಿನಚರ್ಯೆಯನ್ನು ಸಾಗಿಸಬೇಕಾಗುತ್ತದೆ. ಸರಕಾರಿ ಅಥವಾ ಸಾವುಕಾರಿ ಉದ್ಯೋಗಿಗಳಾಗಿದ್ದರಂತೂ ಮುಗಿಯಿತು. ಅದನ್ನು ಕಳೆದುಕೊಳ್ಳುವ ಸಂಭವವೂ ಇರುತ್ತದೆ. ಕೋರ್ಟಿಗೊ ಪೋಲಿಸ್ ಠಾಣೆಗೊ ಹಾಜರಾಗುವುದೂ ಅಷ್ಟೇ ಕಷ್ಟವಿರುತ್ತದೆ. ಇಂತಹ ಸಂದರ್ಭಗಳಲ್ಲಿ ಅರಿಯೆನೆಂದರೆ ಅರವತ್ತು ಗುಣ ಎಂದು 'ನನಗೆ ಗೊತ್ತಿಲ್ಲ' ಎಂದು ಜಾರಿಕೊಳ್ಳುವುದೇ ಎಲ್ಲರ ಅನಿವಾರ್ಯತೆ ಆಗಿದೆ.

ಅನಾರೋಗ್ಯ ಪೀಡಿತನನ್ನು ನೀವು ಆಸ್ಪತ್ರೆಗೆ ಒಯ್ಯುತ್ತೀರಿ ಎಂದರೆ ದಿನವೂ ನಿಮಗೆ ಅದೇ ಒಂದು ಕೆಲಸವಾಗುತ್ತದೆ. ಅಲ್ಲದೆ ನಿಮ್ಮ ಕಾರಿನ ಖರ್ಚು ಎಷ್ಟಾಯಿತು? ಬೈಕಿನ ಪೆಟ್ರೋಲ್ ಖರ್ಚು ಎಷ್ಟು? ಎಂದು ಕೇಳಿ ಕೊಡುವವರ ಸಂಖ್ಯೆ ವಿರಳವೇ. ಕೆಲವೊಮ್ಮೆ ನೀವು ತೆಗೆದುಕೊಳ್ಳಲಿಕ್ಕೂ ಆಗದು. ನಿಮ್ಮ ಹತ್ತಿರಾದರೂ ಈ ಪರೋಪಕಾರ ಮಾಡಲು ಎಷ್ಟು ದಿನ ದುಡ್ಡು ಇರುತ್ತದೆ?



ಕೊಲಂಬೊ ಕಪ್ ಸಂಬಂಧಿಸಿದ ಕ್ರೀಡೆ – ಫುಟ್ಬಾಲ್

ರೋಗಿ ಅಸಹಾಯಕನೂ, ನಿರ್ಗತಿಕನೊ, ಬಡವನೊ ಆದರಂತೂ ಆಸ್ಪತ್ರೆಯ ಬಿಲ್ಲು ಕಟ್ಟುವ ಕೆಲಸವೂ ನಿಮ್ಮ ಕೊರಳಿಗೇ ಬೀಳುತ್ತದೆ. ಹೀಗೆ ಪ್ರತಿಯೊಂದು ಕ್ಷೇತ್ರದಲ್ಲೂ ಲಾಭ ನಷ್ಟದ ಸಂಗತಿಯನ್ನು ಬಿಟ್ಟು ವ್ಯವಹರಿಸಲಿಕ್ಕೂ ಸಾಧ್ಯವಿಲ್ಲ.

ಅಂದ ಮೇಲೆ 'ಆರದೋ ಜಗವೆಂದು ಭೇದವೆಣಿಸದೆ, ಬದುಕುವುದು ಹೇಗೆ? ಎಂಬುದೊಂದು ಯಕ್ಷ ಪ್ರಶ್ನೆಯಾಗಿ ನಿಲ್ಲುತ್ತದೆ. ಆದರೆ 'ಹೋರುವುದು ಜೀವನ ಸಮೃದ್ಧಿಗಾಗಿ–ದಾರಿಯಾತ್ಮೋನ್ನತಿಗೆ' ಆದ್ದರಿಂದ ಅಲ್ಲಿ ನಮ್ಮ ವಿವೇಚನೆಯನ್ನು ಸರಿಯಾದ ನಿಟ್ಟಿನಲ್ಲಿ ಬಳಸಿಕೊಂಡು, ಅಪಾಯವನ್ನು ಮೈಮೇಲೆ ಎಳೆದುಕೊಳ್ಳದೆ, ನಮ್ಮ ಸಾಧ್ಯತೆಯ ಸೀಮೆಯ ಒಳಗೆ ಪ್ರೀತಿ, ಕರುಣೆ ತ್ಯಾಗದ ವ್ಯವಹಾರ ಮಾಡಿದರೆ, ಎಲ್ಲವನ್ನು ದುಡ್ಡಿನಿಂದಲೇ ಅಳೆಯುವ ತೀರ ವ್ಯವಹಾರಸ್ಥನಾಗದೆ ಬದುಕಿದರೆ 'ನಾವು ನಮ್ಮವರು, ಅಸಾಹಯಕರ, ಅಬಲರ, ಸಂಕಷ್ಟದಲ್ಲಿ ಸಿಲುಕಿದವರ ಕಷ್ಟದಲ್ಲಿ ನೆರವಾಗುವ ಮಾನವೀಯ ಸದ್ಭಾವದೊಂದಿಗೆ ಬಾಳಿದರೆ ಅದು ಖಂಡಿತಕ್ಕೂ ಆತ್ಮೋನ್ನತಿಯ ದಾರಿಯೇ ಹೌದು. ಅದು ನಮಗೆ ಹೊರೆಯೂ ಆಗಲಿಕ್ಕಿಲ್ಲ: ಅಂತಹ ಮನೋಭಾವ, ಇಚ್ಛಾ ಶಕ್ತಿ ಬೇಕು. ಅದು 'ಜೀವನವನ್ನು ಗೌರವಿಸುವ, ಚೇತನವ ಗೌರವಿಸುವ..' ವ್ಯಕ್ತಿಯಿಂದ ಮಾತ್ರ ಸಾಧ್ಯವಾಗುತ್ತದೆ. ತನ್ನ ಬಗ್ಗೆಯೇ ಕೀಳರಿಮೆ ಉಳ್ಳವನಿಂದಾಗಲಿ, ಬೇರೆಯವರ ಬಗ್ಗೆ ಗೌರವ ಇಲ್ಲದವನಿಂದಾಗಲಿ, 'ಎಲ್ಲ ಚೇತನವನ್ನೂ ತನ್ನಂತೆ ಪರಿಭಾವಿಸದವನಿಂದಾಗಲಿ ಅದು ಸಾಧ್ಯವಿಲ್ಲ.

ಹೌದು ಇದೆಲ್ಲ ನಾವು ಹೇಳುತ್ತೇವೆ; ಕಾಲ ಕೆಟ್ಟು ಹೋಗಿದೆ, ಎಲ್ಲರೂ ತೀರ ವ್ಯಾಪಾರೀ ಮನೋಭಾವದಿಂದಲೇ ನೋಡುತ್ತಾರೆ' ಎಂದು ಹಾಗಾದರೆ ನಾವು ಎಷ್ಟು 'ಅದನ್ನು ಬಿಟ್ಟು ನೋಡಿದ್ದೇವೆ?' ಎಂದು ಆತ್ಮ ವಿಮರ್ಶೆ ಮಾಡಿಕೊಂಡರೆ ನಮ್ಮ ಕಾಲ ಬುಡದಿಂದಲೇ ಈ ವ್ಯಾಪಾರೀ ಬುದ್ಧಿ ಹರಿದು ಬರುತ್ತಿರುವುದನ್ನು ಕಾಣುತ್ತೇವೆ! ಆದ್ದರಿಂದ ಈಗ ನಮಗುಳಿದಿರುವ ಮಾರ್ಗವೆಂದರೆ ಮೊದಲು ನಾವು ಹೆಚ್ಚೆಚ್ಚು ಎಲ್ಲವೂ ಚಿನ್ಮಯನ ಕೊಡುಗೆ ಎಂದು ಸಕಲ ಚೇತನವ ಗೌರವಿಸುವ ದಿವ್ಯ ಮನೋಭಾವವನ್ನು ಬೆಳೆಸಿಕೊಳ್ಳುವುದಾಗಿದೆ. ಮನಸ್ಸಿದ್ದಲ್ಲಿ ಮಾರ್ಗವಿದೆ. ಆತ್ಮೋನ್ನತಿಯ ಆ ದಾರಿಯಲ್ಲಿ ಒಂದೊಂದು ಹೆಜ್ಜೆ ಮುಂದಿಡುವ ಪ್ರಯತ್ನ ಎಷ್ಟು ಬೇಗ ಆರಂಭವಾಗುತ್ತದೊ ಅಷ್ಟು ಒಳ್ಳೆಯದು.

ಚಿನ್ಮಯನ ಹೊರತಾಗಿ ಬೇರೊಂದು ಎಲ್ಲಿಹುದು?
ತನ್ಮತೆಯಿಂದೊಮ್ಮೆ ನೋಡುವುದು ಹದನು.
ನಿನ್ನರವು ನನ್ನಿರವು ಎಲ್ಲವೂ ಅವನಿರವು
ತನ್ನರಿವೆ ಪರಮಾರ್ಥ–ವನರಾಗ ಮಿತ್ರ ॥

ಎಂದು ಪರಿಭಾವಿಸಿ ಒಳಿತಿನ ಬೆಳೆ ಕೊಯ್ಯಲು ಮುಂದಾಗುವುದೇ 'ಕರ್ಮ ಬಂಧಾನುಸಾರಿಯಾಗಿ ಜನ್ಮ ತಳೆದ ಜೀವಿಯ ಜೀವನ ಧರ್ಮವೂ, ಮರ್ಮವೂ' ಹೌದು ಎನ್ನಬಹುದು.

ಮಧುರ ಪ್ರಕಾಶನ

ಲೇ॥ ಎಂ.ಎಲ್. ರಾಘವೇಂದ್ರರಾವ್

# ವಿಜ್ಯುವಲೈಜೇಷನ್ ಟೆಕ್ನಿಕ್

"ಊಹೆಗಳು ಕಲ್ಪನೆಗಳು ಜೀಕಲಿ ಮನಸ್ಸಿಗೆ–ಆರಾಮ,
ವಿರಾಮ ಕೊಡುವುದಷ್ಟೇ ಅಲ್ಲ... ಬದುಕಿಗೊಂದು ಹೊಸ
ಉತ್ಸಾಹ ಲವಲವಿಕೆಗೂ ಪೂರಕ ಎನಿಸುತ್ತದೆ"

ನಿಮ್ಮನ್ನು ಯಾರೂ ತೊಂದರೆ ಮಾಡದ ಕೊಠಡಿಯಲ್ಲಿ ರಿಲಾಕ್ಸ್ ಆಗುವುದಕ್ಕೆ ಸಿದ್ಧರಾಗಿ. ಕೊಠಡಿ ವಾತಾವರಣ ರಿಲ್ಯಾಕ್ಸೇಷನ್‌ಗೆ ಅನುಕೂಲವಾಗಿ ಇರಬೇಕು. ಕೊಠಡಿಯಲ್ಲಿ ಸೊಳ್ಳೆಗಳು ಇರದಂತಿರಬೇಕು. ಮಂದ ಬೆಳಕಿನ ದೀಪ ಇರಬೇಕು. ತಾಜಾತನದಿಂದ ಪೂರ್ತಿ ಗಾಳಿ ಬೀಸುತ್ತಿರಬೇಕು. ಕೇವಲ 20 ನಿಮಿಷ ದೂರವಾಣಿ ತೊಂದರೆ ಇರದಂತೆ ನೋಡಿಕೊಳ್ಳಬೇಕು. ನೀವು ಸಡಿಲಾದ ದೊಗಳೆ ಉಡುಪುಗಳನ್ನು ತೊಡಬೇಕು. ಬೆಲ್ಟ್ ಸಡಿಲ ಮಾಡಬೇಕು. ಕಣ್ಣುಗಳಿಗೆ ಕನ್ನಡಕ ಇರಬಾರದು. ಆನಂತರ ಹಾಸಿಗೆ ಮೇಲಾಗಲಿ ಅಥವಾ ಚಾಪೆ ಮೇಲಾಗಲಿ, ಈಜೀ ಚೇರಲ್ಲಾಗಲಿ ಅಂಗಾತ ಮಲಗಿ ಕಣ್ಣುಗಳನ್ನು ಮುಚ್ಚಿಕೊಳ್ಳಿ.

ಚೆನ್ನಾಗಿ ಉಸಿರು ಹೀರಿಕೊಳ್ಳಿ. ಕೆಲವು ಸೆಕೆಂಡ್‌ಗಳ ಕಾಲ ನಿಲ್ಲಿಸಿ, ಪುನಃ ನಿಧಾನವಾಗಿ ಉಸಿರು ಬಿಡಿ. ಉಸಿರು ಬಿಡುತ್ತಿದ್ದಾಗ ರಿಲ್ಯಾಕ್ ಆಗಿ ಆರಾಮವಾಗಿರುವ ಸುಖವನ್ನು ಆಸ್ವಾದಿಸಿರಿ. ಹೀಗೆ ಇಪ್ಪತ್ತು ಬಾರಿ ಉಸಿರು ಹೀರಿ ಬಿಡುತ್ತಲಿರಿ. ಮೊದಮೊದಲು ನಿಮಗೆ ಹಲವಾರು ರೀತಿಯ ಆಲೋಚನೆಗಳು ವೇಗದಿಂದ ಬಂದುಹೋಗುತ್ತಿರುತ್ತವೆ. ಕ್ರಮೇಣ ನೀವು ರಿಲಾಕ್ಸ್ ಆಗುತ್ತಿದ್ದಂತೆಲ್ಲ ಆಲೋಚನೆಗಳ ತೀವ್ರತೆ, ರಭಸ ಕಡಿಮೆಯಾಗುತ್ತದೆ.

ಈಗ ನಿಮಗೆ ಇಷ್ಟವಾದ ಒಂದು ಪ್ರಕೃತಿ ದೃಶ್ಯವನ್ನು ಊಹಿಸಬೇಕು. (ಊಹಿಸಿಕೊಳ್ಳಿ) ಉದಯಿಸುವ ಸೂರ್ಯನನ್ನು ಮನಸ್ಸಿನಲ್ಲಿ ಊಹಿಸಿಕೊಳ್ಳಿ. ಮೊದಮೊದಲು ನಿಮಗೆ ಸ್ಪಷ್ಟವಾಗಿ ಕಾಣಿಸದೆ ಹೋದರೂ... ಕ್ರಮೇಣ ನೀವು ಅಭಿವೃದ್ಧಿಪಡಿಸಬಲ್ಲಿರಿ. ಸೂರ್ಯ



ಕಾರ್ಬಿಟ್ಟನ್ ಕಫ್ ಸಂಬಂಧಿಸಿದ ಕ್ರೀಡೆ – ಟೇಬಲ್ ಟೆನ್ನಿಸ್ ( ಮಹಿಳೆಯರು )

ಉದಯಿಸುತ್ತಿದ್ದಾಗ ಆಗಿನ ವಾತಾವರಣವನ್ನು ಗಮನಿಸಿರಿ. ಬೆಟ್ಟಗಳು, ಗುಡ್ಡಗಳು, ಮರಗಿಡಗಳು, ಆಕಾಶ ಬೆಟ್ಟದ ಮೇಲಿನ ಭಾಗದಿಂದ ಸೂರ್ಯ ಉದಯಿಸುತ್ತಿದ್ದರೆ ಆ ಕಿರಣಗಳ ಅವುಗಳ ಬಣ್ಣವನ್ನು ಗಮನಿಸಿರಿ. ಮರಗಿಡಗಳ ಮೇಲಿನ ಹಕ್ಕಿಗಳ ಕಿಲಕಿಲ ಧ್ವನಿಗಳನ್ನು ಆಲಿಸಿರಿ. ವಿವಿಧ ತೆರನಾದ ಪಕ್ಷಿ ಹಕ್ಕಿಗಳು ಆಕಡೆ ಈಕಡೆ ರೆಕ್ಕೆಗಳನ್ನು ಬಿಚ್ಚಿಕೊಂಡು ಹಾರುತ್ತಿರುವಂತೆ... ಹೀಗೆ ಒಂದು ಹತ್ತು ನಿಮಿಷಗಳ ಕಾಲ ಆ ಸುಂದರವಾದ ದೃಶ್ಯಾವಳಿಯನ್ನು ಊಹಿಸಿರಿ.

ಹೀಗೆ ಊಹಿಸುತ್ತಿದ್ದಾಗ ನಿಮ್ಮಲ್ಲಿರುವ ಟೆನ್ಷನ್ ಕ್ರಮೇಣ ಹಂತ ಹಂತವಾಗಿ ಕಡಿಮೆಯಾಗುತ್ತಾ ಹೋಗುತ್ತದೆ. ನಿವು ಪ್ರಶಾಂತತೆಗೆ ಒಳಗಾಗುತ್ತೀರಿ. ಹಾಗೆ ಒಂದು ಹತ್ತು ನಿಮಿಷ ಆದ ನಂತರ ನಿಮ್ಮ ಮನಸ್ಸನ್ನು ನಿಮ್ಮ ಶರೀರ ಭಾಗದ ಮೇಲೆ ಕೇಂದ್ರೀಕರಿಸಿರಿ. ನಿಮ್ಮ ಶರೀರ ಒಳ್ಳೆ ಚೆನ್ನಾಗಿ ವಿಶ್ರಾಂತಿ ಸ್ಥಿತಿಯಲ್ಲಿದೆ ಅನ್ನೋ ವಿಷಯವನ್ನು ಗಮನಿಸಿರಿ. ಪ್ರತಿ ಭಾಗವನ್ನು ಮನಸ್ಸಿನಲ್ಲಿ ಗಮನಿಸಿರಿ; ಪ್ರತಿ ಭಾಗವನ್ನು ಗಮನಿಸುತ್ತಿದ್ದಾಗ ಆ ಭಾಗ ರಿಲಾಕ್ಸ್ ಆದಂತೆ ಭಾವನೆಗೆ–ಅನುಭವಕ್ಕೆ ಒಳಗಾಗಿರಿ. ಆಮೇಲೆ ಒಂದು ನಿಮಿಷಗಳ ಕಾಲ ಏನನ್ನೂ ಆಲೋಚಿಸದೆ ಪ್ರಶಾಂತವಾಗಿ ವಿಶ್ರಾಂತಿ ತೆಗೆದುಕೊಳ್ಳಿ.

ನಂತರ ಈ ಕೆಳಗಿನ ಸಲಹೆಗಳನ್ನು ನಿಮಗೆ ನೀವೇ ಅಂದುಕೊಳ್ಳಿ.

"ನಾನು ಚೆನ್ನಾಗಿ ರಿಲಾಕ್ಸ್ ಆದೆ"

"ಈಗ ನನಗೆ ದೈಹಿಕವಾಗಿ–ಮಾನಸಿಕವಾಗಿ ತುಂಬಾ ಹಿತವಾಗಿದೆ."

"ದಿನ ದಿನಕ್ಕೂ ಇನ್ನೂ ಪ್ರಶಾಂತತೆಯನ್ನು ಹೊಂದುತ್ತೇನೆ."

ಒಂದೊಂದು ಸಜೆಷನ್–ಸಲಹೆಗಳನ್ನು ಮೂರುಬಾರಿ ರಿಪೀಟ್ ಮಾಡಬೇಕು. ಆ ಬಳಿಕ 2–3 ನಿಮಿಷ ವಿಶ್ರಾಂತಿ ತೆಗೆದುಕೊಳ್ಳಬೇಕು. ಒಂದರಿಂದ ಹತ್ತು ಅಂಕೆಗಳನ್ನು ಲೆಕ್ಕ ಹಾಕಬೇಕು. ಕಣ್ಣು ಬಿಡಬಹುದು. ಆಮೇಲೆ ತಣ್ಣೀರಿನಿಂದ ಮುಖ ತೊಳೆದುಕೊಂಡು ತಾಜಾತನವನ್ನು ಅನುಭೂತಿಗೆ ಒಳಗಾಗಿ. ಹೀಗೆ ಕೆಲವು ದಿನಗಳಲ್ಲಿ ನೀವು ಮಾನಸಿಕವಾಗಿ ಒತ್ತಡದಿಂದ ಮುಕ್ತರಾಗುತ್ತೀರಿ.

## CREATING YOUR SPECIAL PLACE

ನೀವು ರಿಲಾಕ್ಸ್ ಆಗಬೇಕೆಂದುಕೊಂಡಾಗ ಒಂದು ಇಪ್ಪತ್ತು ನಿಮಿಷಗಳ ಕಾಲ ನೀವು ಮಾಡುತ್ತಿರುವ ಕೆಲಸಗಳನ್ನು ನಿಲ್ಲಿಸಿಬಿಡಿ. ರಿಲ್ಯಾಕ್ಸೇಷನ್ ಹೊಂದುವುದಕ್ಕೆ ನೀವು ಪ್ರತ್ಯೇಕವಾಗಿ ಒಂದು ಕೋಣೆಯನ್ನು ನೋಡಿಕೊಳ್ಳಿ ಅಥವಾ ನೀವಿರುವ ಕೋಣೆಯಲ್ಲೇ ರಿಲಾಕ್ಸ್ ಆಗುವುದಕ್ಕೆ ಉಪಕ್ರಮಿಸಿರಿ. ಈಜೀ ಚೇರಲ್ಲಾಗಲಿ ನಿಮಗೆ ಸೌಕರ್ಯವಾಗಿರುವ ಜಾಗದಲ್ಲಿ ರಿಲಾಕ್ಸ್ಡ್ ಭಂಗಿಯಲ್ಲಿ ಕೂತುಕೊಳ್ಳಿ ಇಲ್ಲವೇ ಮಲಗಿರಿ. ಕಣ್ಣುಗಳನ್ನು ಮುಚ್ಚಿಕೊಂಡು ಈ ಇಪ್ಪತ್ತು ನಿಮಿಷ ವ್ಯಾಯಮ ಮಾಡಬೇಕು.

ಈ ವ್ಯಾಯಾಮದಲ್ಲಿ ವಿಶೇಷತೆ ಏನೆಂದರೆ ನೀವು ನಿಮಗಿಷ್ಟವಾದ ನಿಮ್ಮ ವೈಯಕ್ತಿಕ ಜಾಗವನ್ನು ಊಹಿಸಿಕೊಳ್ಳುವುದು. ಕೆಲವರಿಗೆ ಉದ್ಯಾನವನ ಅಂದರೆ ಇಷ್ಟವಾದರೆ ಮತ್ತೆ ಕೆಲವರಿಗೆ ಸಮುದ್ರ ಪರಿಸರಗಳ ಪ್ರದೇಶ ಇಷ್ಟಪಡುತ್ತಾರೆ. ಇನ್ನೂ ಕೆಲವರು ಮಳೆ ಹನಿ ಹನಿಯಗಿ ಬೀಳುತ್ತಿದ್ದರೆ ಇಷ್ಟವಾಗುತ್ತದೆ. ಇನ್ನೂ ಕೆಲವರಿಗೆ ಇಷ್ಟವಾದ ಸಂಗೀತ ಕೇಳುತ್ತಾ ರಿಲಾಕ್ಸ್ ಆಗಬೇಕೆನಿಸುತ್ತದೆ. ಹೀಗೆ ನಿಮಗೆ ಯಾವುದು ಇಷ್ಟವೋ ಸ್ಪಷ್ಟವಾಗಿ ಮುಂಚಿತವಾಗಿ ನೀವು ಆ ಸ್ಥಳವನ್ನು ಗುರ್ತಿಸಿ ಪೂರ್ತಿಯಾಗಿ ಒಂದು ಊಹೆಯನ್ನು ರೂಪಿಸಿಕೊಳ್ಳಬೇಕು.

ಊದಾಹರಣೆಗೆ ಒಂದು ವಿಧಾನವನ್ನು ನಿಮಗೆ ವಿವರಿಸುತ್ತೇನೆ.

ಕಣ್ಣುಗಳನ್ನು ಮುಚ್ಚಿಕೊಳ್ಳಿ. ಒಂದು ಹತ್ತು ಬಾರಿ ಚೆನ್ನಾಗಿ ಉಸಿರು ಹೀರಿ ಬಿಡಿ. ಹಾಗೇ ಪ್ರಶಾಂತವಾಗಿರಿ. ನಿಮಗೆ ಆಲೋಚನೆಗಳಲ್ಲಿ ವ್ಯತ್ಯಾಸ ತಿಳಿದುಬರುತ್ತದೆ. ಅಂದರೆ ನಿಮ್ಮ ಆಲೋಚನೆಗಳು ಕ್ರಮೇಣ ಇಳಿಮುಖವಾಗುತ್ತಾ ಇರುತ್ತವೆ. ಇನ್ನು ನಿಮ್ಮ ಊಹೆಗಳು ಹೀಗೇ ಸಾಗುತ್ತಾ ಇರುತ್ತವೆ. ಸೊಗಸಾದ ಸೊಂಪಾದ ಹೊಲಗದ್ದೆಗಳು, ಆ ಫಸಲು ತುಂಬಿ ತೊನೆದಾಡುವ ಹೊಲಗಳಿಂದ ಬೀಸಿ ಬರುವ ಹಿತವಾದ ಗಾಳಿ. ದೂರದಲ್ಲಿ ಬೆಟ್ಟ ಗುಡ್ಡಗಳ ತಾಣ... ಆ ಗಿರಿಶಿಖರ ಮೇಲಿನಿಂದ ಬಿಳುಪು... ಕಪ್ಪು... ಕೆಂಪು ಬಣ್ಣಗಳಿಂದ ಕೂಡಿದ ದನಕರುಗಳು ಮನೆ ದಾರಿ ಹಿಡಿಯುತ್ತಾ ಕೆಳಗಿಳಿಯುತ್ತಿವೆ. ಸಾಯಂಕಾಲ ಸೂರ್ಯ ಅಸ್ತಮಿಸುತ್ತಿರುವ ಸಮಯ ಬೆಟ್ಟದ ಹಿಂಬದಿಯಿಂದ ಸೂರ್ಯ ಕಿರಣಗಳು ಬೀಳುತ್ತಿರುತ್ತವೆ. ಆಕಾಶ ತುಂಬಾ ಪ್ರಶಾಂತವಾಗಿರುತ್ತದೆ. ನೀವು ಆ ಹೊಲಗದ್ದೆಗಳ ಕಟ್ಟೆ ಮೇಲೆ ಅತ್ತ ಇತ್ತ ಓಡಾಡುತ್ತಾ ಇರುತ್ತೀರಿ. ತೊನೆದಾಡುವ ಪೈರು... ಮರಗಿಡಗಳನ್ನು ಗಮನಿಸುತ್ತಿರುತ್ತೀರಿ. ಹಕ್ಕಿಗಳ ಕಲರವ... ಸಣ್ಣ ಸಣ್ಣ ನೀರ ಕಾಲುವೆಗಳು; ಅವುಗಳ ಸಪ್ಪಳ... ನಿರಿನಲ್ಲಿ ಹಣ್ಣೆಲೆಗಳು ಕೊಚ್ಚಿಕೊಂಡು ಹೋಗುತ್ತಿರುತ್ತವೆ. ನೀವು ಆ ಸುಂದರವಾದ ಅನುಭೂತಿಯನ್ನು ಹೊಂದುತ್ತಿರುತ್ತೀರಿ.ಇನ್ನೂ ಚೆನ್ನಾಗಿ ಕತ್ತಲಾಗುತ್ತದೆ. ನೀವು ಹಿಂದಿರುಗಿ ಮನೆಗೆ ಬರುತ್ತೀರಿ. ಹೀಗೆ ಊಹಿಸಿಕೊಂಡು ಸ್ವಲ್ಪ ಹೊತ್ತು ಅದೇ ಪೊಜಿಷನ್‌ನಲ್ಲಿ ವಿಶ್ರಾಂತಿಯಿಂದ ಮಲಗಿರಿ. ನೀವು ಇನ್ನು ಏಳುಬೇಕು ಅನಿಸಿದಾಗ ನಿವು ಸೆಲ್ಫ್ ಸಜೆಷನ್ಸ್ ಕೊಟ್ಟುಕೊಳ್ಳಬೇಕು.

"ಈಗ ನಾನು ಚೆನ್ನಾಗಿ ರಿಲಾಕ್ಸ್ ಆಗಿದ್ದೇನೆ;"

"ನನ್ನ ಶರೀರಿ, ಮನಸ್ಸು, ತುಂಬಾ ಪ್ರಶಾಂತವಾಗಿ ಹಾಯಾಗಿದೆ. ನಾನು ಬೇಕೆನಿಸಿದಾಗ ಹೀಗೆ ಸುಲಭವಾಗಿ ರಿಲ್ಯಾಕ್ಸೇಷನ್ ಹೊಂದಬಲ್ಲೆ. ಸಜೆಷನ್ಸ್–ಸಲಹೆಗಳನ್ನು ಒಂದೊಂದನ್ನು ಮೂರು ಬಾರಿ ರಿಪೀಟ್ ಮಾಡಿ.

ಆನಂತರ ಎರಡು ಮೂರು ನಿಮಿಷಗಳ ಕಾಲ ವಿಶ್ರಾಂತಿ ತೆಗೆದುಕೊಂಡು 10 ರಿಂದ 1ರವರೆಗೆ ಅಂಕೆಗಳನ್ನು ಲೆಕ್ಕ ಹಾಕುತ್ತಾ ಮೆಲ್ಲನೆ ಕಣ್ಣುಗಳನ್ನು ತೆರೆಯಿರಿ. ತಣ್ಣನೆ ನೀರಿನಿಂದ ಮುಖ ತೊಳೆದುಕೊಂಡು ತಾಜಾತನದ ಲವಲವಿಕೆ ನಿಮ್ಮದಾಗಿಸಿಕೊಳ್ಳಿ.

ಪ್ರೋಗ್ರೆಸಿವ್ ಮಸ್ಕ್ಯುಲರ್ ರಿಲ್ಯಾಕ್ಸೇಷನ್

ಪ್ರೋಗ್ರೆಸಿವ್ ಮಸ್ಕ್ಯುಲರ್ ರಿಲ್ಯಾಕ್ಸೇಷನನ್ನು ಪ್ರಪ್ರಥಮವಾಗಿ ಕಂಡುಹಿಡಿದವರು ಎಡ್ಮಂಡ್ ಜಾಕೆಬ್‌ಸನ್. ಈತ 1929 ರಲ್ಲಿ ಪ್ರೋಗ್ರೆಸಿವ್ ರಿಲ್ಯಾಕ್ಸೇಷನ್ ಎಂಬ ಪುಸ್ತಕವನ್ನು ಬರೆದರು. ಹಾಗೇ ಈತ ಪ್ರತಿಪಾದಿಸಿದ ಪ್ರೋಗ್ರೆಸಿವ್ ಮಸ್ಕ್ಯುಲರ್ ರಿಲ್ಯಾಕ್ಸೇಷನ್ ಸಿದ್ಧಾಂತಕ್ಕೆ ಅನೇಕ ಪರಾಮರ್ಶೆಗಳು, ಪ್ರತಿಪಾದನೆಗಳು ನಡೆದವು. ಅಷ್ಟೇ ಅಲ್ಲದೇ ಈ ಲೇಖಕನ ಅನುಭವಗಳ ಮೇರೆಗೆ ಕೂಡಾ ಇನ್ನಷ್ಟು ಪರಾಮರ್ಶೆಗಳು ಮಾಡಲಾಯಿತು.

ಮೊದಲು ನೀವು ರಿಲ್ಯಾಕ್ಸ್ ಆಗಲಿರುವ ಕೋಣೆ ರಿಲ್ಯಾಕ್ಸೇಷನ್‌ಗೆ ಅನುಕೂಲವಾಗಿರಬೇಕು. ಅಂದರೆ ಒಳ್ಳೆ ಗಾಳಿ, ಬೆಳಕು (ಬೆಳಕು ಸ್ವಲ್ಪ ಕಡಿಮೆ ಇದ್ದರೂ ಪರವಾಗಿಲ್ಲ) ಶಬ್ಧ ಮಾಲಿನ್ಯ ಸ್ವಲ್ಪಾನೂ ಇರಬಾರದು. ಒಳಗಿನ ವಾತಾವರಣ ರಿಲ್ಯಾಕ್ಸೇಷನ್‌ಗೆ ಅನುಕೂಲವಾಗಿರಬೇಕು. ಕ್ಲೈಂಟನ್ನು ವಾಲು ಕುರ್ಚಿ ಇಲ್ಲದಿದ್ದರೆ ಚಾಪೆ ಮೇಲೆ ಕೂರಿಸಬಹುದು. ಅಥವಾ ಅನುಕೂಲವಾದ ನೆಟ್ಟಗಿರುವ ಕುರ್ಚಿ ಮೇಲೆ ಕೂರಿಸಿ ತಲೆ ಕೆಳಗೆ ದಿಂಬಿಡಬೇಕು. ದಿಂಬಿಗೆ ತಲೆ ಒರಗಿಸಿ ರಿಲ್ಯಾಕ್ಸ್ ಆಗುವುದಕ್ಕೆ ಸಾಧ್ಯವಿರಬೇಕು. ಮೊದಲಿನಲ್ಲಿ ಕ್ಲೈಂಟಗಳಿಗೆ ತುಂಬಾ ಟೆನ್ಷನ್ ಇರುತ್ತದೆ. ಬರಬರುತ್ತಾ ಅಭ್ಯಾಸದ ಮೂಲಕ ಟೆನ್ಷನ್ ಕಡಿಮೆಯಾಗುತ್ತದೆ. ದೈನಂದಿನ ಜೀವನದಲ್ಲಿ ರಿಲ್ಯಾಕ್ಸೇಷನ್ ಒಂದು ಭಾಗ ಆಗಬೇಕು. ಅದರ ಮುಖೇನ ನಮ್ಮಲ್ಲಿರುವ ಎಲ್ಲ ರೀತಿಯ ಟೆನ್ಷನ್ ಇಳಿಮುಖವಾಗುತ್ತವೆ. ಅವರು ತುಂಬಾ ಲವಲವಿಕೆಯಿಂದ ಕೆಲಸ ಮಾಡುವುದಕ್ಕೆ ಅವಕಾಶಗಳು ಸಿಗುತ್ತವೆ. ಎಲ್ಲ ವಿದ್ಯೆಗಳಲ್ಲಿ ಯಾವುದೇ ವಿಧವಾದ ತರಬೇತಿ ಅಗತ್ಯವೋ ರಿಲ್ಯಾಕ್ಸೇಷನ್ ಟೆಕ್ನಿಕ್ ಟ್ರೈನಿಂಗ್ ಅಷ್ಟೇ ಅಗತ್ಯ ಕೂಡಾ. ಇದಕ್ಕೆ ಸಹ ಹೋಮ್‌ವರ್ಕ ಇರುತ್ತದೆ.

ರಿಲ್ಯಾಕ್ಸೇಷನ್ ಟ್ರೈನಿಂಗ್‌ಗೆ ಸಿದ್ಧವಾಗುವುದಕ್ಕೆ ಮುಂಚೆ ಅವರು ಸಡಿಲವಾಗಿರುವ ಬಟ್ಟೆಗಳನ್ನಷ್ಟೇ ತೊಡಬೇಕು. ಸಂದರ್ಶನದ ಸಮಯದಲ್ಲಾಗಲೀ, ಅಥವಾ ಹೋಂವರ್ಕ ಮಾಡುವಾಗಾಗಲಿ ಇಲ್ಲವೇ ತರಬೇತಿ ಸಮಯದಲ್ಲಾಗಲಿ ಸಡಿಲಾದ ಬಟ್ಟಗಳನ್ನೇ ಕಡ್ಡಾಯವಾಗಿ ಧರಿಸಬೇಕು. ಕಣ್ಣುಗಳಿಗೆ ಕನ್ನಡಕವಾಗಲಿ, ಕಾಲುಗಳಿಗೆ ಚಪ್ಪಲಿಗಳಾಗಲಿ ಇರಕೂಡದು. ಸ್ನಾಯುಗಳ ರಿಲ್ಯಾಕ್ಸೇಷನ್ ಮಾಡುವ ಸಮಯದಲ್ಲಿ ಕೆಲವು ಸ್ನಾಯುಗಳ ಗ್ರೂಪ್‌ಗಳ ಮೇಲೆ ಕೇಂದ್ರೀಕರಿಸಬೇಕಾಗಿರುವುದಾಗಿ ಬೆರನ್‌ಸ್ಟೀನ್, ಬಾರ್ಕೋವಕ್ ವಿಜ್ಞಾನಿಗಳು ತಿಳಿಸಿದ್ದಾರೆ. ಇದರಲ್ಲಿ ಐದು ವಿಭಾಗಗಳು ಇರುತ್ತದೆ.

ಅವು–

1.ಪೋಕಸ್ ಅಂದರೆ ಮನಸ್ಸನ್ನು ಸ್ನಾಯುಗಳ ಸಮುದಾಯವನ್ನು ಬಿಗಿಹಿಡಿಯಬೇಕು.

2.ಟೆನ್ಷನ್ (ಬಿಗಿಹಿಡಿಯುವುದು) ಆ ಸ್ನಾಯುಗಳ ಸಮುದಾಯವನ್ನು ಬಿಗಿಯಾಗಿಡಬೇಕು ಸ್ಥಿತಿಯಲ್ಲಿ ಇಡಬೇಕು.

3.ಹೋಲ್ಡ್ ಬಿಗಿಹಿಡಿದ ಸ್ನಾಯುಗಳನ್ನು 5 ರಿಂದ 7 ಸೆಕೆಂಡ್‌ಗಳ ವರೆಗೆ ಒತ್ತಡವನ್ನು ಅದೇ ಸ್ಥಿತಿಯಲ್ಲಿ ಇಡಬೇಕು.

4.ಸ್ನಾಯುಗಳ ಸಮುದಾಯದ ಮೇಲೆ ಹೇರಿದ ಒತ್ತಡವನ್ನು ಮುಕ್ತಗೊಳಿಸುವುದು.

5.ರಿಲ್ಯಾಕ್ಸ್, ಟೆನ್ಷನನ್ನು ಕ್ರಮೇಣ ಬಿಡುಗಡೆ ಮಾಡುವುದು.

ಈ ಐದು ಭಾಗಗಳು ಒಂದು ಸೈಕಲ್‌ನಂಥಾವು. ಪ್ರತಿಸಾರಿ ಇವು ಜಾರಿಯಾಗಲೇಬೇಕು. ಹೋಂವರ್ಕನಲ್ಲಾಗಲೀ, ಟ್ರೈನಿಂಗ್ನಲ್ಲಾಗಲಿ ಇವು ಅವಶ್ಯಕ.

ನಿಮಗೆ ಇದುವರೆಗೆ ಪ್ರಾಥಮಿಕ ರಿಲ್ಯಾಕ್ಸೇಷನ್ ಟೆಕ್ನಿಕ್ ಕುರಿತಷ್ಟೇ ಹೇಳಿದ್ದೇನೆ. ನೀವು ಈ ಸೂಚನೆಗಳನ್ನು ಹಿಡಿದು ನಿಮ್ಮ ಬಲ ಮುಂಗೈ ಸ್ನಾಯುಗಳನ್ನು ನಂತರ ಕೈಸ್ನಾಯುಗಳನ್ನು ರಿಲ್ಯಾಕ್ಸ್ ಮಾಡಬೇಕು. ನೀವು ನಿಮ್ಮ ಕ್ಲೈಂಟಗೆ ತಕ್ಕ ವಿಧವಾಗಿ ಸಜೆಷನ್ಸ್‌ಗಳನ್ನು ಕೊಡುತ್ತಾ ಇರಬೇಕು. ನೀವು ಕೊಡುವ ಎಲ್ಲ ಸಲಹೆಗಳನ್ನು (ಸಜೆಷನ್ಸ್) ಮುಂಚೆನೇ ನಿಮ್ಮ ಬಲಗೈಗೆ ಕೊಡಬೇಕು. ನಂತರ ನಿಮ್ಮ ಎಡಗೈಗೆ ಕೊಡಬೇಕು; ಮಣಿಕಟ್ಟು (ಕೈ) ಹತ್ತಿರದಿಂದ ರಿಲ್ಯಾಕ್ಸೇಷನ್ ಟ್ರೈನಿಂಗ್‌ನ್ನು ಆರಂಭಿಸಬೇಕು. ಮಣಿಕಟ್ಟಿನಿಂದ ಮುಂಗೈ, ನಂತರ ಭುಜಗಳವರೆಗೆ ರಿಲ್ಯಾಕ್ಸೇಷನನ್ನು ಜಾರಿಗೊಳಿಸಬೇಕು. ಅಂತಿಮವಾಗಿ ನೀವು ಮಾಡುವ ಬಾಡೀ ರಿಲ್ಯಾಕ್ಸೇಷನ್ 30 ರಿಂದ 60 ಸೆಕೆಂಡ್‌ಗಳ ವರೆಗೆ ಮುಂದುವರಿಸಲಾಗುತ್ತದೆ. ಪ್ರತಿಸಾರಿ ನೀವು ಪೂರ್ತಿಯಾಗಿ ಟೆನ್ಷನ್ ರಿಲ್ಯಾಕ್ಸ್ ಆಗುತ್ತಿರುವಂತೆ ಭಾವ ಬರುತ್ತಲೇ ಇರುತ್ತದೆ. ಅದನ್ನು ನೀವು ಸ್ಪಷ್ಟವಾಗಿ ಅನುಭವಿಸಬೇಕು ಆರಂಭದಲ್ಲಿ ಇದರ ಅನುಭವ ನಿಮಗೆ ತುಂಬಾ ಆಹ್ಲಾದಕರವಾಗಿರುತ್ತದೆ. ಮೈ ಎಷ್ಟೋ ಹಗುರಾದಂತೆ ಎಂಬ ಭಾವನೆ ಉಂಟಾಗುತ್ತದೆ.; ಮತ್ತೆ ಮತ್ತೆ ಮಡುವುದು ಒಳ್ಳೆಯದು. ಪ್ರತಿ ಮಜಲ್ ಗ್ರೂಪ್–ತಂಡವನ್ನು ಎರಡು ಬಾರಿ ಟೆನ್ಷನ್‌ಗೆ ಒಡ್ಡಿ ರಿಲ್ಯಾಕ್ಸ್ ಮಾಡಬೇಕು. ಈ ರೀತಿಯಾಗಿ ಟೆನ್ಷನ್, ರಿಲ್ಯಾಕ್ಸ್ ಮಾಡುವುದಕ್ಕೆ 16 ಮಜಲ್ ಗ್ರೂಪುಗಳಿವೆ–ಮೊದಲು ಕೈಗಳನ್ನು ರಿಲ್ಯಾಕ್ಸ್ ಮಾಡಬೇಕು; ಅವು ಎಲ್ಲಕ್ಕಿಂತ ಸುಲಭ ಆದ್ದರಿಂದ ಎಲ್ಲಕ್ಕಿಂತ ರಿಲ್ಯಾಕ್ಸ್ ಮಾಡುವುದಕ್ಕೆ ಅತಿ ಕಷ್ಟವಾದದ್ದು ಮುಖ.



ಡರ್ಬಿ ಟ್ರೋಫಿ ಸಂಬಂಧಿಸಿದ ಕ್ರೀಡೆ – ಹಾರ್ಸರೇಸ್

ಶ್ರೀಧರ ಸ್ಮರಣೆ

ಲೇ॥ ಶ್ರೀ ಜಿ. ಟಿ ಶ್ರೀಧರಶರ್ಮ
9480473568

# ಶ್ರೀಧರರು ಒಮ್ಮೆ ಅಡುಗೆ ಮಾಡಿದ್ದರು ಆದರೆ ರಾಮನಾಮ ಸ್ಮರಣೆ ಬಿಟ್ಟಿರಲಿಲ್ಲ

ಶ್ರೀಧರಸ್ವಾಮಿಗಳು ತಮ್ಮ ಗುರು ಸಮರ್ಥರ ಪಾವನ ಕ್ಷೇತ್ರ ಸಜ್ಜನಗಡದಲ್ಲಿ ಸೇವೆ ಸಲ್ಲಿಸುತ್ತಿದ್ದರು. ತುಂಬ ಶ್ರದ್ಧೆಯಿಂದ ಮೈಲಿಗೆಯಾಗದಂತೆ ಮತ್ತೆ ಮತ್ತೆ ಕೆರೆಯಲ್ಲಿ ಸ್ನಾನ ಮಾಡುತ್ತಿದ್ದರು. ಹೀಗೆ ಸೇವೆ ಮಾಡುತ್ತಿರುವಾಗ ಮಠದ ಅಡುಗೆಯವರು ಒಮ್ಮೆ ಊರಿಗೆ ಹೋದರು. ಪರಿಸ್ಥಿತಿ ನಿಭಾಯಿಸುವುದು ಪಾರುಪತ್ತೇಗಾರರಿಗೆ ಸಮಸ್ಯೆಯಾಯಿತು. ಆಗ ಶ್ರೀಧರರು ತಾವಾಗಿಯೇ ಮುಂದೆ ಬಂದು ಪಾಕಶಾಲೆಯ ಸೇವೆಗೂ ಸಿದ್ಧರಾದರು. ಇತರೆಲ್ಲ ಸೇವೆಗಳಂತೆ ಇದೂ ಒಂದೆಂದು ಭಾವಿಸಿದರು. ತಮ್ಮ ಸ್ನಾನದ ವೇಳೆಯನ್ನೇ ಬದಲಿಸಿದರು. ಆದರೆ ವಹಿಸಿಕೊಂಡ ಜವಾಬ್ದಾರಿಯಿಂದ ಮಾತ್ರ ಹಿಂಜರಿಯಲಿಲ್ಲ. ಪ್ರತಿದಿನ ಐವತ್ತರಿಂದ ಒಂದು ನೂರು ಜನರಿಗೂ ಅಡುಗೆ ಮಾಡುತ್ತಿದ್ದರು. ತಮ್ಮ ಹಿಂದಿನ ಕೆಲಸಗಳಾದ ಕಾಕಡಾರತಿ, ನೀರು ತುಂಬುವುದು, ಗಂಧ ತೇಯುವುದು ಮುಂತಾದವುಗಳನ್ನೂ ಮರೆಯುತ್ತಿರಲಿಲ್ಲ. ಪ್ರತಿದಿನ ಅನ್ನ, ಹುಳಿ, ಜೋಳದರೊಟ್ಟಿ, ಚಟ್ನಿ ಮುಂತಾದವುಗಳನ್ನು ಸ್ವಲ್ಪವೂ ಬೇಸರಿಸದೆ ಸಿದ್ಧಪಡಿಸುತ್ತಿದ್ದರು. ಈ ಎಲ್ಲ ಕಾಲದಲ್ಲಿ ರಾಮನಾಮ ಸ್ಮರಣೆ ಮಾತ್ರ ಬಿಟ್ಟಿರುತ್ತಿರಲಿಲ್ಲ. ನೈವೇದ್ಯ, ಮಂಗಳಾರತಿ, ದೇವಮಂದಿರದ ಸೇವೆ ಇವುಗಳನ್ನೂ ಬಿಡಲಿಲ್ಲ. ಕೊನೆಗೆ ಮಧುಕರಿ ಪೂರೈಸಿ ತಾವು ಊಟಮಾಡುವಾಗ ಸಂಜೆ ನಾಲ್ಕು ಗಂಟೆ ಮೀರುತ್ತಿತ್ತು! ಮತ್ತೆ ಮಂದಿರದಲ್ಲಿ ಸಂಜೆಯ ಸೇವೆಗೆ ಸಿದ್ಧರಾಗಬೇಕಾಗುತ್ತಿತ್ತು. ಇಷ್ಟಾದರೂ ಶ್ರೀಧರರು ಒಂದು ಕ್ಷಣವೂ ಬೇಸರ ಪಡುತ್ತಿರಲಿಲ್ಲ. ಮಾಡುವ ಸೇವೆಯಲ್ಲಿ ಕಿಂಚಿತ್ತಾದರೂ ಅಶ್ರದ್ಧೆ ತೋರಲಿಲ್ಲ. ಅವರು ಸಿದ್ಧಪಡಿಸಿದ ಅಡುಗೆ ತುಂಬಾ ರುಚಿಯಾಗಿರುತ್ತಿತ್ತೆಂದು ಭಕ್ತರು ಹೇಳುತ್ತಿದ್ದರು. ಇದಕ್ಕೆ ಪ್ರಬಲವಾದ ಕಾರಣ ಶ್ರೀಧರರು ಸದಾ ರಾಮನಾಮ ಸ್ಮರಿಸುತ್ತಲೇ ಅಡುಗೆ ಮಾಡುತ್ತಿದ್ದರು. ಹಾಗಾಗಿ ಇಂಥ ದಿವ್ಯವಾದ ಊಟವನ್ನು ಮಾಡಿದವರು ಕೂಡ ಭಗವಂತನಲ್ಲಿ ಭಕ್ತಿಭಾವ ಹೊಂದುವವರೇ ಆಗಿರುತ್ತಿದ್ದರು. ಕೆಲಸಗಳ ನಡುವೆಯೂ ಭಗವನ್ನಾಮ ಸ್ಮರಣೆ ಸಾಧ್ಯ ಎಂಬುದನ್ನು ಅಂದು ಶ್ರೀಧರರು ಅನುಷ್ಠಾನಕ್ಕೆ ತರುವುದರ ಮೂಲಕ ಉಪದೇಶಿಸಿದ್ದರು! ಮಹಾತ್ಮರ ಮಹೋನ್ನತ ಆದರ್ಶಕ್ಕೆ ಇದೊಂದು ಅಪರೂಪದ ಉದಾಹರಣೆ. ಈ ಘಟನೆಯನ್ನು ನೆನಪು ಮಾಡಿಕೊಳ್ಳುವ ಶ್ರೀಧರರ ಹಿರಿಯ ಭಕ್ತರು ಈಗಲೂ ಹೀಗೆ ಸ್ಮರಿಸುತ್ತಾರೆ, " ಶ್ರೀಧರಸ್ವಾಮಿಗಳು ಒಮ್ಮೆ ಅಡುಗೆಯನ್ನು ಮಾಡಿದ್ದರು, ಆದರೆ ರಾಮನಾಮ ಸ್ಮರಣೆ ಬಿಟ್ಟಿರಲಿಲ್ಲ."

---

ಶ್ರೀರಾಮ ಕಥಾಸಾರ...

ಲೇ: ಬಸ್ತಿ ಸದಾನಂದ ಪೈ

# ಹನುಮಂತನ ಸಮುದ್ರಯಾನ

ಸೀತಾನ್ವೇಷಣೆಗಾಗಿ ಹನುಮಂತನು ನೂರು ಯೋಜನ ದೂರ ದಾಟುವ ಸಲುವಾಗಿ ತನ್ನ ದೇಹವನ್ನು ಬೆಳೆಸುತ್ತಾನೆ. ಮೇರು ಪರ್ವತದ ಮೇಲೆ ನಿಂತು, ಸೂರ್ಯನಿಗೂ, ದೇವೇಂದ್ರನಿಗೂ, ವಾಯು ದೇವನಿಗೂ, ಬ್ರಹ್ಮನಿಗೂ ನಮಸ್ಕರಿಸುತ್ತಾನೆ. ರಾಮಕಾರ್ಯಕ್ಕಾಗಿ ಪರ್ವಕಾಲದಲ್ಲಿ ಸಮುದ್ರ ಉಬ್ಬುವಂತೆ ಉಬ್ಬುತ್ತಾನೆ. ಲಂಕೆಗೆ ಅಭಿಮುಖನಾಗಿ ತನ್ನ ತೋಳುಗಳಿಂದಲೂ, ಪಾದಗಳಿಂದಲೂ ಅಪ್ಪಳಿಸುತ್ತಾನೆ. ಹನುಮಂತನಿಂದ ಹೊಡೆಯಲ್ಪಟ್ಟ ಗಿರಿ ಕ್ಷಣಕಾಲ ಅದುರುತ್ತದೆ. ಬಲಾಢ್ಯನಾದ ಆತನಿಂದ ಪೀಡಿಸಲ್ಪಟ್ಟ ಮಹೇಂದ್ರ ಪರ್ವತದಿಂದ ಚಿನ್ನ, ಬೆಳ್ಳಿ, ಕಲ್ಲಿದ್ದಲ ಪದರಗಳು ಹೊರಸೂಸಿದವು. ವಾಯುವು ಹೊಗೆ ರಾಶಿಯನ್ನು ಬಿಸುಡುವಂತೆ ಬೆಟ್ಟವು ಮಣಿ ಶಿಲೆಗಳಿಂದ ಕೂಡಿದ್ದ ಬಂಡೆಗಳನ್ನು ಸಡಲಿಸಿತು. ಸ್ವಸ್ತಿಕದ ಗುರುತುಗಳುಳ್ಳ ಸರ್ಪಗಳು ವಿಸ್ತಾರವಾದ ತಮ್ಮ ಹೆಡೆಗಳಿಂದ ಅಗ್ನಿಯನ್ನು ಕಾರುತ್ತಾ ತಮ್ಮ ಹಲ್ಲುಗಳಿಂದ ಕಚ್ಚಲ್ಪಟ್ಟ ದೊಡ್ಡ ಶಿಲೆಗಳು ಬೆಂಕಿ ಹತ್ತಕೊಂಡು ಉರಿಯುತ್ತಾ ಸಾವಿರ ಪಾಲಾಗಿ ಸೀಳಿ ಹೋಗುತ್ತವೆ.

ರಾಮನು ಬಿಟ್ಟ ವಾಯುವೇಗವುಳ್ಳ ಬಾಣದಂತೆ ರಾವಣನು ಆಳುತ್ತಿರುವ ಲಂಕೆಗೆ ಹೋಗುವೆನು. ಅಲ್ಲಿ ಜನಕ ಸುತೆಯನ್ನು ಕಾಣದಿದ್ದರೆ ಅದೇ ವೇಗದಿಂದ ಸ್ವರ್ಗಲೋಕಕ್ಕೆ ಹೋಗುವೆನು. ಅಲ್ಲಿಯೂ ಸೀತೆಯನ್ನು ಕಾಣದಿದ್ದರೆ, ರಾಕ್ಷಸ ರಾಜನಾದ ರಾವಣನ್ನೇ ಕಟ್ಟಿ ತರುವೆನು. ಇಲ್ಲವಾದಲ್ಲಿ ರಾವಣ ಸಹಿತ ಲಂಕೆಯನ್ನೇ ಕಿತ್ತು ತರುತ್ತೇನೆ ಎಂದು ವಾನರರಿಗೆ ತಿಳಿಸಿ ವೇಗದಿಂದ ಮೇಲಕ್ಕೆ ಹಾರಿ ನಿರ್ಮಲವಾದ ಆಕಾಶದಲ್ಲಿ ಮುಂದುವರೆಯುತ್ತಾನೆ.

ಕಪಿ ಶ್ರೇಷ್ಠನು ಹಾರುತ್ತಿರಲು ಸಮುದ್ರರಾಜನು ಆತನಿಗೆ ಸಹಾಯ ಮಾಡಲು ಇಚ್ಛಿಸುತ್ತಾನೆ. ನಾನು ಇಕ್ವಾಕು ನಾಥನಾತ ಸಗರನಿಂದ ಬೆಳೆದವನು. ಇಕ್ವಾಕು ವಂಶದವನ ಮಂತ್ರಿಯಾದ ಹನುಮಂತನು ಆಯಾಸಪಡಕೂಡದು. ನಾನು ಸಹಾಯ ಮಾಡದಿದ್ದರೆ ಆಡಿಕೊಳ್ಳುವವರ ಬಾಯಿಗೆ ಆಹಾರವಾಗುತ್ತೇನೆ. ಕಪಿಯು ನನ್ನಲ್ಲಿ ವಿಶ್ರಾಂತಿ ಪಡೆದು, ಮಾರ್ಗವನ್ನು ಸುಖವಾಗಿ ದಾಟಲಿ ಎಂದುಕೊಂಡು ಸುವರ್ಣಮಯವಾದ ಗಿರಿಶ್ರೇಷ್ಠ "ಮೈನಾಕ"ನಿಗೆ ನೀನು ರಾಕ್ಷಸ ಸಮೂಹಗಳಿಗೂ ಪಾತಾಳದಲ್ಲಿ ಜೀವಿಸುವವರಿಗೂ

ದ್ವಾರಪಾಲಕನಂತೆ ನನ್ನಲ್ಲಿ ಬಚ್ಚಿಟ್ಟುಕೊಂಡಿರುವೆ. ಅವರು ಮತ್ತೆ ಪರಾಕ್ರಮ ಹುಟ್ಟಿ ಮೇಲಕ್ಕೆ ಬಾರದಂತೆ ತಡೆಯಲು ದೇವೆಂದ್ರನು ನಿನ್ನನ್ನು ಇಲ್ಲಿ ಇಟ್ಟಿರುತ್ತಾನೆ. ನಿನಗೆ ತಲೆಕೆಳಗಾಗಿಯೂ, ಮೇಲಕ್ಕೂ ಕೆಳಕ್ಕೂ ಬೆಳೆಯುವ ಶಕ್ತಿಯಿದೆ. ರಾಮಕಾರ್ಯಕ್ಕಾಗಿ ಹನುಮಂತನು ಹಾರುತ್ತಾ ಅಂತರಿಕ್ಷದಲ್ಲಿ ನಿನ್ನ ಮೇಲೆ ಬರುತ್ತಿದ್ದಾನೆ. ಇಕ್ಷ್ವಾಕು ವಂಶದವರ ಸೇವೆ ಮಾಡುವ ಅವನಿಗೆ ನಾನು ಸಹಾಯ ಮಾಡಬೇಕು. ಅತಿಥಿ ಸತ್ಕಾರಕ್ಕೆ ಅವಕಾಶವಾಗುವಂತೆ ನಮಗೆ ಸಹಾಯ ಮಾಡು. ನೀರಿನಿಂದ ಮೇಲಕ್ಕೆ ಎದ್ದೇಳು. ಹನುಮಂತನು ನಿನ್ನ ಶಿಖರದ ಮೇಲೆ ವಿಶ್ರಮಿಸಿ ಆಯಾಸ ನೀಗಿಕೊಂಡು ಮಿಕ್ಕುದನ್ನು ದಾಟಲಿ. ಎಂದು ಆಜ್ಞಾಪಿಸುತ್ತಾನೆ.

ಸುವರ್ಣವನ್ನು ನಾಭಿಯಲ್ಲಿ ಪಡೆದಿರುವ "ಮೈನಾಕ"ನು ಸಮುದ್ರರಾಜನ ಮಾತಿನಂತೆ ನೀರಿನಿಂದ ಮೇಲಕ್ಕೆ ತನ್ನ ಶಿಖರವನ್ನು ತೋರಿಸಿದನು. ಸೂರ್ಯೋದಯದ ಪ್ರಭೆಯನ್ನು ಹೋಲುತ್ತಾ, ಆಕಾಶವನ್ನು ಚುಚ್ಚುವಂತಿರುವ ಶಿಖರಗಳಿಂದ ಆಕಾಶವು ಬಂಗಾರದ ಕಾಂತಿಯಿಂದ ಕೂಡಿದ ಆಯುಧದಂತೆ ಶಿಖರಗಳು ಹೊಳೆದವು.

ಸಮುದ್ರ ಮಧ್ಯದಲ್ಲಿ ಇದ್ದಕ್ಕಿದ್ದಂತೆ ಮೇಲೆದ್ದು ನಿಂತ ಮೈನಾಕನನ್ನು ಇದು ಯಾವುದೋ ವಿಘ್ನ ಎಂದುಕೊಂಡು ಹನುಮಂತನು ತನ್ನ ಎದೆಯಿಂದ ಹೊಡೆದು ಕೆಡುವುತ್ತಾನೆ. ಕಪಿಶ್ರೇಷ್ಠನ ವೇಗವನ್ನು ಕಂಡು ಮನಸಾ ವಾಚಾ ಆನಂದವನ್ನು ಪ್ರಕಟಿಸುತ್ತಾ ಆಕಾಶದಲ್ಲಿ ಎದ್ದು ನಿಂತಿದ್ದ ಪರ್ವತವು ಮನುಷ್ಯ ರೂಪವನ್ನು ತಾಳುತ್ತದೆ.

ಎಲೈ ವಾನರೋತ್ತಮನೇ ಬಲು ಕಷ್ಟಸಾಧ್ಯವಾದ ಕೆಲಸವನ್ನು ಮಾಡುತ್ತಿರುವೆ. ನನ್ನ ಶಿಖರಗಳಲ್ಲಿ ಇಳಿದು ವಿಶ್ರಮಿಸಿಕೋ. ಸಮುದ್ರ ರಾಜನು ಪಡೆದ ಉಪಕಾರಕ್ಕೆ ಪ್ರತ್ಯುಪಕಾರ ಮಾಡಲು ಇಚ್ಛಿಸಿ ನನಗೆ ಆಜ್ಞೆ ಮಾಡಿದ್ದಾನೆ. ನಮಗೂ ಸಹ ನಿನ್ನೊಡನೆ ಸಂಬಂಧವಿದೆ. ನಿನ್ನನ್ನು ಗೌರವಿಸಿದರೆ ವಾಯುವನ್ನು ಗೌರವಿಸಿದಂತೆ ಆದ್ದರಿಂದ ನೀನು ನನ್ನಿಂದ ಪೂಜನೀಯ ಎನ್ನುತ್ತಾನೆ.

ನಿನ್ನ ಮಾತು ಕೇಳಿ ನಾನು ಸಂತುಷ್ಟನಾದೆನು. ನೀನು ಆತಿಥ್ಯ ಮಾಡಿದ್ದಾಯಿತು. ಕೋಪಿಸಿಕೊಳ್ಳಬೇಡ. ಹಗಲು ಕಳೆದು ಹೋಗುತ್ತಿದೆ. ನಾನು ತ್ವರೆಯಿಂದ ಮುಂದೆ ಸಾಗಬೇಕಾಗಿದೆ. ಮಾರ್ಗಮಧ್ಯದಲ್ಲಿ ನಿಲ್ಲುವುದಿಲ್ಲವೆಂದು ಭಾಷೆ ಕೊಟ್ಟಿರುವೆನು ಎಂದು ಕೈಯಿಂದಲೇ ಬೆಟ್ಟವನ್ನು ಸವರಿ ಮುಂದಕ್ಕೆ ಹಾರುತ್ತಾನೆ.

ಮೈನಾಕನ ಕಾರ್ಯಕ್ಕೆ ದೇವತೆಗಳೂ ದೇವೇಂದ್ರನೂ ಸಂತುಷ್ಟರಾದರು. ಇಂದ್ರನು ತಾನಾಗಿಯೇ ಪರ್ವತ ಶ್ರೇಷ್ಠನಾದ 'ಸುನಾಭ'ನಿಗೆ ನಿನ್ನನ್ನು ಕಂಡು ಸಂತುಷ್ಟಗೊಂಡಿದ್ದೇನೆ. 'ನಿನಗೆ ಇಷ್ಟ ಬಂದಂತೆ ಇರು' ಎಂದು ಅಭಯ ಕೊಡುತ್ತಾನೆ.

ಆಕಾಶ ಮಾರ್ಗದಲ್ಲಿ ಹೋಗುತ್ತಿರುವ ಮಾರುತ ಪುತ್ರನನ್ನು ನೋಡುತ್ತಾ ದೇವತೆಗಳು, ಗಂಧರ್ವ ಸಿದ್ಧ ಪರಮರ್ಷಿಗಳೊಡನೆ ಸೂರ್ಯಕಾಂತಿಯನ್ನು ಹೋಲುವ ನಾಗಮಾತೆಯಾದ 'ಸುರಸೆ'ಗೆ ನೀನು ಭಯಂಕರವಾದ ಕೋರೆಹಲ್ಲುಗಳಿಂದಲೂ, ಹಚ್ಚನೆಯ ಕಣ್ಣಿನ ಮುಖದಿಂದಲೂ ಆಕಾಶದಂತಿರುವ ಪರ್ವತಾಕಾರದ ರೂಪವನ್ನು ಧರಿಸಿ ಕೊಂಚಕಾಲ ವಿಘ್ನವನ್ನು ಮಾಡು. ಆತನು ನಿನ್ನನ್ನು ಉಪಾಯದಿಂದ ಗೆಲ್ಲುವನೋ, ದುಃಖಪಡುವನೋ, ಆತನ ಬಲವನ್ನು ಸಾಮರ್ಥ್ಯವನ್ನು ತಿಳಿಯಬಯಸುತ್ತೇವೆ ಎನ್ನುತ್ತಾರೆ.

'ಸುರಸೆ' ಸಮುದ್ರ ಮಧ್ಯದಲ್ಲಿ ಭಯಂಕರವಾದ ಕೆಟ್ಟ ರಾಕ್ಷಸ ರೂಪ ತಾಳಿ, ಎಲೈ ವಾನರೋತ್ತಮನೇ, ದೇವತೆಗಳು ನಿನ್ನನ್ನು ನನಗೆ ಆಹಾರವಾಗಿ ಕಳುಹಿಸಿದ್ದಾರೆ. ನಾನು ಈಗಲೇ ನಿನ್ನನ್ನು ಭಕ್ಷಿಸುವೆನು. ಈ ಬಾಯಿಯೊಳಗೆ ಹೋಗು ಎಂದು ಬಾಯಿ ತೆರೆಯುತ್ತಾಳೆ. ಆಕೆಯ ಮಾತು ಕೇಳಿ ಹನುಮಂತನು ಸಂತೋಷದಿಂದ ಕೈ ಜಾಡಿಸಿಕೊಂಡು, ನಾನು ರಾಮನ ಕಾರ್ಯಕ್ಕಾಗಿ ಹೋಗುತ್ತಿದ್ದೇನೆ. ಸೀತೆಯನ್ನು ಕಂಡು ರಾಮನಿಗೆ ತಿಳಿಸಿ ನಿನ್ನ ಬಾಯಿಯ ಬಳಿಗೆ ಬರುತ್ತೇನೆ. ಇದು ಸತ್ಯವೆಂದು ಪ್ರಮಾಣ ಮಾಡುವೆನು ಎನ್ನುತ್ತಾನೆ. ಸುರಸೆ ನನ್ನನ್ನು ದಾಟಿ ಹೋಗಲಾಗದು, ಇದು ನನಗೆ ಯಾವುದೋ ವರ ಎಂದು ಅಟ್ಟಗಟ್ಟುತ್ತಾಳೆ.

ಮುಂದೆ ನುಗ್ಗುತ್ತಿರುವ ಆತನ ಬಲವನ್ನು ತಿಳಿಯಲೋಸುಗ, ನನ್ನ ಬಾಯನ್ನು ಹೊಕ್ಕು ಹೋಗಬೇಕು, ಇದು ಬ್ರಹ್ಮ ಕೊಟ್ಟ ವರ ಎಂದು ತನ್ನ ವಿಸ್ತಾರವಾದ ಬಾಯನ್ನು ಅಗಲಿಸುತ್ತಾಳೆ. ಅದನ್ನು ಕೇಳಿ ಕಪಿಶ್ರೇಷ್ಠನು ಕುಪಿತನಾಗಿ ನನ್ನನ್ನು ಹಿಡಿಯುವಂತ ಬಾಯನ್ನು ಮಾಡು ಎಂದು ಬೆಳೆಯುತ್ತಾನೆ. ಸುರಸೆಯೂ ಬೆಳೆಯುತ್ತಾ ಹೋಗುತ್ತಾಳೆ. 'ಸುರಸೆ' ನೂರು ಯೋಜನ ಬಾಯಿ ಮಾಡಿದಾಗ ಹನುಮಂತನು ತನ್ನ ಶರೀರವನ್ನು ತತಕ್ಷಣವೇ ಕುಗ್ಗಿಸಿ ಹೆಬ್ಬೆಟ್ಟಿನ ಗಾತ್ರಕ್ಕೆ ತಂದುಕೊಂಡು ಬಾಯೊಳಗೆ ಹೋಗಿ ಹೊರಬರುತ್ತಾನೆ. ನಂತರ ನಿನ್ನ ವರ ಸತ್ಯವಾಗಲಿ. ನಾನಿನ್ನು ಸೀತೆ ಇರುವಲ್ಲಿ ಹೋಗುತ್ತೇನೆ ಎಂದು ಕೈ ಮುಗಿಯುತ್ತಾನೆ. ಸುರಸೆ ತನ್ನ ನಿಜ ರೂಪ ಧರಿಸಿ, ನಿನಗೆ ಇಷ್ಟಬಂದಂತೆ ಹೋಗು. ಸೀತೆಯನ್ನು ರಾಮನೊಡನೆ ಸೇರಿಸು ಎಂದು ಕಳುಹಿಸುತ್ತಾಳೆ.

ಇದನ್ನು ಕಂಡು ದೇವತೆಗಳು ಭಲೆ.. ಭಲೆ.. ಎಂದು ಆತನನ್ನು ಕೊಂಡಾಡಿದರು.

ಸಮುದ್ರದ ಮೇಲೆ ಹಾರಿ ಬರುತ್ತಿದ್ದ ಹನುಮಂತನನ್ನು ಕಂಡು 'ಸಿಂಹಿಕೆ' ಎಂಬ ರಾಕ್ಷಸಿಯು ಬಹಳ ಕಾಲದ ನಂತರ ತನಗೆ ಆಹಾರ ಸಿಕ್ಕಿತು ಎಂದು ಆತನನ್ನು ತಡೆಯುತ್ತಾಳೆ. ಕಪಿರಾಜನಾದ ಸುಗ್ರೀವನು ಸಮುದ್ರ ಮಧ್ಯದಲ್ಲಿ ನೆರಳನ್ನು ಹಿಡಿಯುವ ಮಹಾ ಪರಾಕ್ರಮಿಯಾದ ಜಂತು ಇರುವುದನ್ನು ಹೇಳಿದ್ದು ನೆನಪಾಗುತ್ತದೆ. ಆಕೆಯ ನಿಜ ಸ್ವರೂಪ ತಿಳಿದು ತನ್ನ ಶರೀರವನ್ನು ಬೆಳೆಸುತ್ತಾನೆ. ಆಗ ಆಕೆ ಪಾತಾಳ ತನಕ ತನ್ನ ಭಾಯಿಯನ್ನು ಅಗಲಿಸುತ್ತಾಳೆ. ಹನುಮಂತನು ಅಗಲಿಸಿದ ಆಕೆಯ ಬಾಯಿಯನ್ನು ಮರ್ಮಸ್ಥಳಗಳನ್ನು ನೋಡಿಕೊಂಡು ತನ್ನ ಶರೀರವನ್ನು ಕುಗ್ಗಿಸಿಕೊಂಡು ಆಕೆಯ ಬಾಯಿಯಲ್ಲಿ ಬೀಳುತ್ತಾನೆ. ತನ್ನ ಚೂಪಾದ ಉಗುರುಗಳಿಂದ ಆಕೆಯ ಮರ್ಮಸ್ಥಾನವನ್ನು ಕತ್ತರಿಸಿ ಮನೋವೇಗದಿಂದ ಥಟ್ಟನೆ ಮೇಲಕ್ಕೆ ನೆಗೆಯುತ್ತಾನೆ. ಮರ್ಮಸ್ಥಾನ ಸೀಳಲ್ಪಟ್ಟ ಆಕೆ ಬಲಗುಂದಿ ಸಮುದ್ರದಲ್ಲಿ ಬೀಳುತ್ತಾಳೆ.



ಕಿಂಗ್ಸ್ ಕಪ್ ಸಂಬಂಧಿಸಿದ ಕ್ರೀಡೆ – ಏರ್ ರೇಸಸ್

ಅಲ್ಲಿಂದ ಮುಂದೆ ಹೋಗುತ್ತಾ ಮೂರುಯೋಜನ ಮುಗಿದ ಮೇಲೆ ಆಚೆಯ ದಡದಲ್ಲಿ ಅರಣ್ಯ ಸಮೂಹ ಕಾಣುತ್ತಾನೆ. ಅಲ್ಲಿ ಕೆಳಕ್ಕಿಳಿಯುವಾಗ ರಾಕ್ಷಸರು ತನ್ನ ಮೇಘ ಸದೃಶ ಶರೀರ ನೋಡಿ ಕುತೂಹಲಗೊಳ್ಳುತ್ತಾರೆ ಎಂದು ಯೋಚಿಸಿ ತನ್ನ ನಿಜರೂಪವನ್ನು ಹೊಂದುತ್ತಾನೆ. ಸಮುದ್ರ ತೀರದಲ್ಲಿರುವ ಒಂದು ಬೆಟ್ಟದ ಮೇಲೆ ಧುಮುಕುತ್ತಾನೆ. ಅಲ್ಲಿಂದ ಗಿರಿಶಿಖರದ ಮೇಲಿರುವ ಲಂಕೆಯನ್ನು ಕಾಣುತ್ತಾನೆ. ಶಕ್ತಿಗಿಂತ ಉಪಾಯದಿಂದ ಕೆಲಸ ಮಾಡುವುದು ಉತ್ತಮ. ಶಕ್ತಿ ಪ್ರದರ್ಶನದಿಂದ ಸಮಯ ಹಾಳು. ಕೆಲಸದಲ್ಲಿ ವಿಳಂಬ. ಇದು 'ಸುರಸೆ'ಯ ಪ್ರಕರಣದ ಮುಖ್ಯ ಸಂದೇಶ. ಯಾವಾಗಲೋ ತನ್ನವರಿಗೆ ಉಪಕಾರ, ಸಹಾಯ ಮಾಡಿದ್ದನ್ನು ಅವಕಾಶ ಸಿಕ್ಕಿದಾಗ ತಾನು ಮಾಡಬೇಕು. ಆ ಋಣ ತೀರಿಸಬೇಕು ಎಂಬುದು 'ಮೈನಾಕ'ನ ಪ್ರಕರಣ ಮನದಟ್ಟು ಮಾಡುತ್ತದೆ. ದುಷ್ಟರನ್ನು ಯಾವ ರೀತಿಯಲ್ಲಿಯೇ ಆಗಲಿ ಮಟ್ಟಹಾಕುವುದು ನಮ್ಮ ಆದ್ಯತೆಯಾಗಬೇಕೆಂಬುದು ಸಿಂಹಿಕೆಯ ವೃತ್ತಾಂತ ವಿಷದೀಕರಿಸುತ್ತದೆ. ಯೋಜನೆಯನ್ನು ಕಾರ್ಯರೂಪಕ್ಕೆ ತರುವಾಗ ಉಂಟಾಗುವ ಅಡೆತಡೆಗಳನ್ನು ಧೈರ್ಯವಾಗಿ ಶಕ್ತಿ–ಯುಕ್ತಿಗಳಿಂದ ನಿವಾರಿಸಿ ಯಶಸ್ಸು ಗಳಿಸುವತ್ತ ಗಮನ ಕೊಡಬೇಕೆಂಬುದು ಸರ್ವಕಾಲಿಕ ಸತ್ಯ. ಹನುಮಂತನ ಸಮುದ್ರೋಲ್ಲಂಘನ ಹಲವು ನೀತಿಗಳನ್ನು ತಿಳಿಸುವ ಮಹಾಸಮುದ್ರ.

**ಸಂಪ್ರದಾಯ**

**ಲೇ॥ ಜಿ.ವಿ. ಶರ್ಮಾಪಂಡಿತ್**

# ದೇವರ ಕೈಗಳಲ್ಲಿ ಆಯುಧಗಳೇಕೆ?

**ದೇವರನ್ನು ನೋಡಿದವರು ಯಾರು?**

**ದೇವರು ಹೇಗೆ ಇರುತ್ತಾನೆ?**

**ದೇವರು ಹೀಗೆಯೇ ಇರುತ್ತಾನೆಂದು ಹೇಳಬಲ್ಲರು ಯಾರು?**

ದೇವರಿಗೆ ರೂಪವಿಲ್ಲ. ಹೆಸರಿಲ್ಲ. ಪ್ರತ್ಯೇಕವಾದ ಸ್ಥಳವಿಲ್ಲ. ಯಾರಿಗೂ ಕಾಣುವುದಿಲ್ಲ. ಯಾರೂ ನೋಡಿರಲಿಲ್ಲ. ದೇವರಿಗೆ ಜನ್ಮವಿಲ್ಲ. ಜಾತಿ ಇಲ್ಲ. ಆತ್ಮೀಯರಿಲ್ಲ ಶತೃಗಳಿಲ್ಲ. ಸಂತೋಷವಿಲ್ಲ ಕೋಪವಿಲ್ಲ.

**ಹಾಗಾದರೇ ನಾವು ನೋಡುತ್ತಿರುವ ದೇವರು ಯಾರು?**

**ಕಲ್ಪನೆ**

**ನಮ್ಮ ಮನೋಕಲ್ಪನೆಯನ್ನೆ ನಾವೀಗ ನೋಡುತ್ತಿದ್ದೇವೆ.**

**ಹಾಗಾದರೇ ದೇವರು ಇರುವುದು ಸುಳ್ಳೇನು?**

**ಸುಳ್ಳಲ್ಲ. ದೇವರು ಸತ್ಯವಾಗಿಯೂ ಇದ್ದಾನೆ. ದೇವರು ಸುಳ್ಳಲ್ಲ.**

**ಇದ್ದರೇ ನಮ್ಮಗೇಕೆ ಕಾಣುತ್ತಿಲ್ಲ?**

ಕರೆಂಟ್‌ನಿಂದ ಮೋಟರ್ ತಿರುಗುತ್ತಾಯಿದೆ. ಬೆಂಕಿ ಹುಟ್ಟುತ್ತಾ ಇದೆ. ಮಿಕ್ಸೀತಿರುಗುತ್ತಾ ಇದೆ. ಗ್ರೈಂಡರ್‌ನಲ್ಲಿ ಹಿಟ್ಟು ತಯಾರಾಗುತ್ತಾ ಇದೆ. ಸೆಲ್‌ಫೋನ್ ಚಾರ್ಜಯಾಗುತ್ತಾ ಇದೆ. ಫ್ಯಾನ್ ತಿರುಗುತ್ತಾ ಇದೆ. ಮತ್ತೇ ಕರೆಂಟ್ ಯಾಕೆ ಕಾಣುತ್ತಿಲ್ಲ?

**ಕರೆಂಟ್ ನಂತೆಯೇ ದೇವರು ಶಕ್ತಿ ಸ್ವರೂಪವಾಗಿದ್ದಾನೆ.**

**ಕರೆಂಟ್ ನಂತೆಯೇ ಅನುಭವದಿಂದ ತಿಳಿಯಬೇಕಷ್ಟೇ.**

ಒಂದು ಬ್ಯಾಟರೀಯಲ್ಲಿ ಇರುವ ಶಕ್ತಿಯನ್ನು ನೋಡಬೇಕಾದರೇ ಒಂದು 'ಬಲ್ಬ್' ಎರಡು 'ವೈರ್'ಗಳು ಬೇಕಾಗುತ್ತವೆ. ಹಾಗೆಯೇ ನಿರಾಕಾರನಾದ ದೇವರನ್ನು ನೋಡಬೇಕಾದರೇ ದೀಕ್ಷ, ಜ್ಞಾನ, ಸಂಕಲ್ಪಗಳು ಬೇಕು. ಲೌಕಿಕ ಸಂಬಂಧಗಳನ್ನು ಸ್ಥಗಿತಗೊಳಿಸಿ ಮಾನಸಿಕ ಶಕ್ತಿಗೆ ಪ್ರೇರಣೆ ನೀಡಬೇಕು.

**ಶಕ್ತಿಯುತನಾದ ದೇವರ ಕೈಯಲ್ಲಿ ಆಯುಧಗಳೇಕೆ?**

ಪಾಮರ ಜನರಿಗೆ ಉತ್ತೇಜನ ನೀಡಲಿಕ್ಕಾಗಿ ಪಂಡಿತರು ಕಲ್ಪಿಸಿದ ಉಹಾಪೋಹಗಳು. ದೇವರಿಗೆ ಹತ್ತು ಮುಖಗಳು ಹದಿನಾರು ಕೈಗಳು, ಮತ್ತು ಪ್ರತಿಯೊಂದು ಕೈಯಲ್ಲಿಯೂ ಒಂದೊಂದು ರೀತಿಯ ಆಯುಧಗಳು, ಎಲ್ಲಾ ಕಲ್ಪನೆ! ಮನರಂಜನೆಗಾಗಿ ಮಾಡಿರುವ ಊಹೆಗಳು. ನಿರಾಧಾರ ವರ್ಣನೆಗಳು.

"ದೇವರು" ಎಂಬ ದಿವ್ಯಶಕ್ತಿ ಒಂದಿದೆ. ವಿಷ್ಣು ಎಂದರೂ. ಶಿವ ಎಂದರೂ, ಶಕ್ತಿ ಎಂದರೂ, ಎಲ್ಲವೂ ಎಲ್ಲರೂ ಅವನೇ! ಆಕಾಶದಲ್ಲಿ ಇರುವ ಒಬ್ಬನೇ ಸೂರ್ಯನು ಒಬ್ಬೊಬ್ಬರಿಗೆ ಒಬ್ಬೊಬ್ಬನಂತೆ ಕಾಣುವ ಹಾಗೆಯೇ ಒಬ್ಬ ದೇವರನ್ನು ಹಲವಾರು ಹೆಸರುಗಳಿಂದ ಕರಿಯುತ್ತಿದ್ದೇವೆ.

**"ಸರ್ವದೇವ ನಮಸ್ಕಾರಂ ದೈವತಂ ಪ್ರತಿಗಚ್ಛತಿ"**

ನಾವು ಯಾವ ಹೆಸರಿನಲ್ಲಿ ಯಾವ ದೇವರಿಗೆ ನಮಸ್ಕಾರ ಮಾಡಿದರೂ ಅದು ಪರಬ್ರಹ್ಮನಿಗೇ ಸಲ್ಲುತ್ತದೆ. ದೇವರು ಸರ್ವವ್ಯಾಪಿ. ಸಮಸ್ತ ಜೀವಿಗಳಲ್ಲಿಯೂ ದೇವರು ಕಾಣದಂತೆ ಇದ್ದಾನೆ.



**ಮೆರ್ಡೆಕ ಕಪ್** ಸಂಬಂಧಿಸಿದ ಕ್ರೀಡೆ – ಫುಟ್ಬಾಲ್

# ಪರಮೇಶ್ವರನ 25 ಲೀಲೆಗಳು

**17. ಅರ್ಧನಾರೀಶ್ವರ ಲೀಲೆಯು**

ಶ್ರೀ ವಿಷ್ಣುವು ಪಾಲ್ಗಡಲಲ್ಲಿ ಮಲಗಿದ್ದನು. ಲಕ್ಷ್ಮೀದೇವಿಯು ಪತಿಯ ಪಾದಗಳನ್ನೊತ್ತುತ್ತಿದ್ದಳು. ಸುಖಲೋಲುಪ್ತರಾಗಿ ಸರಸ ಸಲ್ಲಾಪಗಳಲ್ಲಿ ನಿರತರಾಗಿದ್ದರು. ಆ ವೇಳೆಯಲ್ಲಿ ಬ್ರಹ್ಮನು ಅಲ್ಲಿಗೆ ಬಂದನು. ಅವನನ್ನು ಯಾರೂ ನೋಡಲಿಲ್ಲ ಮಾತಾಡಿಸಲಿಲ್ಲ. ಬ್ರಹ್ಮನಿಗೆ ಸಿಟ್ಟು ಬಂದಿತು.

ಆಗ ಬ್ರಹ್ಮನು ಎಲೈ ಹರಿಯೇ! ನಾನು ಸೃಷ್ಟಿಕರ್ತನು. ಇಲ್ಲಿ ಬಂದು ಎಷ್ಟು ಹೊತ್ತಾದರೂ, ನೀನು ನನ್ನನ್ನು ಲಕ್ಷಿಸಲಿಲ್ಲ. ಎದ್ದು ನನಗೆ ಗೌರವ ಕೊಡಲಿಲ್ಲ, ಮಾತಾಡಲಿಲ್ಲ. ನಿನಗೆ ಇಷ್ಟು ಗರ್ವ ಬಂದಿತೇ? ಎಂದನು.

ಆಗ ವಿಷ್ಣುವು– ಎಲೈ ಬ್ರಹ್ಮನೇ ನಾನು ಜಗದ್ರಕ್ಷಕನು. ನಾನು ನಿನಗೆ ತಂದೆಯು ಹೀಗಿದ್ದು ನೀನು ಬಂದು ನನಗೆ ನಮಸ್ಕಾರ ಮಾಡಬೇಕಿತ್ತು. ಅದನ್ನು ಬಿಟ್ಟು ನಿನಗೆ ನಾನು ಗೌರವ ತೋರಬೇಕೆಂದು ಕೇಳುತ್ತೀ ಮೂರ್ಖ ಶಿರೋಮಣಿ ಎಲ್ಲಿಟ್ಟಿರುವೆ ಬುದ್ಧಿಯನ್ನು ಎಂದನು.

ಹೀಗೆ ಇಬ್ಬರಿಗೂ ವಾದ ಪ್ರತಿವಾದಗಳಾಗಿ ಕಾಳಗವೇ ಪ್ರಾರಂಭವಾಯಿತು. ಬ್ರಹ್ಮನ ಸಹಾಯಕ್ಕಾಗಿ ನವಬ್ರಹ್ಮಯಾದವರ ಬಲವಿತ್ತು, ವಿಷ್ಣುವಿಗೆ ಎಲ್ಲ ದೇವತೆಗಳ ಬಲವಿತ್ತು. ಒಂದು ದಿವ್ಯ ವರುಷ ಪರಿಯಂತರವೂ ಯುದ್ಧ ನಡೆಯಿತು. ಯಾರಿಗೂ ಸೋಲಿಲ್ಲ, ಗೆಲುವಿಲ್ಲ. ಈ ಪರಿಸ್ಥಿತಿಯಲ್ಲಿ ಈರ್ವರೂ ಶಿವನಿಂದ ವರವಾಗಿ ಪಡೆದ ಪಾಶುಪಶಾಸ್ತ್ರಗಳನ್ನೇ ಅಭಿಮಂತ್ರಿಸಿ ಒಬ್ಬರ ಮೇಲೊಬ್ಬರು ಬಿಟ್ಟರು. ಅವೆರಡೂ ಮಹಾ ಅಸ್ತ್ರಗಳು ಜಗತ್ತನ್ನೇ ಸುಡುವವೇನೋ ಎನ್ನುವಂತೆ ಕಿಡಿಗಳನ್ನು ಕಾರುತ್ತಾ ಎದುರು ಬದುರಾಗಿ ಬರಹತ್ತಿದವು.

ವಿಷ್ಣು ಬ್ರಹ್ಮರಿಗೆ ತಮ್ಮ ಅಸ್ತ್ರಗಳೇ ತಮಗೆ ಮುಳುವಾದಂತೆ ಆದವು. ಆಗ ಈರ್ವರಿಗೂ ವಿವೇಕೋದಯವಾಗಿ– ಪರಮೇಶ್ವರನನ್ನು ಅನನ್ಯ ಭಾವನೆಯಿಂದ ತಮ್ಮನ್ನು ರಕ್ಷಿಸೆಂದು ಪ್ರಾರ್ಥಿಸಿದರು. ಆಗ ಪರಮೇಶ್ವರನು ಬಂದು ಎರಡೂ ಅಸ್ತ್ರಗಳ ನಡುವೆ ಮಹಾಲಿಂಗವಾಗಿ ನಿಂತು ಪ್ರಸನ್ನನಾದನು. ಎರಡೂ ಅಸ್ತ್ರಗಳು ಪರಮೇಶ್ವರನ ಪಾದಗಳಲ್ಲಿ ಬಂದು ಅಡಗಿದವು. ಕೋಟಿ ಕೋಟಿ ಸೂರ್ಯ ಪ್ರಕಾಶದಿಂದೊಪ್ಪುವ ತೇಜೋಮೂರ್ತಿಯು ಲಿಂಗಾಕಾರವಾಗಿ ನಿಂತಿರುವುದನ್ನು ಹರಿ, ಬ್ರಹ್ಮಾದಿ ಸಕಲ ದೇವತೆಗಳು ಕಂಡು ಸಂತೋಷ ಚಿತ್ತರಾಗಿ ಮೈಮರೆದು ಸ್ತುತಿಸಿದರು. ಆಗ ಶಿವನು ತನ್ನ ಶರೀರದ ಬಲಭಾಗದಲ್ಲಿ ಪುರುಷಾಕೃತಿಯನ್ನೂ, ಎಡಭಾಗದಲ್ಲಿ ಶಕ್ತಿಯ ಸ್ತ್ರೀಯಾಕೃತಿಯನ್ನೂ ತೋರಿಸಿ ಅರ್ಧನಾರೀಶ್ವರ ಲೀಲೆಯನ್ನೂ ಮಾಡಿದನು. ಅದನ್ನು ಎಲ್ಲರೂ ಕಂಡು ಉಚ್ಚಸ್ವರದಿಂದ ಅರ್ಧನಾರೀಶ್ವರಾ! ಜಯ ಉಘೇ, ಜಯ ಉಘೇ ಎಂದು ಘೋಷಿಸಿದರು, ಎಂಬಲ್ಲಿಗೆ ಅರ್ಧನಾರೀಶ್ವರ ಲೀಲೆಯು ಮುಗಿದಿದು.

**ಮಹಾಕ್ಷತ್ರಿಯ** **ಲೇ: ದೇವುಡು**

# ವಿರಜಾದೇವಿಯಂತಃಪುರ

ಗಂಗಾಯಮುನಾಸಂಗಮದಲ್ಲಿ ಮೂರ್ತಿಗೊಂಡ ಭರತಖಂಡದ ಸತ್ ಕೀರ್ತಿಯೋ ಎಂಬಂತಿರುವ ಚಕ್ರವರ್ತಿ ನಿವಾಸದ ಬಿಸಿಲುಮಚ್ಚಿನಲ್ಲಿ ಚಕ್ರವರ್ತಿನಿ ವಿರಜಾದೇವಿಯು ಸುಖಾಸನದಲ್ಲಿ ಕುಳಿತು ಪತಿದೇವನನ್ನು ಇದಿರುನೋಡುತ್ತಿದ್ದಾಳೆ. ಚಂದ್ರನು ಆಕಾಶದ ನಟ್ಟನಡುವೆ ನಿಂತು, ಚಕ್ರವರ್ತಿಯು ಬೆಳುಗೊಡೆಯ ಮೇಲಿನ ಉಂಗುರವೆಂಬಂತೆ ಇದ್ದು ಆಕಾಶವನ್ನೆಲ್ಲ ಒಂದು ಕಾಂತಿಮಯ ಧವಳಚ್ಛತ್ರವಾಗಿಸಿದ್ದಾನೆ. ಆ ಬೆಳದಿಂಗಳಲ್ಲಿಯೂ ಮಸಕಾಗದೆ ಅಲ್ಲಲ್ಲಿ ಮೆರೆಯುತ್ತಿರುವ ನಕ್ಷತ್ರಗಳು ಆ ಛತ್ರವನ್ನು ಕೀಲಿಸಿರುವ ವಜ್ರಮಣಿಗಳಂತೆ ಕಾಣುತ್ತವೆ. ದೂರದ ದಿಗಂತದಲ್ಲಿ ಮಿಣುಕುತ್ತಿರುವ ನಕ್ಷತ್ರಪುಂಜಗಳು ಆ ಬೆಳ್ಗೊಡೆಯ ಅಂಚಿನಲ್ಲಿ ಕಟ್ಟಿರುವ ಮುತ್ತಿನ ಗೊಂಚಲುಗಳಂತೆ ಇವೆ.

ವಿರಜಾದೇವಿಯು ತಾನು ಪಿತೃಕನ್ಯೆ, ಪರಿಶುದ್ಧಳು ಎಂಬುದನ್ನು ತೋರಿಸಿಕೊಳ್ಳಲೆಂಬಂತೆ, ನಿರ್ಮಲವಾದ ಬಿಳಿಯುಡೆಯುಟ್ಟಿದ್ದಾಳೆ. ಆಕೆಯ ಸದ್ಗುಣಗಳಂತೆ ಆ ಸೀರೆಯಲ್ಲಿ ಬೂಟಾಟಗಳ ನಡುವಿನ ರತ್ನಗಳು ಹೊಳೆಯುತ್ತಿವೆ. ಮಿತವಾದ ಆಭರಣಗಳು ತಮ್ಮ ರತ್ನಗಳ ಅಮಿತವಾದ ಕಾಂತಿಯನ್ನು ಎಲ್ಲೆಲ್ಲೂ ಪ್ರಸರಿಸಬೇಕೆಂದು ವಿಜಿಗೀಷುವಾದ ಕ್ಷತ್ರಯ ವೀರನಂತೆ ಪ್ರಕಾಶಿಸುತ್ತಿವೆ. ದಾಸಿಯರು ರತ್ನಖಚಿತವಾದ ಚಾಮರಗಳನ್ನು ಬೀಸಲು ಸಿದ್ಧರಾಗಿದ್ದಾರೆ. ಎದುರಿಗೊಬ್ಬಳು ವೀಣೆಯನ್ನು ಮೃದುವಾಗಿ ನುಡಿಸುತ್ತಾ ಕುಳಿತಿದ್ದಾಳೆ.

ಬಿಸಿಲುಮಚ್ಚಿನ ನಾಲ್ಕು ಮೂಲೆಗಳಲ್ಲೂ ಪಾರಿಜಾತಗಳು ಕಟ್ಟೆಗಳಲ್ಲಿ ಬೆಳೆದಿವೆ. ಮೇಲೆಲ್ಲಾ ತಂತಿಯ ಜಾಲರಿಗಳನ್ನು ಹರಡಿ, ಅದರ ಮೇಲೆ ಜಾಜಿ ಮಾಲತಿ ಇರುವಂತಿಗೆ ಬಳ್ಳಿಗಳನ್ನು ಅರಳಿಸಿದ್ದಾರೆ. ಅಲ್ಲಲ್ಲಿ ರತ್ನಮಯವಾದ ಭಿತ್ತಿಗಳನ್ನುಳ್ಳ ಕೃತ್ರಿಮ ಪುಷ್ಕರಣಿಗಳಲ್ಲಿ ತಾವರೆ ಕನ್ನೈದಿಲೆಗಳನ್ನು ಬೆಳೆಸಿದ್ದಾರೆ. ಚಕ್ರವರ್ತಿಯ ಸೇವೆಗೆಂದು ಪುಷ್ಪಪುಷ್ಪವೂ ಹುರುಪಿಸುತ್ತಿದೆಯೇ ಎಂಬಂತೆ,

ಪಾರಿಜಾತ, ಜಾಜಿ, ಮಾಲತಿ, ಇರುವಂತಿಗೆ, ಜಲಜಗಳು ತಮ್ಮ ತಮ್ಮ ಸುಗಂಧವನ್ನು ಸೂರೆಗೊಡುತ್ತಿವೆ. ತಂಗಾಳಿಯು ಅದನ್ನೆಲ್ಲ ಹೊತ್ತು ತರಲಾರದೆ ಮುಕ್ಕರಿಯುವಂತೆ ಊಸ್ ಎಂದುಕೊಂಡು ನಿಧಾನವಾಗಿ ಬೀಸುತ್ತಿದೆ.

ಸಣ್ಣವಾಗಿ ಮೃದುವಾಗಿ ಶೃಂಗನಾದವಾಗಿ ಚಕ್ರವರ್ತಿಯು ಆಗಮನವನ್ನು ಸೂಚಿಸಿತ್ತು. ಮರ್ಯಾದೆಗೆಂದು ಹಿಡಿದಿರುವ ಕರ್ಪೂರದೀಪಿಕೆಯು ತನ್ನದೂ ಕಾಣಿಕೆಯಿರಲಿ ಎಂಬಂತೆ ಆ ಬಿಸಿಲುಮಚ್ಚಿನಲ್ಲಿ ರಂಗವಲ್ಲಿಯಾಗಿ ಇಟ್ಟಿರುವ ಕೇಸರ, ಪಚ್ಚಕರ್ಪೂರ, ಕಸ್ತೂರಿಗಳ ಹುಡಿಗಳ ವಾಸನೆಯ ಜೊತೆಗೆ ತನ್ನ ಸುವಾಸನೆಯನ್ನೂ ಅಷ್ಟು ಒಪ್ಪಿಸುತ್ತಿದೆ. ಪರಾಕ್ರಮವನ್ನು ಪ್ರದರ್ಶಿಸಿ ಹಿಡಿದು ತಂದು ಸೆರೆಯಲ್ಲಿಟ್ಟಿರುವ ಶತ್ರುಗಳ ಹೃದಯದ ದ್ವೇಷದಾವಾನಲಗಳಿಂದ ಏಳುವ ಕೃಷ್ಣಧೂಮದ ನಿಷ್ಫಲ ಮೇಘಗಳಂತೆ, ಚಕ್ರವರ್ತಿಯು ಪಕ್ಕದಲ್ಲಿ ಹಿಡಿದು ತರುತ್ತಿರುವ ಧೂಪದಾನಿಯಿಂದ ಹೊರಬೀಳುವ ದಪ್ಪ ಹೊಗೆಯು ಚಾಮರಗಳ ಗಾಳಿಯಿಂದ ಆಹತವಾಗಿ ಸುತ್ತಿನ ಗಾಳಿಯಲ್ಲಿ ಸೇರಿಹೋಗಿ ಅದೃಶ್ಯವಾಗುತ್ತಿದೆ.

ಚಕ್ರವರ್ತಿಯು ಬಂದನು. ಆತನು ತನ್ನ ಪಾದಗಳಲ್ಲಿ ಧರಿಸಿರುವ ಪಾದುಕೆಗಳ ಚರ್ಮಕ್ಕಿಂತ ಮೃದುವಾದ ರತ್ನಗಂಬಳಿಯ ಮೇಲೆ ನಡೆದು ಬಂದನು. ಬಾಗಿಲಲ್ಲಿದ್ದ ಪ್ರಹರಿಣಿಯು ಮಂಡಿಯೂರಿ ಮಣಿದು ದಾರಿ ತೋರಿಸಿಕೊಂಡು ಚಕ್ರವರ್ತಿನಿಯಿರುವೆಡೆಗೆ ಕರೆತಂದಳು. ಅರಸನ ಹಿಂದೆ ಬರುತ್ತಿರುವ ಮುಖ್ಯ ವೀಣಾವಾದ್ಯದ ಮೃದು ಮಂಗಳರವವು ಚಕ್ರವರ್ತಿನಿಯ ಬಳಿ ನುಡಿಯುತ್ತಿದ್ದ ವೀಣೆಯ ನಿನಾದದೊಡನೆ ಸುಖವಾಗಿ ಬೆರೆತು ಪರಸ್ಪರ ಕುಶಲಪ್ರಶ್ನೆಗಳ ಮಂಗಳ ಕಾರ್ಯವನ್ನು ನಿರ್ವಹಿಸಿ ಸ್ವಾಗತವನ್ನು ಆಚರಿಸಿತು. ಅರಸಿತಿಯು ಆಸನದಿಂದೆದ್ದು ಮೂರು ಹೆಜ್ಜೆ ಮುಂದೆ ಹೋಗಿ ಅರಸನನ್ನು ಎದುರುಗೊಂಡು, ಮಂಡಿಯೂರಿ ಬಗ್ಗಿ ಆತನ ಪಾದಗಳನ್ನು ಮುಟ್ಟಿ ಕಣ್ಣಿಗೊತ್ತಿಕೊಂಡಳು. ಅರಸನು ಜಲಭಾರ ನಮ್ರವಾದ ಮೇಘರಾಜನು ಬಗ್ಗಿ ಶಿಖರಿಣಿಯನ್ನು ಆಲಂಗಿಸುವಂತೆ, ಬಗ್ಗಿ ಆಕೆಯನ್ನು ಮೇಲಕ್ಕೆತ್ತಿ ಆಲಂಗಿಸಿಕೊಂಡು ಜೊತೆಯಲ್ಲಿ ನಡೆದುಹೋಗಿ, ಸುಖಾಸನವನ್ನು ಸಹಪತ್ನೀಕನಾಗಿ ಅಲಂಕರಿಸಿದನು. ಪರಿಜನರು ಒಬ್ಬೊಬ್ಬರಾಗಿ ಬಂದು ಮುಜುರೆ ಮಾಡಿ ಹೋಗಿ ದೂರದಲ್ಲಿ ನಿಂತರು. ತಿರಸ್ಕರಣಿಯು ನಿಶ್ಶಬ್ಧವಾಗಿ ಮುಂದೆ ಸರಿದು ಅವರಿಬ್ಬರೂ ಕುಳಿತಿರುವ ಮೂಲೆಯನ್ನು ಒಂದು ಕೋಣೆಯನ್ನು ಮಾಡಿತು.

ವಿರಜಾದೇವಿಯು ಅಲ್ಲಿ ಸಿದ್ಧವಾಗಿದ್ದ ರಸಾಯನವನ್ನೂ, ಆಸನವನ್ನೂ ಪತಿ ದೇವನಿಗೊಪ್ಪಿಸಿ ಉಪಚಾರ ಮಾಡಿದಳು. ಅರಸನು ಸಕಾಮನಾಗಿ ಆಕೆಯನ್ನು ಬರಸೆಳೆದು ಗಾಢವಾಗಿ ಆಲಿಂಗನ ಮಾಡಿಕೊಂಡು ಸಸೀತ್ಕಾರವಾಗಿ ಚುಂಬಿಸಿ, "ನನಗೆ ನಿನ್ನಲ್ಲಿ ಎಷ್ಟೋ ಚೇಷ್ಟೆ ಮಾಡಬೇಕೆಂದು ಆಸೆ. ಆದರೆ ನೀನು ಧರ್ಮಪತ್ನಿ. ಕಾಮಪತ್ನಿಯ ಚೇಷ್ಟೆಯನ್ನು ಧರ್ಮಪತ್ನಿಯಲ್ಲಿ ಮಾಡಬಾರದು. ಏನು ಮಾಡಲಿ?" ಎಂದು ನಿಟ್ಟುಸಿರು ಬಿಟ್ಟನು. ದೇವಿಯು ಗಂಡನನ್ನು ಕೆರಳಿಸುವಂತೆ ಕೇಳಿದಳು; "ಪ್ರವಾಹ ಬಂದಾಗ ನದಿಯು ದಡಗಳನ್ನು ಕೇಳುವುದೇನು?"

"ಹಾಗಾದರೆ ತತ್ವವನ್ನು ಕೇಳು: ಸ್ತ್ರೀಪೂರ್ವವಾದ ವ್ಯಾಪಾರವೆಲ್ಲ ಕಾಮವ್ಯಾಪಾರ. ಅದು ಪುಂಪೂರ್ವವಾಗಿ ನಡೆಯಬೇಕಾದಾಗ ಸ್ತ್ರೀಯು ಕಾಮಪತ್ನಿಯಾದರೆ ಸ್ವಚ್ಛಂದ. ಹಾಗಿಲ್ಲದೆ ಧರ್ಮಪತ್ನಿಯಾದರೆ ಅಲ್ಲಿ ನಿಯಮ. ಅದರಿಂದಲೇ 'ಶಯ್ಯಾಸು ವೇಶ್ಯಾ' ಎನ್ನುವುದು.

"ಹಾಗಾದರೆ ನಾನು ವೇಶ್ಯೆಯಾಗಬೇಕೆ?"

"ವೇಶ್ಯೆಯಂತಾಗಬೇಕು. ಎಂದರೆ ಗಂಡನ ಸೂಳೆಯಾಗಬೇಕು."

"ದೇವ, ಧರ್ಮಿಷ್ಠರೂ ಧರ್ಮಜ್ಞರೂ ಒಗಟಿನಲ್ಲಿಯೇ ಮಾತನಾಡಬೇಕೇನು?"

ನಹುಷನು ಸಣ್ಣಗೆ ನಕ್ಕು ಗಲ್ಲವನ್ನು ಮೇಲಕ್ಕೆ ಒತ್ತಿ ವಕ್ಷಸ್ಥಳದಲ್ಲಿ ತಲೆಯಿಟ್ಟು ಪತ್ನಿಯನ್ನು ಅರ್ಧಾಲಿಂಗನದಿಂದ ಆರಾಧಿಸುತ್ತಾ ಹೇಳಿದನು; "ಧರ್ಮಪತ್ನಿಯನ್ನು ಆರಾಧಿಸುವುದು ಧರ್ಮಸಂತಾನವನ್ನು ಪಡೆದು ಪಿತೃಋಣವನ್ನು ಕಳೆದುಕೊಳ್ಳುವುದಕ್ಕೆ. ಸಂತಾನದ ಯೋಚನೆಯೇ ಇಲ್ಲದೆ ಕಾಮತೃಪ್ತಿಯನ್ನು ಪಡೆಯುವುದಕ್ಕೆ ಕಾಮಪತ್ನಿಯ ಸೇವನೆ. ಈಗ ಅರ್ಥವಾಯಿತೆ? ಅದರಿಂದ ಹೇಳಿದೆ. ಕಾಮತೃಪ್ತಿಯೆನ್ನುವುದಾದರೆ ಅದು ನಿನ್ನ ಪ್ರಪಂಚ. ಆಗ ನಿನ್ನ ದಯೆಯಿಂದ ನಮಗೂ ಅಷ್ಟು ವಿನೋದ. ಅದರಿಂದ, ಬೇಕು ಎನ್ನುವುದು ನಿನ್ನ ಕಡೆಯಿಂದ ಬರಲಿ ಎಂದು ಧರ್ಮಪತ್ನಿ, ಕಾಮಪತ್ನಿಯರ ಮಾತನ್ನು ಎತ್ತಿದೆ."

"ದೇವಾ, ನೆನಪಿರಲಿ. ತಾವು ಇಲ್ಲಿಗೆ ಬಂದಿರುವುದು ನನ್ನ ಪ್ರಾರ್ಥನೆಯಿಂದೆ. ನನ್ನನ್ನು ಅನುಗ್ರಹಿಸುವುದಕ್ಕೆ."

"ಒಂದು ನಿಜ. ಇನ್ನೊಂದು ಸುಳ್ಳು."

ದೇವಿಯು ಅದನ್ನು ಅರ್ಥಮಾಡಿಕೊಳ್ಳಲಾರದೆ ಕೈಯಲ್ಲಿದ್ದ ಲೀಲಾಕಮಲದಿಂದ ಗಂಡನ ಮುಖಪದ್ಮವನ್ನು ನೇವರಿಸುತ್ತಾ ಕೇಳಿದಳು: "ಹಾಗೆಂದರೆ?"

ನಹುಷನು ಆ ಲೀಲಾಕಮಲದ ಸೋಂಕನ್ನು ಅನುಭವಿಸಿಯೋ ಎಂಬಂತೆ ಕಣ್ಣನ್ನು ಅರೆಮುಚ್ಚಿ ಸಣ್ಣಗೆ ನಿವಾರಿಸುತ್ತ ಕೊಂಕುದನಿಯಲ್ಲಿ ಹೇಳಿದನು, "ನಿನ್ನ ಪ್ರಾರ್ಥನೆಯಿಂದ ಬಂದಿದ್ದೇನೆ ನಿಜ. ಆದರೆ, ಬಂದಿರುವುದು ನಿನ್ನನ್ನು ಅನುಗ್ರಹಿಸುವುದಕ್ಕಲ್ಲ. ನಿನ್ನಿಂದ ಅನುಗ್ರಹವನ್ನು ಪಡೆದುಕೊಳ್ಳುವುದಕ್ಕೆ."

"ಕನಸುಮನಸ್ಸಿನಲ್ಲಿಯೂ ನಾವು ಅನುಗ್ರಾಹ್ಯರು; ತಾವು ಅನುಗ್ರಾಹಕರು. ದೇವ."



ಸ್ವೇತ್ಲಿಂಗ್ ಕಪ್ ಸಂಬಂಧಿಸಿದ ಕ್ರೀಡೆ – ಟೇಬಲ್ ಟೆನಿಸ್ ( ಪುರುಸರು)

"ಕಾಮಪ್ರಪಂಚವನ್ನು ಬಿಟ್ಟು ಇತರ ಪ್ರಪಂಚಗಳಲ್ಲಿ ಇದು ನಿಜ. ಅರ್ಥ ಪ್ರಪಂಚದಲ್ಲಿ ಈ ಅನುಗ್ರಾಹ್ಯ, ಅನುಗ್ರಾಹಕ ಸಂಬಂಧವು ಯಾವಾಗಲೂ ಹೆಚ್ಚು ಕಡಿಮೆಯಾಗುತ್ತಲೇ ಇರುವುದು. ಆದರೆ ಧರ್ಮಪ್ರಪಂಚ – ಕಾಮಪ್ರಪಂಚಗಳಲ್ಲಿ ಅದು ನಿಯತವು. ಮೊದಲನೆಯದರಲ್ಲಿ ಪತಿಯು ಅನುಗ್ರಾಹಕ. ಪತ್ನಿಯು ಅನುಗ್ರಾಹ್ಯಳು. ಕಾಮಪ್ರಪಂಚದಲ್ಲಿ ಅದಕ್ಕೆ ಪ್ರತಿ. ಪತ್ನಿಯು ಅನುಗ್ರಾಹಕಳು. ಪತಿಯು ಅನುಗ್ರಾಹ್ಯ. ಅದರಿಂದ, ಅಂತಃಪುರಗಳಲ್ಲಿ ಅದೂ ತಿರಸ್ಕರಣಿಯು ಹೊರಗಿನ ಪ್ರಪಂಚವನ್ನು ಹೊರಗೇ ಇಟ್ಟು ನಮ್ಮನ್ನು ಏಕಾಂತದಲ್ಲಿ ಬಿಟ್ಟಿರುವಾಗ, ದೇವಿಯವರು ದೊಡ್ಡ ಮನಸ್ಸು ಮಾಡಿ ಕರ್ತೃತ್ವವನ್ನು ವಹಿಸಿ, ಕರ್ತವ್ಯ ಭಾರವನ್ನು ವಹಿಸಿಕೊಂಡು, ನಮ್ಮಲ್ಲಿ ದಾಸ್ಯಭಾವವನ್ನು ಆರೋಪಿಸಿ ನಡೆಸಿಕೊಂಡರೆ ಕೃತಾರ್ಥರಾಗುವೆವು. ಹೆಣ್ಣೊಳಿದು ಹೊನಲಂತುಬ್ಬಿ ಮೈಮೇಲೆ ಬಂದರೆ ಸ್ವರ್ಗವೇ ಕೈಗೆ ಸಿಕ್ಕಿದಂಥಲ್ಲವೆ?"

"ದೇವಾ, ಮೂರು ಲೋಕಗಳಲ್ಲಿಯೂ ತಮ್ಮಂತಹ ಧರ್ಮಜ್ಞರೂ ಧರ್ಮಿಷ್ಠರೂ ಧಾರ್ಮಿಕರೂ ಇಲ್ಲವೆನ್ನುವರು. ಧರ್ಮಬಲದಿಂದ ಸ್ವರ್ಗವನ್ನು ಗೆದ್ದವರು ತಾವು. ಬೇಕೆಂದರೆ ಇಂದ್ರಪದವಿಯನ್ನು ನಿರ್ವಹಿಸಬಲ್ಲ ತಾವು ಕೋರಿದರೆ ಸ್ವರ್ಗವು ಇಲ್ಲಿಗೆ ಬರುವುದು ಏನತಿಶಯ?"

'ದೇವಿ, ಮಾತಿನಲ್ಲಿ ನಮ್ಮನ್ನು ಸೋಲಿಸಿದೆ. ನಾವು ಕೋರಿದರೆ ಸ್ವರ್ಗವು ಇಲ್ಲಿಗೆ ಬರುವುದು ಎಂದರೆ ತಮಗೆ ಬೇಕಾದಷ್ಟು ಸುಖವನ್ನು ನಿರ್ವಂಚನೆಯಾಗಿ ಕೊಡುವೆನು ಎಂದು ಹೇಳಿ, ನಮ್ಮನ್ನು ಬೇಡಿಕೊಳ್ಳಿ ಎಂದು ಅಪ್ಪಣೆ ಮಾಡಿದಂತಾಯಿತು. ಇಗೋ ಮಿಕ್ಕೆಲ್ಲರಿಗೂ ಸಿಂಹಾಸನಾಧೀಶ್ವರನಾಗಿ, ಭೂಮಂಡಲದ ಏಕನಾಥನಾದ ನಹುಷನು, ತಾನು ಚಕ್ರವರ್ತಿಯೆಂಬುದನ್ನು ಮರೆತು, ಮಹಾದೇವಿಯರ ಎದುರು ನಿಂತು ಸೆರಗೊಡ್ಡಿ ಬೇಡುತ್ತಿರುವೆನು. ಕಾಮಭಿಕ್ಷೆಯನ್ನು ಸರ್ವಾಂಗತೃಪ್ತಿಯಾಗುವಂತೆ, ಅಮೃತಪೂರ್ವಕವಾಗಿ ಕೊಟ್ಟು ಕಾಪಾಡಬೇಕು."

ವಿರಜಾದೇವಿಯು ಆ ಮಾತು ಕೇಳಿ ನಕ್ಕಳು; "ದೇವಾ, ಇದು ಗಂಧರ್ವ ಪ್ರಸಾದವಲ್ಲ; ರಂಗಮಂಟಪವಲ್ಲ, ಜೊತೆಗೆ ನಾನು ಪಾದಸೇವೆಗಾಗಿ ಸಿದ್ಧಳಾಗಿರುವವಳು. ನನ್ನಲ್ಲಿ ಈ ನಾಟಕದ ಮಾತುಗಳೇಕೆ?"

"ದೇವಿ ಹಾಗಲ್ಲ. ಇದು ಸರ್ವಥಾ ನಾಟಕದ ಭಾಷೆಯಲ್ಲ. ನಾಟಕದಲ್ಲಿ ಬೇಕೆಂದು ಇಲ್ಲದ ಭಾವವನ್ನು ಬೆಳೆಸಿಕೊಂಡು, ಇನ್ನೊಬ್ಬರು ಬರೆದ ಮಾತು ಕಲಿತು ಆಡುವುದು. ಸಂಸ್ಕೃತರಾದ ನಮಗೆ ಭಾವವು ಸಹಜವಾಗಿ ಬೆಳೆದು ಬಲಿತು ಸಮಾಧಿಯಾಗಿ, ಭಾವಾವೇಷದಿಂದ ಮಾತುಗಳೂ ಸಂಸ್ಕಾರಸಂಪನ್ನಳಾಗಿ, ನೀನು ಧರಿಸಿರುವ ಆಭರಣಗಳಲ್ಲಿರುವ ಶಾಣೋಲ್ಲೀಢ ಜೀವರತ್ನಗಳಂತೆ ತೇಜಃಪುಂಜಗಳಾಗಿ ಹೊರಬಂದರೆ ಇವು ನಾಟಕದ ಮಾತುಗಳೆನ್ನುವುದು ಯಾವ ನ್ಯಾಯ? ಸಂಗೀತದಲ್ಲಿ ಚೆನ್ನಾಗಿ ನುರಿತಿರುವ ನಿನ್ನ ಕಂಠವು ಶ್ರುತಿಗೆ ದ್ರೋಹಮಾಡದೆ ನುಡಿಯುತ್ತಿದ್ದರೆ ಅಲ್ಪಾಭರಣಗಳನ್ನು ಧರಿಸಿ, ಲಘುವಸ್ತ್ರದಿಂದ ಬಂದಿರುವೆಯೆಂದರೆ ನಿನಗೆ ವಸ್ತ್ರಾಭರಣಗಳು ಬೇಕಾದಷ್ಟು ಇಲ್ಲವೆಂದು ಅರ್ಥವೇ? ಒಂದೇ ನದಿಯು ಕಟ್ಟೆಯ ಹಿಂದೆ ನಿಂತು ಘನವಾಗಿದ್ದರೂ ಧುಮುಕುವಾಗ ಭೋರ್ಗರೆದರೆ ಅದು ನಾಟಕವೇ? ಈಗ ಈ ಸಮಯದಲ್ಲಿ ನಾನಿಷ್ಟು ಮಾತನಾಡುತ್ತಿರುವುದೂ ಭಾವಶಬಲತೆಯಿಂದಲೇ ಅಲ್ಲವೇ! ಅದರಿಂದ ನಾನಾಡುವ ಮಾತು ನಾಟಕದ್ದಲ್ಲ. ನಾಟಕದಲ್ಲಿ ಅರ್ಥಕ್ರಿಯೆಯಿಲ್ಲದೆ ಭಾವಪ್ರಚೋದಕ ಮಾತ್ರವಾದ್ದರಿಂದ ವಾಕ್ಕು ಅಲ್ಲಿ ವಿಡಂಬನವು. ಅದರಲ್ಲಿ ತೃಪ್ತಾ ಆಗಿ, ತರ್ಪಯಂತೀ ಆಗಿ, ವಶ್ಯಳಾಗಿ, ವಶೇ(ಹೆಣ್ಣಾನೆ)ಯಂತೆ ಲೋಲೆಯಾಗಿ. ಲೀಲಾಪರಳಾದ ನಿನ್ನಂತಹ ಸುರಸುಂದರಿಯ ಸಮ್ಮುಖದಲ್ಲಿ ವಿಡಂಬನ ವಾಕ್ಕಿಗೆ ಪ್ರಯೋಜನವೆಲ್ಲಿ? ಅದರಿಂದ ಬಾ. ಕಾರ್ಯಪರರಾಗಿ ಸಂತೋಷವನ್ನು ಆರ್ಜಿಸುವ ಕಾಲವಿದು. ಕಾಮದೇವನ ಆರಾಧನದಿಂದ ಕೃತಾರ್ಥರಾಗುವ ಕಾಲವಿದು. ಬರಿಯ ಮಾತಿನ ಬೆಡಗಿನಲ್ಲಿ ಕಾಲಹರಣವೇಕೆ?"

"ದೇವ, ತಮ್ಮ ಮಾತುಗಳು ನನ್ನ ಕಿವಿಗೆ ರಸಾಯನವಾಗಿವೆ. ತಮ್ಮೊಡನೆ ಸಿಂಹಾಸನದಲ್ಲಿ ಕುಳಿತಾಗ ಆ ವೈಭವವನ್ನು ನೋಡಿ ಮನಸ್ಸು ತಣಿಯುವಂತೆ. ಧರ್ಮಾಸನದಲ್ಲಿ ಕುಳಿತಾಗ ಕ್ಲಿಷ್ಟವೂ, ಸಂದಿಗ್ಧವೂ, ದುರಾರಾಧ್ಯವೂ ಆದ ಧರ್ಮಸ್ಕಂಧಗಳನ್ನು ವಿವರಣಮಾಡಿ ನಿರ್ಣಯಕ್ಕೆ ಬರುವ ಚಾತುರ್ಯವನ್ನು ನೋಡಿ ಬುದ್ಧಿಯು ಮೆಚ್ಚಿ ತಲೆದೂಗುವಂತೆ, ಈ ಸುಖಾಸನದಲ್ಲಿ ನಮ್ಮ ಪ್ರಾಣಮನೋಬುದ್ಧಿಗಳಂತೆ ದೇಹಗಳೂ ಒಂದಾಗುವ ಅವಸರದಲ್ಲಿ, ಏಕಾಂತದಲ್ಲಿ ಕೈಗೆ ಸಿಗುವುದೇ ಅಪರೂಪವಾದ ತಾವು ನನಗೆ ಸಿಕ್ಕಿರುವಾಗ, ಇನ್ನೂ ಅಷ್ಟು ಹೊತ್ತು ತಮ್ಮ ಮಧುರಾಲಾಪವನ್ನು ಬಯಸಿ ಈ ಕಿವಿಗಳು ಒಂದಕ್ಕೆರಡಾಗಿರುವುವು. ಆದ್ದರಿಂದ, ತಾವು ಏನಾದರು ಹೇಳುತ್ತೀರಿ, ನಾನೂ ಯಥಾಶಕ್ತಿಯಾಗಿ ಪ್ರಣಯೋಪಚಾರವನ್ನು ಒಪ್ಪಿಸುತ್ತ ಸಂತೋಷವಾಗಿ ಕೇಳುವೆನು.

"ಭಲೇ, ದೇವಿ, ಕಿವಿಗಳು ಒಂದಕ್ಕೆರಡಾಗಿವೆಯೆಂದು ಸಂತೋಷದಿಂದ ಉಬ್ಬುತ್ತಿರುವ ನಿನ್ನ ಸ್ಥಿತಿಯನ್ನು ಸೂಚಿಸಿಕೊಂಡೆ. ನೋಡು, ಕಾಮಪ್ರಪಂಚದಲ್ಲಿ ಪೂರ್ವರಂಗಪ್ರಸಾದನವು ತಿರ್ಯಗ್ಜಂತುಗಳಲ್ಲಿ ಹೆಚ್ಚು. ಉತ್ತರರಂಗ ಪ್ರಸಾದನವು ದೇವತೆಗಳದು. ಪೂರ್ವೋತ್ತರಂಗ ಪ್ರಸಾದನವು ಮನುಷ್ಯ ಪ್ರಸ್ಥಾನವು. ನೀನು ಸಹಜವಾಗಿ ದೇವತೆಯಾದುದರಿಂದ ನಿನಗೆ ಉತ್ತರರಂಗ ಪ್ರಸಾದನವು ಪ್ರಿಯವೆಂದು ನಾನು ಅವಸರಿಸಿದೆ. ನೀನು ದೇವತೆಯಾದರೂ ನನಗಾಗಿ ಮಾನುಷಧರ್ಮವನ್ನು ಅನುಸರಿಸಿರುವೆಂಬುದನ್ನು ಪರ್ಯಾಯವಾಗಿ ಸೂಚಿಸಿ ಉಪಕಾರ ಮಾಡಿದೆ. ಹಾಗೂ ಆಗಲಿ."

"ದೇವ, ಕಾಮವು ಮತ್ತೆಲ್ಲವನ್ನೂ ಮರೆಸುವ ವ್ಯಾಪಾರವು. ಅಲ್ಲಿಯೂ ತಾವು ತಿರ್ಯಗ್ದೇವಮಾನವ ಧರ್ಮಗಳನ್ನು ಮರೆಯದೆ ವ್ಯವಹರಿಸುವಿರಲ್ಲ! ಈ ವಿಚಕ್ಷಣೆಯು ತಮ್ಮೊಬ್ಬರಿಗೇ ಸಾಧ್ಯ! ಇದು ನಿಜವಾಗಿಯೂ ವಿಚಿತ್ರ!"

"ನೀನು ಹೇಳಿದುದು ಬಹಳ ಸರಿ. ಆದರೆ, ದೇವಿ, ಇದು ನನ್ನ ವಿಶೇಷ ಗುಣವಲ್ಲ. ಅಂದು ನಾವು ಸೇವಿಸಿದ

ಚ್ಯವನಮಹರ್ಷಿಯ ವರಪ್ರಸಾದ. ಮಾನವರು ಸಹಜವಾಗಿ ರಜೋಗುಣದವರು. ರಜೋಗುಣವು ಉಬ್ಬುತಗ್ಗಿನ ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬದಂತೆ ಸತ್ಯವನ್ನು ಅಯಥಾ ಆಗಿ ತೋರಿಸುವುದು. ಹಾಗೆ ಅಯಥಾ ಆಗಿ ಕಂಡುಕಂಡುದನ್ನೆಲ್ಲ ಸತ್ಯವೆಂದು ಭ್ರಮಿಸಿ, ಮೋಹಗೊಂಡು, ತನ್ನನ್ನು ಕಿರಿದು ಮಾಡಿಕೊಂಡು ಒದ್ದಾಡುವುದೇ ಮಾನವ ಧರ್ಮವು. ಇದನ್ನು ಮೀರಿ ವಸ್ತುವಸ್ತುವಿಗೂ ಸ್ವಧರ್ಮವಿರುವುದೆಂದು ತಿಳಿದು, ಪರಸ್ಪರ ಅವಿರುದ್ಧವಾಗಿ, ಮೋಹವನ್ನು ತುಳಿದು ಸ್ಮೃತಿಯನ್ನು ಮರೆದು ವರ್ತಿಸುವುದೇ ಧರ್ಮಾರಾಧನವು. ಹಸುವಿಗೆ ಮಾಂಸವನ್ನೂ, ಹುಲಿಗೆ ಹುಲ್ಲನ್ನೂ ಹಾಕಿದರೆ ಆದೀತೇ? ಸ್ತ್ರೀಯಾದರೇನು? ಪುರುಷನಾದರೇನು? ಎರಡೂ ಅಲ್ಲದ ಸಾಕ್ಷಿ ನಾನೆಂಬ ವೇದಾಂತ ಸಿದ್ಧಾಂತವು ನಿಜವಾದರೂ, ಕ್ಷೇತ್ರಧರ್ಮವಾದ ಕಾಮವಿಹಾರಕ್ಕೊಳಗಾಗಿ ವರ್ತಿಸಬೇಕಾದ ಈ ಕಾಲದಲ್ಲಿ ಆ ಸಿದ್ಧಾಂತವನ್ನು ಅವಲಂಬಿಸಲಾದೀತೆ? ಮಿಕ್ಕೆಡೆಯಲ್ಲಿ ನಾಯಕನು ನಾನು. ಇಲ್ಲಿ ನೀನು ನಾಯಕಿಯು. ನೋಡು ನವಿಲು ಕೂಡ ನಲ್ಲೆಯು ಕಾಣುವಂತೆ ನರ್ತಿಸಿ ಪ್ರಕೃತ್ಯಾರಮಣಾನುಕೂಲಳಾದ ಸಹಚರಿಯನ್ನು ಒಲಿಸಿಕೊಳ್ಳವುದು. ಅಲ್ಲವೆ? ನಾನೂ ಹಾಗೆಯೇ ಮಾಡುವೆನು. ವೈಣಿಕನ ಉಪಧರ್ಮವನ್ನು ಸಹಿಸಿಕೊಂಡು ಮೃದು ಮಧುರವಾಗಿ ನುಡಿಯುವ ವೀಣೆಯಂತೆ ನೀನೂ ನನ್ನ ಉಪಮರ್ದದಿಂದ ಉಪಚಿತರಸಳಾಗಿ ಸುಪ್ರೀತಳಾಗಿ ನನ್ನನ್ನು ಸಂಪ್ರೀತಿಗೊಳಿಸು."

ಹೀಗೆಯೇ ದಂಪತಿಗಳು ಮನೋವಾಕ್ಕಾಯಗಳಿಂದ ಒಬ್ಬರನ್ನೊಬ್ಬರು ಆರಾಧಿಸುವುದರಲ್ಲಿ ತತ್ಪರರಾಗಿ ತಮ್ಮ ಸುತ್ತ ಮುತ್ತಿನ ಪ್ರಪಂಚವನ್ನು ಸಾರ್ಥಕಗೊಳಿಸಿದರು.

---

**ಬದುಕಲೊಂದಿಷ್ಟು ಆಪ್ತ ಮಾತು** **ಲೇ : ಬಿ.ಎನ್.ರಮೇಶ ಬೊಂಗಳೆ**

# ವಿಳಂಬ ನೀತಿ ಸಲ್ಲದು

ಯಾವುದೇ ಕೆಲಸದಲ್ಲಿ, ಮಾಡುವಂತಹ ಕರ್ತವ್ಯದಲ್ಲಿ ಅಥವಾ ಆರೋಗ್ಯದ ವಿಚಾರದಲ್ಲಿ ವಿಳಂಬ ಮಾಡುವುದರ ಪರಿಣಾಮ ಭಯಂಕರವಾಗಿರುತ್ತದೆ. ಚಿಕಿತ್ಸೆ ವಿಳಂಬವಾದಾಗ ರೋಗಿ ಅಥವಾ ಗಾಯಾಳು ಸಾಯಬಹುದು. ರೋಗವಿದ್ದಾಗ್ಯೂ ವೈದ್ಯರಲ್ಲಿ ತೋರಿಸದಿದ್ದಾಗ ಅದು ಉಲ್ಬಣಿಸಬಹುದು ಅಥವಾ ಪ್ರಾಣಕ್ಕೆ ಕುತ್ತು ಬರಬಹುದು. ದರ್ಜಿ, ಅಕ್ಕಸಾಲಿಗ ಮುಂತಾದ ಕಸುಬುದಾರರ ವಿಳಂಬ ನೀತಿಯು ಗ್ರಾಹಕರನ್ನು ಕಳೆದುಕೊಳ್ಳಬಹುದು. ಓದು ವಿಳಂಬವಾದಾಗ ವಿದ್ಯಾರ್ಥಿ ಹಿಂದುಳಿಯಬಹುದು. ಏಳುವುದು ವಿಳಂಬವಾದಾಗ ಕೆಲಸಗಳೆಲ್ಲ ಏರು–ಪೇರಾಗಬಹುದು. ಪರೀಕ್ಷೆ–ಕೆಲಸದ ಸಂದರ್ಶನದಲ್ಲಿನ ವಿಳಂಬ ಭವಿಷ್ಯಕ್ಕೆ ಮಾರಕವಾಗಬಹುದು. ಕೆಲವೊಂದು ನಿರ್ಧಾರಗಳು ವಿಳಂಬವಾದಾಗ ತನಗೆ, ಕುಟುಂಬಕ್ಕೆ, ಸಮಾಜಕ್ಕೆ ಕಂಟಕಪ್ರಾಯವಾಗಬಹುದು. ಕೆಲವೊಂದು ಯೋಜನೆಗಳು ವಿಳಂಬವಾದಾಗ ಪ್ರೀತಿಪಾತ್ರ ವ್ಯಕ್ತಿಯ ಮುಖದರ್ಶನವಾಗದಿರಬಹುದು. ವಿಳಂಬವಾಗಿ ಸುದ್ದಿ ಪ್ರಕಟಗೊಂಡಾಗ ಪತ್ರಿಕೆ ತನ್ನತನವನ್ನು ಕಳೆದುಕೊಳ್ಳಬಹುದು. ಹೀಗೆ ವಿಳಂಬ ನೀತಿ ಯಾವುದಕ್ಕೂ ಸಲ್ಲದು ಎಂಬುದೇ ನನ್ನ ಸ್ಪಷ್ಟ ಅಭಿಪ್ರಾಯ.

ನೆಹರೂರವರು ಕಾರ್ಯಕ್ರಮವೊಂದಕ್ಕೆ ಮೂರುತಾಸು ತಡವಾಗಿ ಹೋದಾಗ ಸಭಿಕರ ಆಕ್ರೋಶಕ್ಕೆ ಒಳಗಾಗಬೇಕಾಯಿತೆಂದು ಅವರ ಜೀವನ ಚರಿತ್ರೆಯಿಂದ ಗೊತ್ತಾಗುತ್ತದೆ. ಮನಸ್ಸಿನಲ್ಲಿ ಹೊಳೆದ ಭಾವನೆಗಳು ತಡವಾಗಿ ಕವಿತೆಯ ರೂಪ ಪಡೆದಾಗ ಅದು ನೀರಸ ಪದ್ಯವಾಯಿತೆಂದು ವರಕವಿ ದ. ರಾ. ಬೇಂದ್ರೆ ಲೇಖನವೊಂದರಲ್ಲಿ ಹೇಳುತ್ತಾರೆ.

ಸೀಜರ್ ರಾಜ ದರ್ಬಾರಿಗೆ ಹೋಗಿ ಸಮಾಚಾರವೊಂದನ್ನು ಓದಲು ವಿಳಂಬಿಸಿದಾಗ ಆತ ತನ್ನ ಪ್ರಾಣ ಕಳೆದುಕೊಳ್ಳಬೇಕಾಯಿತು. ಕರ್ನಲ್ ರಾಹತ್ ಇಸ್ಪೀಟ್ ಆಟದಲ್ಲಿ ಮುಳುಗಿದ್ದಾಗ ಆತನ ನೌಕರನೋರ್ವ ವಾಶಿಂಗ್ಟನ್‌ನ ಸೇನೆಗೆ ಸಂಬಂಧಿಸಿದಂತಹ ಸೂಚನಾ ಪತ್ರವೊಂದನ್ನು ಆತನಿಗೆ ನೀಡುತ್ತಾನೆ. ಆದರೆ ಆತ ಅದನ್ನು ಓದದೆಯೇ ತನ್ನ ಜೇಬಿನಲ್ಲಿರಿಸಿಕೊಂಡು ಆಟವಾಡುತ್ತ ಹೋಗುತ್ತಾನೆ. ಆಟ ಮುಗಿದ ನಂತರ ಆತ ತನ್ನ ಸೈನಿಕರಿಗೆ ಶತ್ರುಗಳನ್ನು ಎದುರಿಸಲು ಸನ್ನದ್ಧರಾಗುವಂತೆ ಕರೆ ನೀಡುತ್ತಾನೆ. ಆದರೆ ಕಾಲ ಮಿಂಚಿತ್ತು. ಶತ್ರುಗಳು ಆತನನ್ನು ಸುತ್ತುವರೆದು ಬಂಧಿಸಿದ್ದೇ ಅಲ್ಲದೆ ಆತನ ಪ್ರಾಣಹರಣ ಮಾಡುತ್ತಾರೆ. ಕೇವಲ ಕೆಲವೇ ನಿಮಿಷಗಳ ವಿಳಂಬದಿಂದಾಗಿ ಆತ ತನ್ನ ಮಾನ, ಸ್ವಾತಂತ್ರ್ಯ ಹಾಗೂ ಬದುಕನ್ನೇ ಕಳೆದುಕೊಳ್ಳಬೇಕಾಯಿತು.

ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಎಂದಾದರೂ ಒಮ್ಮೆ ಅಂತಹ ಸಂದರ್ಭಗಳು ಖಂಡಿತ ಬರುತ್ತವೆ. ಅವುಗಳ ಮೇಲೆ ಆತನ ಭಾಗ್ಯ ಅಥವಾ ದೌರ್ಭಾಗ್ಯ ಅವಲಂಬಿಸಿರುತ್ತದೆ. ಮನಸ್ಸು ತುಸು ಹಿಂಜರಿದರೂ ಅಥವಾ ಹೆದರಿದರೂ ಸಾಕು ಎಲ್ಲವೂ ಕೊಚ್ಚಿ ಹೋಗುತ್ತದೆ. ನಶಿಸಿ ಹೋಗುತ್ತದೆ.

ಮನುಷ್ಯ ತಾನು ಹಿಡಿದ ಒಂದು ಕೆಲಸ ಮುಗಿದೊಡನೆಯೇ ಮತ್ತೊಂದು ಕೆಲಸದಲ್ಲಿ ತನ್ನನ್ನು ತೊಡಗಿಸಿಕೊಳ್ಳಬೇಕು. ಆದರೆ ಆಗುವುದಾದರೂ ಏನು? ವ್ಯಕ್ತಿ ಒಂದು ಕೆಲಸ ಮಾಡಿ ಮುಗಿಸಿದಾಗ ವಿಶ್ರಮಿಸಿಕೊಳ್ಳುತ್ತಾನೆ. ಆ ವಿಶ್ರಾಂತಿಯಾದರೂ ಏನು? ಆಲಸ್ಯವೆನ್ನುವ ಮದಿರೆ. ಆ ವಿಶ್ರಾಂತಿಯ ಮೂಲಕ ಆತ ತನ್ನ ಪೂರ್ವಸಂಚಿತ ಸಮಯದ ಮೌಲ್ಯವನ್ನು ಕಳೆದುಕೊಂಡು ಬಿಡುತ್ತಾನೆ. ಆ ವಿಶ್ರಾಂತಿಯಲ್ಲಿ ಆತನಿಗೆ ವರ್ತಮಾನ ಮತ್ತು ಭವಿಷ್ಯದ ಮಸುಕಾದ ಬೆಳಕೂ ಕೂಡ ಪುನಃ ಗೋಚರಿಸುವುದಿಲ್ಲ. ಆದ್ದರಿಂದ ಮನುಷ್ಯನಿಗೆ ಸ್ವಾಭಾವಿಕವಾದ ವಿಶ್ರಾಂತಿಯನ್ನು ಹೊರತುಪಡಿಸಿ ಇನ್ನುಳಿದಂತಹ ವಿಶ್ರಾಂತಿಯ ಮೂಲಕ ಸಮಯವನ್ನು



ಉಬರ್ ಕಪ್ ಸಂಬಂಧಿಸಿದ ಕ್ರೀಡೆ – ಬ್ಯಾಡ್ಮಿಂಟನ್ ( ಮಹಿಳೆಯರು )

ಹಾಳು ಮಾಡಿಕೊಳ್ಳುವ ಅಗತ್ಯವಿರುವುದಿಲ್ಲ.

ಯಾವ ವ್ಯಕ್ತಿ ಆ ಕೂಡಲೇ ಕೆಲಸ ಮಾಡುತ್ತಾನೋ ಅಂತಹವನ ಕೆಲಸದಲ್ಲಿ ಕೆಲವೊಂದು ತಪ್ಪುಗಳಾಗುತ್ತವೆಯಾದರೂ ಆತ ಒಳ್ಳೆಯ ನಿರ್ಧಾರ ತೆಗೆದುಕೊಳ್ಳುವಂತಹ ಭವಿಷ್ಯವೇತ್ತನಾಗುತ್ತಾನೆ ಅಥವಾ ವಿಳಂಬ ಮಾಡಿ ಕೆಲಸ ಮಾಡುವವನಿಗಿಂತ ಹೆಚ್ಚು ಲಾಭದಲ್ಲಿರುತ್ತಾನಲ್ಲದೆ ಆತನಿಗೆ ಖಂಡಿತ ಗೆಲುವು ದೊರೆಯುತ್ತದೆ.

ರಾಷ್ಟ್ರಪಿತನಲ್ಲಿ ಒಮ್ಮೆ ಪ್ರಶ್ನಿಸಲಾಯಿತಂತೆ–"ತಾವು ಇಷ್ಟೆಲ್ಲ ಕೆಲಸ ಕಾರ್ಯಗಳ ಮಧ್ಯೆಯೂ ಸಾಮಾಜಿಕ ಕಳಕಳಿಯ ಇತರೆ ಕೆಲಸಗಳಲ್ಲಿಯೂ ತೊಡಗಿಸಿಕೊಳ್ಳಲು ಸಮಯ ಹೇಗೆ ಮಾಡಿಕೊಳ್ಳುತ್ತೀರಿ?" ಅದಕ್ಕವರು ಉತ್ತರಿಸಿದರಂತೆ–"ನಾನು ಅಂದಂದಿನ ಕೆಲಸವನ್ನು ಅಂದಂದೇ ಮಾಡಿ ಮುಗಿಸುತ್ತೇನೆ."

ಯಾರೆಲ್ಲ ಅಂದಿನ ಕೆಲಸವನ್ನು ಮರು ದಿನಕ್ಕೆ ಮುಂದೂಡಿದರೋ ಅವರೆಲ್ಲ ಜಗತ್ತಿನಲ್ಲಿ ಹಿಂದೆಯೇ ಉಳಿದು ಬಿಟ್ಟಿರುತ್ತಾರೆ. ಬದುಕೆನ್ನುವುದೊಂದು ಸ್ಪರ್ಧೆಯಿದ್ದಂತೆ, ಯಾವುದಾದರೊಂದು ವಿಚಾರವಾಗಿ ನಾವು ಕಣದಲ್ಲಿದ್ದೇ ಇರುತ್ತೇವೆ. ಅಲ್ಲಿ ಐದು ನಿಮಿಷದ ವಿಳಂಬ ಅಥವಾ ಹಿಂಜರಿಕೆಯೂ ಕೂಡ ನಮಗೆ ಸೋಲುಣಿಸಬಹುದು, ಸಿಗಬೇಕಾದ ಸ್ಥಾನ–ಮಾನ–ಅಧಿಕಾರ ಇನ್ನಾರಿಗೋ ಸಿಕ್ಕಿಬಿಡಬಹುದು. ಐದು ನಿಮಿಷ ಮೊದಲೇ ಆಗಿದ್ದಿದ್ದರೆ ಎಲ್ಲವನ್ನೂ ಗೆಲ್ಲಬಹುದಿತ್ತು. ಉಳಿಸಿಕೊಳ್ಳಬಹುದಿತ್ತು. ಇನ್ನು ಬದುಕಂತೂ ದೀರ್ಘವಾದದ್ದು, ಆ ಮಾರ್ಗದಲ್ಲಿನ ಓಟವಂತೂ ಇನ್ನಷ್ಟು ಕಠಿಣವಾದ ಸ್ಪರ್ಧೆಯೇ ಆಗಿರುತ್ತದೆ.

---

ಧರೆಗಿಳಿದ ದಿವ್ಯತೇಜ ಲೇ: ಲ. ನ. ಶಾಸ್ತ್ರೀ

# ದಿಗ್ವಿಜಯಾರಂಭ ದಕ್ಷಿಣಾಪಥ

ಆಚಾರ್ಯರು ಶಿಷ್ಯಪರಿವಾರ ಸಮೇತರಾಗಿ ದಕ್ಷಿಣ ದೇಶದ ದಿಗ್ವಿಜಯವನ್ನು ಆರಂಭಿಸಲು ನಿಶ್ಚಯಿಸಿದನು.

ಪ್ರಯಾಣಕ್ಕೆ ದಿನ ನಿಶ್ಚಯವಾಯಿತು. ನಾಲ್ವರು ಪ್ರಮುಖ ಶಿಷ್ಯರೂ ಜೊತೆಯಲ್ಲಿ ಇರಬೇಕೆಂದು ನಿರ್ಧಾರವಾಯಿತು. ಕೃಷ್ಣ ಮಿಶ್ರನು ಶೃಂಗಗಿರಿಯಲ್ಲಿಯೇ ಇದ್ದು ಮಾತೆ ಉಭಯ ಭಾರತಿಯ ಯೋಗಕ್ಷೇಮ ನೋಡಿಕೊಳ್ಳತಕ್ಕದ್ದೆಂದು ನಿಶ್ಚಯವಾಯಿತು. ಕಾಲಟಿಯಿಂದ ಬಂದಿದ್ದ ಕೃಷ್ಣನ್‌ಕುಟ್ಟಿಯೂ ತಾನು ಶೃಂಗಗಿರಿಯಲ್ಲಿಯೇ ಇರುವುದಾಗಿ ತಿಳಿಸಿದ. ಆಚಾರ್ಯರೊಡನೆ ಬಂದ ಉತ್ತರ ದೇಶದ ಹಲವಾರು ವಟುಗಳು, ಬ್ರಹ್ಮಚಾರಿಗಳು, ವೃದ್ಧ ಸಂನ್ಯಾಸಿಗಳು ಶೃಂಗಗಿರಿಯಲ್ಲಿಯೇ ಇರಲು ಅಪೇಕ್ಷೆಪಟ್ಟರು. ಆಚಾರ್ಯರು ಒಪ್ಪಿದರು. ಗ್ರಾಮದ ಮುಖ್ಯಸ್ಥರಿಗೆ, ಶಾರದಾಪೀಠದ ವ್ಯವಸ್ಥೆಗೂ, ಮಠದಲ್ಲಿರುವ ವಟು ಸಂನ್ಯಾಸಿಗಳ ಯೋಗಕ್ಷೇಮದ ಬಗೆಗೂ ಸಲಹೆಗಳನ್ನು ಇತ್ತರು.

ದಿಗ್ವಿಜಯ ಹೊರಡುವ ಹಿಂದಿನ ದಿನ ಆಚರ್ಯರು ಮಾತೆ ಉಭಯ ಭಾರತಿಯ ದರ್ಶನಕ್ಕೆಂದು ಬಂದರು. ಗುಹೆಯ ಬಾಗಿಲಲ್ಲಿದ್ದ ಬ್ರಹ್ಮಚಾರಿಯು "ತಾಯಿಯವರು ನಿನ್ನೆಯಿಂದ ಹೊರಬಂದಿಲ್ಲ. ಅವರ ಸೇವಕಿಯರು ತಂದಿಟ್ಟ ಹಾಲು ಹಣ್ಣನ್ನೂ ಸ್ವೀಕರಿಸಲಿಲ್ಲ "ಎಂದನು. ಆ ವೇಳೆಗೆ ಸೇವಕಿಯರೂ ಬಂದು ಆಚಾರ್ಯರಿಗೆ ಅಭಿವಾದನ ಮಾಡಿ "ಗುರುದೇವ, ಮಾತೆಯವರು ಇತ್ತೀಚೆಗೆ ಆಹಾರವನ್ನು ತ್ಯಜಿಸಿದ್ದಾರೆ. ತೀರಾ ಬಲವಂತ ಮಾಡಿದಾಗ ಒಂದು ಮುಷ್ಟಿಯಷ್ಟು ಒಣ ದ್ರಾಕ್ಷಿ ಹಣ್ಣನ್ನು ಮಾತ್ರ ತೆಗೆದುಕೊಳ್ಳುತ್ತಾರೆ" ಎಂದರು.

"ನಾನು ಗುಹೆಯೊಳಗೆ ಹೋಗಿ ತಾಯಿಯ ದರ್ಶನ ಮಾಡಬಹುದೇ? "ಆಚಾರ್ಯರು ಕೇಳಿದರು.

"ದರ್ಶನ ಮಾಡಬಹುದು. ಆದರೆ ಅದರ ಆಜ್ಞೆಯಿರದೆ ಯಾರನ್ನೂ ಒಳಕ್ಕೆ ಬಿಡಬಾರದು ಎಂದು ಮಾತೆ ಅಪ್ಪಣೆ ಮಾಡಿದ್ದಾರೆ." "ಹಾಗಾದರೆ ಆಜ್ಞೆಯನ್ನು ಮುರಿಯುವುದು ಬೇಡ. ನಾನು ನಾಳೆ ಪ್ರಾತಃಕಾಲ ಇಲ್ಲಿಂದ ಸಂಚಾರ ಹೊರಡಲಿದ್ದೇನೆ. ಅದನ್ನು ಅವರಲ್ಲಿ ವಿಜ್ಞಾಪನೆ ಮಾಡಬೇಕೆಂದು ಬಂದೆ" ಎಂದರು ಆಚಾರ್ಯರು.

"ಆಯಿತು, ಅವರು ಬಹಿರ್ಮುಖರಾದಾಗ ತಮ್ಮ ಸಂದೇಶವನ್ನು ತಿಳಿಸುತ್ತೇವೆ" ಎಂದರು ಅ ಸೇವಕಿಯರು.

ಆಚಾರ್ಯರು ಅಲ್ಲಿಂದ ಇನ್ನೇನು ಹೊರಡಬೇಕು, ಅಷ್ಟರಲ್ಲಿ ದೇವಿ ಉಭಯ ಭಾರತಿಯವರು ನಿಧಾನವಾಗಿ ಗುಹೆಯ ದ್ವಾರಕ್ಕೆ ಬಂದರು. ಶ್ವೇತದುಕೂಲ ಧರಿಸಿದ್ದ ಮಾತೆಯವರ ಬಾಲಾರ್ಕವರ್ಣ ಶೋಭಿತವಾದ ಶ್ರೀಮುಖದಲ್ಲಿ ಸ್ಫಟಿಕಮಣಿಯ ದೈವೀ ತೇಜಸ್ಸು ಒಸರುತ್ತಿತ್ತು. ಶರೀರ ತೀರಾ ಕೃಶವಾಗಿತ್ತು. ಕೊರಳಲ್ಲೊಂದು ರತ್ನಹಾರ. ಬಲಗೈಯಲ್ಲಿ ಅಕ್ಷಮಾಲೆಯಿತ್ತು. ಎಡಹಸ್ತವನ್ನು ಸ್ವಲ್ಪ ಮೇಲಕ್ಕೆತ್ತಿ ಅಭಯ ಸೂಚಿಸುತ್ತಿದ್ದರು. ಆಚಾರ್ಯರು ಆಕೆಗೆ ನಮಸ್ಕಾರ ಮಾಡಿ "ತಾಯಿ ತಮ್ಮ ಆಶೀರ್ವಾದಿಂದ ಇಲ್ಲಿ ನನ್ನ ಕೆಲಸ ಸುಗಮವಾಯಿತು. ನಾಳೆಯ ಪ್ರಾತಃ ಕಾಲ ಸಂಚಾರವಾರಂಭಿಸುತ್ತಿದ್ದೇನೆ. ಇನ್ನೂ ಮೂರು ಸ್ಥಳಗಳಲ್ಲಿ ಧರ್ಮಪೀಠಗಳನ್ನು ಸ್ಥಾಪಿಸಲಿದ್ದೇನೆ. ಅಲ್ಲಿಯೂ ತಾವು ಅಂಶರೂಪವಾಗಿ ಸನ್ನಿಹಿತರಾಗಬೇಕು. ಇದೇ ನನ್ನ ಪ್ರಾರ್ಥನೆ" ಎಂದರು. ಉಭಯ ಭಾರತಿ "ಆಚಾರ್ಯ, ತಮ್ಮ ಅಭೀಷ್ಟವು ಸಿದ್ಧಿಸುತ್ತದೆ. ತಮ್ಮ ಅಪೇಕ್ಷೆಯಂತೆ ತಾವು ಸ್ಥಾಪಿಸುವ ಧರ್ಮಪೀಠಗಳಲ್ಲಿ ಜ್ಞಾನದಾತೆಯಾದ ಶ್ರೀ ಶಾರದೆಯು ನೆಲಸುತ್ತಾಳೆ. ತಾವು ಕಾಶ್ಮೀರಕ್ಕೂ ದಯಮಾಡಿಸಿ ಅಲ್ಲಿರುವ ಶ್ರೀ ಶಾರದಾ ಪೀಠದಲ್ಲಿ ಇರುವ

ಸರ್ವಜ್ಞಸಿಂಹಾಸನವನ್ನು ಅಲಂಕರಿಸಿರಿ. ಶುಭಮಸ್ತು" ಎಂದು ಹೇಳಿ ಪುನಃ ನಿಧಾನವಾಗಿ ಗುಹಾಪ್ರವೇಶ ಮಾಡಿದರು. ಬೆಳಕೊಂದು ಬಂದು ಮಿಂಚಿ ಮಾಯವಾದಂತಾಯಿತು.

ಪ್ರಯಾಣದ ಸಡಗರ. ನಾಲ್ಕಾರು ವರ್ಷಗಳಿಂದ ಶೃಂಗಗಿರಿಯಲ್ಲಿಯೇ ಬೀಡುಬಿಟ್ಟಿದ್ದ ವೃಷಭ, ಅಶ್ವಗಳಿಗೆಲ್ಲಾ ಪುನಃ ಚಟುವಟಿಕೆ ಪ್ರಾರಂಭವಾಯಿತು. ಹಿಂದೆ ಆಚಾರ್ಯರೊಡನೆ ಹೊರಟ್ಟಿದ್ದ ವೃಷಭರಾಜನನ್ನು ಈ ಸಲ ಶೃಂಗಗಿರಿಯಲ್ಲಿಯೇ ಬಿಟ್ಟರು. ಅದರ ಸ್ಥಾನಕ್ಕೆ ಧರ್ಮಧ್ವಜವನ್ನು ಧರಿಸಲು ಬೇರೊಂದು ವೃಷಭ ಸಿದ್ಧವಾಗಿತ್ತು. ಹಲವಾರು ಗಾಡಿಗಳು, ಒಂದೆರಡು ಪಾಲಕಿಗಳು, ಮೇನೆಗಳು ಸಿದ್ಧವಾದವು. ಹಿಂದಿನಂತೆ ಆಚಾರ್ಯರು ಪಾದಚಾರಿಯಾಗಿ ಹೋಗುವುದನ್ನೇ ಇಷ್ಟಪಟ್ಟರು. ಆದರೆ ಭಕ್ತರು ಒಪ್ಪಲಿಲ್ಲ. "ತಾವು ತಮ್ಮ ಗುರುದೇವರ ದರ್ಶನವಾಗುವವರೆಗೂ ಪಾದಚಾರಿಯಾಗಿಯೇ ಯಾತ್ರೆ ಮಾಡುವುದಾಗಿ ನಮಗೆ ತಿಳಿಸಿದ್ದೀರಿ. ಗುರುದೇವರ ದರ್ಶನ ಮಾಡಿಕೊಂಡು ಶೃಂಗಗಿರಿಯವರೆಗೂ ನಡೆದೇ ಬಂದಿರಿ. ಈಗ ತಾವು ಪಾಲಕಿಯಲ್ಲಾಗಲೀ, ಮೇನೆಯಲ್ಲಾಗಲೀ ದಯಮಾಡಿಸಬೇಕು" ಎಂದು ಕೋರಿಕೊಂಡರು. ಆಚಾರ್ಯರು "ಈ ಶರೀರಕ್ಕೆ ಆಯಾಸವಾದಾಗ ಮಾತ್ರ ಹಾಗೆ ಮಾಡೋಣ" ಎಂದರು. ಶಿಷ್ಯರು ಬಿಡಲಿಲ್ಲ. "ಇನ್ನೂ ಪರಿಶ್ರಮಿಸಬೇಕಾದ ದೂರ ವಿಪರೀತವಾಗಿದೆ. ಇಲ್ಲಿಂದ ರಾಮೇಶ್ವರಕ್ಕೂ, ಅಲ್ಲಿಂದ ಕಾಶ್ಮೀರ ಕೇದಾರಕ್ಕೂ ಹೋಗಬೇಕು. ಮಧ್ಯದಲ್ಲಿ ಅಲ್ಲಲ್ಲಿ ನಿಲ್ಲಬೇಕು. ಮಳೆಗಾಲದಲ್ಲಿ ಪ್ರಯಾಣ ತೀರಾ ಸಾಧ್ಯವಾಗುವುದೇ ಇಲ್ಲ. ಈ ಎಲ್ಲಾ ಕಾರಣಗಳಿಂದ ತಾವು ವಾಹನ ಸಂಚಾರಕ್ಕೆ ದಯಮಾಡಿ ಒಪ್ಪಿಕೊಳ್ಳಬೇಕು" ಎಂದು ಒತ್ತಾಯ ಮಾಡಿದರು. ಶಿಷ್ಯರ ಭಕ್ತಿ ಪುರಸ್ಸರವಾದ ಪ್ರಾರ್ಥನೆಗೆ, ಪ್ರೇಮದ ಪ್ರಾರ್ಥನೆಗೆ ಆಚಾರ್ಯರು ಒಪ್ಪಿದರು.

ಮಾರನೆಯ ದಿನ ಪ್ರಾತಃಕಾಲ ಸ್ನಾನಾಹ್ನೀಕಗಳನ್ನು ಬೆಳೆಸಿಕೊಂಡು, ಶ್ರೀ ಶಾರದಾ ಮತ್ತು ಶ್ರೀ ವಿಭಾಂಡಕೇಶ್ವರರ ದರ್ಶನಮಾಡಿಕೊಂಡು, ಆಚಾರ್ಯರು ಶಿಷ್ಯಸಮೇತರಾಗಿ ಶ್ರೀ ಋಷ್ಯಶೃಂಗೇಶ್ವರರ ದರ್ಶನಕ್ಕಾಗಿ ಕೀಳ್ಗ ಅಗ್ರಹಾರಕ್ಕೆ ಆಗಮಿಸಿದರು. ಅಲ್ಲಿ ಭಕ್ತ ಶಿಷ್ಯರಿಂದ ಸ್ವಾಗತಿಸಲ್ಪಟ್ಟರು. ಆಚಾರ್ಯರು ಶ್ರೀ ಋಷ್ಯಶೃಂಗರ ದರ್ಶನಮಾಡಿ ಪ್ರಯಾಣಕ್ಕೆ ಅನುಮತಿಯನ್ನು ಪ್ರಾರ್ಥಿಸಿದರು.

ಆ ರಾತ್ರಿ ಅಲ್ಲಿಯೇ ಇದ್ದು, ಮಾರನೆಯ ಪ್ರಾತಃಕಾಲ ನಸುಕಿನಲ್ಲಿಯೇ ತಮ್ಮ ನಾಲ್ವರು ಶಿಷ್ಯರನ್ನು ಕರೆದುಕೊಂಡು ಆಚಾರ್ಯರು ಶ್ರೀ ನೃಸಿಂಹ ಪರ್ವತಕ್ಕೆ ಬಂದು, ಅಲ್ಲಿಯ ತೀರ್ಥಸ್ನಾನ ಮಾಡಿ ಧ್ಯಾನಮಗ್ನರಾದರು. ಇಡೀ ದಿನವೆಲ್ಲಾ ಧ್ಯಾನಮಗ್ನರಾಗಿದ್ದ ಆಚಾರ್ಯರು ಮಾರನೆಯ ಸೂರ್ಯೋದಯಕ್ಕೆ ಸರಿಯಗಿ ಬಹಿರ್ಮುಖರಾದರು. ತನ್ನ ವ್ಯಾಪಕ ರೂಪದಲ್ಲಿ ಸನ್ನಿಹಿತವಾಗಿರುವ ಶ್ರೀ ನೃಸಿಂಹ ಸ್ವಾಮಿಯನ್ನು ಶ್ಲೋಕಪಂಚಕದಿಂದ ಪ್ರಾರ್ಥಿಸಿದರು:

**ತ್ವತ್‌ಪ್ರಭುಜೀವ ಪ್ರಿಯಮಿಚ್ಛಸಿಚೇನ್ನರಹರಿ ಪೂಜಾಂ ಕುರು ಸತತಮ್**
**ಪ್ರತಿಬಿಂಬಾಲಕೃತಧೃತಿಕುಶಲೋ ಬಿಂಬಾಲಂಕೃತಿಮಾತನುತೇ ।**
**ಚೇತೋಭೃಂಗ ಭ್ರಮಸಿ ವೃಥಾಭವಮರುಭೂಮೌ ವಿರಸಾಯಾಂ**
**ಭಜ ಭಜ ಲಕ್ಷ್ಮೀನರಸಿಂಹಾನಘ ಪದಪಂಕಜ ಮಕರಂದಮ್ ॥**

ಮನಸ್ಸೆಂಬ ಭ್ರಮರವೇ, ಪ್ರತಿಬಿಂಬವು ಅಲಂಕೃತವಾಗಬೇಕಾದರೆ ಬಿಂಬವು ಅಲಂಕೃತವಾಗಿರಬೇಕು. ಭವವೆಂಬ ಮರುಭೂಮಿಯಲ್ಲಿ ನೀನು ವ್ಯರ್ಥವಾಗಿ ಅಲೆಯುತ್ತಿದ್ದೀಯೆ. ಜೀವನೇ, ನಿನ್ನ ಹಿತವನ್ನು ನೀನು ಆಶಿಸುವುದಾದರೆ, ಪರಬ್ರಹ್ಮ ಸ್ವರೂಪವಾದ ಶ್ರೀ ಲಕ್ಷ್ಮೀನರಸಿಂಹನ ಚರಣ ಕಮಲಗಳನ್ನು ಸ್ಮರಿಸು, ಅವುಗಳ ಮಕರಂದವನ್ನು ಆಸ್ವಾದಿಸು.

ಹೀಗೆ ಆತ್ಮಾ ರಾಮರಾಗಿ ಶ್ರೀ ನೃಸಿಂಹಪರ್ವತದಲ್ಲಿ ಒಂದೆರಡು ದಿನವಿದ್ದು ಅನಂತರ ಅಲ್ಲಿಂದ ಗುರುದೇವರು ದಕ್ಷಿಣದ ದಿಗ್ವಿಜಯವನ್ನು ಆರಂಭಿಸಿದರು.

ದಾರಿಯುದ್ಧಕ್ಕೂ ಆಚಾರ್ಯ ಭವ್ಯ ಸ್ವಾಗತವು ಸಿಕ್ಕಿತು. ಆಚಾರ್ಯರ ವೇಂದಾತ ಧರ್ಮ ಮತ್ತು ಅದ್ವೈತ ತತ್ವವನ್ನು ಒಪ್ಪದವರೂ ಸಹ ಅವರ ಭವ್ಯ ವ್ಯಕ್ತಿತ್ವಕ್ಕೆ ಮಾರು ಹೋಗುತ್ತಿದ್ದರು. ಎತ್ತರವಾದ ನಿಲುವು, ಕಾಷಾಯಾಂಬರ, ನೊಸಲಲ್ಲಿ ಭಸ್ಮ, ಕೊರಳಲ್ಲಿ ರುದ್ರಾಕ್ಷಮಾಲೆ, ಹಸ್ತದಲ್ಲಿ ಧ್ವಜ ಸಹಿತವಾದ ದಂಡ, ಕೇಸರಿಯಂತೆ ಧೀರಗಂಭೀರವಾದ ಹೆಜ್ಜೆಯನ್ನು ಇಡುತ್ತಾ, ಶಿಷ್ಯರೊಡನೆ ಶಾಸ್ತ್ರ ವಿಚಾರ ಮಾಡುತ್ತ ಬರುತ್ತಿದ್ದ ಆಚಾರ್ಯರನ್ನು ಕಂಡ ಯಾರೂ 'ಈತನೇನು ಓಡಾಡುತ್ತಿರುವ ಪರಮೇಶ್ವರನೋ ದಕ್ಷಿಣಾಮೂರ್ತಿಯೋ ಇರಬೇಕು' ಎಂದುಕೊಳ್ಳುತ್ತಿದ್ದರು. "ನಮ್ಮ ಅಗ್ರಹಾರಕ್ಕೆ ಬನ್ನಿ, ನಮ್ಮ ಗ್ರಾಮಕ್ಕೆ ಬನ್ನಿ, ನಮ್ಮ ನಗರಕ್ಕೆ ದಯಮಾಡಿಸಿ" ಎಂದು ಜನ ಮುಗಿಬಿದ್ದು ಆಚಾರ್ಯರನ್ನು ಪ್ರಾರ್ಥಿಸುತ್ತಿದ್ದರು.

ಜನ ಸಾಮಾನ್ಯರಿಗೆ ಜೀವನ ಧರ್ಮವನ್ನೂ–ಸತ್ಯವಚನ, ನ್ಯಾಯಪರತೆ, ಪರೋಪಕಾರ, ಅಸಂಗ್ರಹ, ಅಹಿಂಸೆ, ದಾನ– ಇವನ್ನು ಬೋಧಿಸುತ್ತ, ವಿದ್ವಾಂಸರಿಗೆ ವೇದಾಂತ ತತ್ವವನ್ನು ಆಚಾರ ಶುದ್ಧಿಯನ್ನೂ ಉಪದೇಶಿಸುತ್ತಾ ಆಚಾರ್ಯರು ಪ್ರತಿಯೊಂದು ಸ್ಥಳದಲ್ಲಿಯೂ ಒಂದು, ಎರಡು ದಿನ ಮಾತ್ರ ನಿಲ್ಲುತ್ತ ಭರತ ಖಂಡದ ಚತುರ್ಧಾಮಗಳಲ್ಲಿ ಒಂದಾದ ಶ್ರೀ ರಾಮೇಶ್ವರ ಕ್ಷೇತ್ರಕ್ಕೆ ದಯಮಾಡಿಸಿದರು.

ಶ್ರೀ ರಾಮೇಶ್ವರ ಕ್ಷೇತ್ರದಲ್ಲಿ ಆಚಾರ್ಯರನ್ನು ಬಹುಜನ ಯಾತ್ರಿಕರು, ಸ್ಥಳದ ವಿದ್ವಾಂಸರೂ ಸ್ವಾಗತಿಸಿದರು. ಆಚಾರ್ಯರು ಶ್ರೀ ರಾಮನಾಥ ಸ್ವಾಮಿಯನ್ನು ಸ್ವತಃ ಅರ್ಚಿಸಲು ಇಚ್ಚಿಪಟ್ಟರು. ಶೈವರೇ ಅಧಿಕವಾಗಿದ್ದ ಅರ್ಚಕರು ಆಚಾರ್ಯರ ತಪಸ್ಸು, ಜ್ಞಾನ, ದೃಷ್ಟಿವೈಶಾಲ್ಯ, ಸರ್ವ ದೇವತಾ ಸಮ ಭಾವನೆ ಇವನ್ನೆಲ್ಲಾ ಕೇಳಿ ತಿಳಿದಿದ್ದುದರಿಂದ, ಸಂತೋಷವಾಗಿ ಆಚಾರ್ಯರನ್ನು ಪೂಜೆ



ವಿಶ್ವಕಪ್ ಸಂಬಂಧಿಸಿದ ಕ್ರೀಡೆ – ಕ್ರಿಕೆಟ್

ಮಾಡಲು ಕೇಳಿಕೊಂಡರು. ಪೂಜೆಗೆ ಅಣಿ ಮಾಡಿ ಕೊಟ್ಟರು. ಅಲ್ಲಿ ಪೂಜಾಭಿಷೇಕಗಳನ್ನು ನೆರವೇರಿಸಿದ ಆಚಾರ್ಯರು, ಒಂದೆರಡು ದಿನ ಕಾಲ ಅಲ್ಲಿಯೇ ನಿಂತು, ಅಲ್ಲಿದ್ದ ವಿದ್ವಾಂಸರೊಡನೆ ಚರ್ಚೆ ಮಾಡಿ, ಅವರನ್ನೆಲ್ಲಾ ತಮ್ಮ ವಿದ್ವತ್ತು, ಪ್ರತಿಭೆ, ಜ್ಞಾನಗಳಿಂದ ವಿಸ್ಮಯಗೊಳಿಸಿದರು. ಬಹಳ ಜನ ಪಡಿಂತರು ಆಚಾರ್ಯರ ಅನುಯಾಯಿಗಳಾದರು. ದೇವಸ್ಥಾನದ ಅರ್ಚಕರು ಆಚಾರ್ಯರಿಂದ ಮಂತ್ರೋಪದೇಶವನ್ನು ಪಡೆದು ಅವರ ಶಿಷ್ಯರಾದರು. ಪೂಜಾದಿಗಳು ಶೈವಾಗಮವನ್ನೇ ಅನುಸರಿಸಿದರೂ ಅಶುದ್ಧ ಆಚಾರಗಳನ್ನು ನಿವಾರಿಸಿ ಆಚಾರ್ಯರು ವೈದಿಕ ಮಾರ್ಗವನ್ನು ಜತೆಯಲ್ಲಿಯೇ ರೂಢಿಗೆ ತಂದರು.

ಆಚಾರ್ಯರು ರಾಮೇಶ್ವರದಿಂದ ಹೊರಟು ಚೋಳ, ಪಾಂಡ್ಯ, ಪಲ್ಲವ ರಾಜ್ಯಗಳಲ್ಲಿ ಸಂಚಾರ ಮಾಡಿದರು, ಪಾಂಡ್ಯ ರಾಜಧಾನಿ ಮಧುರೆಯಲ್ಲಿ ಶ್ರೀ ಮೀನಾಕ್ಷಿ ಅಮ್ಮನವರನ್ನು ಗುರುದೇವರು ಸ್ವತಃ ಪೂಜೆ ಮಾಡಿ, ಅರ್ಚಕರಿಗೆ ಮಂತ್ರೋಪದೇಶವನ್ನಿತ್ತು ಪೂಜಾದಿಗಳ ನ್ಯೂನತೆಯನ್ನು ತಿದ್ದಿದರು. ಅನೇಕ ಜನ ಶೈವರೂ, ಶಾಕ್ತರೂ, ವೈಷ್ಣವರೂ ವಾದದಲ್ಲಿ ಆಚಾರ್ಯರನ್ನು ಎದುರಿಸಿದರು. ಆಚಾರ್ಯರು ತಾವು ಹೋದ ಸ್ಥಳಗಳಲ್ಲೆಲ್ಲಾ ಕಂಡುದು ಏನನ್ನು? ಧಾರ್ಮಿಕ ಆಚಾರ ವಿಚಾರಗಳಲ್ಲಿ ಗೊಂದಲ. ಪರಸ್ಪರ ತಾರತಮ್ಯ ದೃಷ್ಟಿಯಿಂದ ಸಾಮಾಜಿಕವಾಗಿಯೂ ಭೇದಭಾವ, ದ್ವೇಷವೈಷಮ್ಯ, ಕಾಪಾಲಿಕ ಶಾಕ್ತರ ಕ್ರೂರ ಆಚರಣೆಗಳು, ಶೈವ ವೈಷ್ಣವರ ಭಿನ್ನಾಭಿಪ್ರಾಯ. ಗಣಪತಿಯ ಉಪಾಸಕರು, ಸೂರ್ಯನ ಉಪಾಸಕರು ಇವರಲ್ಲಿ ತಾವೇ ಶ್ರೇಷ್ಠರೆಂಬ ಭ್ರಾಂತ ಮನೋಭಾವ.

ಆಚಾರ್ಯರು ಜನ ಸಾಮನ್ಯರನ್ನು ಪಂಡಿತರನ್ನೂ ಆಕರ್ಷಿಸುತ್ತ ಶುದ್ಧ ವೇದಾಂತ ಧರ್ಮವನ್ನು ಭೋದಿಸುತ್ತ, ದೇವದೇವತೆಗಳಲ್ಲಿ ಭೇದವಿಲ್ಲವೆಂದೂ, ಎಲ್ಲಾ ದೇವತೆಗಳೂ ಒಬ್ಬನೇ ಆದ ಪರಬ್ರಹ್ಮನ ವಿವಿಧ ನಾಮರೂಪಗಳೆಂದೂ ಸಾರಿದರು. ಅವರವರ ಮನಸ್ಸಿನ ಪರಿಪಾಕಕ್ಕೆ, ಮನಸ್ಸಿನ ಒಲವಿಗೆ, ಬುದ್ಧಿಯ ಗ್ರಹಣಶಕ್ತಿಗೆ ತಕ್ಕಂತೆ ಯಾವ ದೇವತೆಯನ್ನಾದರೂ ನಿಷ್ಕಲ್ಮಷಭಾವದಿಂದ ಉಪಾಸನೆ ಮಾಡಬಹುದೆಂದು ಬೋಧಿಸಿದರು. ಅದು ಮುಂದೆ ಪರಬ್ರಹ್ಮದ ಅರಿವಿಗೆ ದಾರಿತೋರುವುದೆಂದು ಉಪದೇಶಿಸಿದರು. ಉಪಾಸಕನಾದವನು ತನ್ನ ದೇವರೇ ಶ್ರೇಷ್ಠ, ಉಳಿದವರ ದೇವರು ಕೀಳು ಎಂಬ ಮನೋಭಾವ ಹೊಂದಿದ್ದರೆ, ಅದರಿಂದ ಖಂಡಿತವಾಗಿ ಧರ್ಮಸಾಧನೆ ಯಾಗದೆಂದೂ, ಅಂತಹ ಉಪಾಸಕನು ಧಾರ್ಮಿಕ ಅವನತಿ ಹೊಂದುವನೆಂದೂ ಎಚ್ಚರಿಸಿದರು.

ಪ್ರಕೃತಿಯ ಗುಣ ವಿಶೇಷಗಳಾದ ಗಂಧ (ಭೂತತ್ತ್ವ), ರಸ (ಅಪೋತತ್ತ್ವ), ರೂಪ (ತೇಜೋತತ್ತ್ವ), ಸ್ಪರ್ಶ (ವಾಯುತತ್ತ್ವ), ಶಬ್ದ (ಆಕಾಶತತ್ತ್ವ) ಇವುಗಳನ್ನು ಕ್ರಮವಾಗಿ, ಗಣಪತಿಯು ಭೂತತ್ತ್ವವನ್ನು, ವಿಷ್ಣುವು ಜಲತತ್ತ್ವವನ್ನೂ, ಪ್ರತಿನಿಧಿಸುವರೆಂದೂ, ಈ ಐದು ಮೂರ್ತಿ ಅಥವಾ ಪ್ರತೀಕಗಳಲ್ಲಿ ಪ್ರತಿ ಒಂದರಲ್ಲಿಯೂ ಇತರ ತತ್ತ್ವಗಳ ಗುಣಾದಿಗಳು ಭಾಗಶಃ ಇರುತ್ತವೆಯೆಂದು ಬೋಧಿಸಿದರು. ನಮ್ಮ ಕಲ್ಪನೆಗೆ ಊಹಾಶಕ್ತಿಗೆ ಎಟುಕುವ ಈ ಸಗುಣಮೂರ್ತಿ ಅಥವಾ ಪ್ರತೀಕ ಪೂಜೆಯಿಂದ ನಾವು ಕ್ರಮವಾಗಿ ಮೇಲಕ್ಕೇರಿ ನಿರ್ಗುಣ ಉಪಾಸನೆಯ ಹಂತ ಮುಟ್ಟಿದಾಗ, ನಮಗೆ ಆತ್ಮ ಸಾಕ್ಷಾತ್ಕಾರವಾಗುತ್ತದೆಂದೂ ಬೋಧಿಸಿ, ಪಂಚಾಯತನ ಪೂಜೆಯು ಸರ್ವರಿಗೂ ಸುಲಭವಾದ ಶ್ರೇಷ್ಠವಾದ ಮಾರ್ಗವೆಂದು ಸಾರಿದರು.

ಜನಗಳ ಅಂಧಾನುಕರಣೆಯನ್ನು, ಧರ್ಮದ ಹೆಸರಿನಲ್ಲಿ ಆಗುತ್ತಿದ್ದ ಅನಾಚಾರ ದುರಾಚಾರಗಳನ್ನು ನಿವಾರಿಸುತ್ತಾ ಆಚಾರ್ಯರು ಶ್ರೀರಂಗ ಕ್ಷೇತ್ರಕ್ಕೆ ಬಂದರು. ಅಲ್ಲಿ ವೈಷ್ಣವರು ಪ್ರಬಲವಾಗಿದ್ದು ಆಚಾರ್ಯರನ್ನು ಬಲವಾಗಿ ವಿರೋಧಿಸಿದರು. ತಾವು ಪಾಂಚರಾತ್ರಾಗಮವನ್ನು ಅನುಸರಿಸುತ್ತಿದ್ದು, ಅದೇ ಶ್ರೇಷ್ಠ ಮತವೆಂದೂ, ಅದನ್ನು ಅನುಸರಿಸದವರೆಲ್ಲರೂ ನಿಕೃಷ್ಟರೆಂದೂ ಆ ಜನ ವಾದಿಸಿದರು.

ಪಾಂಚರಾತ್ರರು ತಮ್ಮ ಚತುರ್ವ್ಯೂಹ ಸಿದ್ಧಾಂತವನ್ನು ಪ್ರತಿಪಾದಿಸಿ ವಿಷ್ಣು ಅಥವಾ ವಾಸುದೇವನೇ ಪರತತ್ತ್ವ, ಅವನೇ ಸರ್ವೋತ್ತಮ; ಅವನಿಂದ ಜೀವನಾದ ಸಂಕರ್ಷಣನೂ, ಸಂಕರ್ಷಣನಿಂದ ಪ್ರದ್ಯುಮ್ನನೂ, ಪ್ರದ್ಯುಮ್ನನಿಂದ ಅನಿರುದ್ಧನೂ ಇವರು ಕ್ರಮವಾಗಿ ಜೀವ, ಮನಸ್ಸು ಮತ್ತು ಅಹಂಕಾರ ತತ್ತ್ವಗಳನ್ನು ಪ್ರತಿನಿಧಿಸುತ್ತಾರೆಂದೂ, ಚತುರ್ವ್ಯೂಹಗಳನ್ನು ಹೇಳಿ ತಮ್ಮ ಸಾಧನ ಮಾರ್ಗವನ್ನು ವಿವರಿಸುತ್ತ ಅಭಿಗಮನ, ಉಪದಾನ, ಇಜ್ಯ, ಅಧ್ಯಾಯ ಮತ್ತು ಯೋಗ ಎಂಬ ಪಂಚವಸ್ತುಗಳನ್ನು ಪ್ರತಿಪಾದಿಸಿದರು. ಕರ್ಮಣಾ, ವಾಚಾ, ಮನಸಾ ಜಪಧ್ಯಾನಗಳ ಮೂಲಕ ಪರಮಾತ್ಮನಿಗೆ ಅಭಿಮುಖವಾಗುವುದು. ಪೂಜೆಗಾಗಿ ಪತ್ರ ಪುಷ್ಪಫಲ ಇತ್ಯಾದಿಗಳ ಸಂಗ್ರಹಣ, ಭಗವಂತನ ಪೂಜಾ ಕೈಂಕರ್ಯ, ಆಗಮಗ್ರಂಥಗಳ ಶ್ರವಣ, ಮನನ ಮತ್ತು ಪ್ರಸಾರಮಾಡುವುದು ಅಷ್ಟಾಂಗಯೋಗದ ಅನುಷ್ಠಾನ ಮುಂತಾದ ಸಾಧನ ಪಥವನ್ನು ವಿವರಿಸಿ, ಇದರಿಂದ ಉಪಾಸಕನು ಭಗವಂತನನ್ನು ಹೊಂದುತ್ತಾನೆಂದೂ, ತಮ್ಮದು ಒಂದೇ ಶ್ರೇಷ್ಠಮಾರ್ಗ ಎಂದೂ ಅವರು ವಾದಿಸಿದರು.

ಆಚಾರ್ಯರು ತಮ್ಮ ಸೂತ್ರಭಾಷ್ಯದ ಉತ್ಪತ್ತ್ಯಸಂಭವಾದಿಕರಣದಲ್ಲಿ ಪ್ರತಿಪಾದಿಸಿರುವಂತೆ, ಭಾಗವತ ಮತವನ್ನು-ಆಚಾರ್ಯರ ಶಿಷ್ಯರೇ ಸುರೇಶ್ವರಾದಿ ವಿಮರ್ಶಿಸಿ ಪರಾಮರ್ಶೆ ಮಾಡಿದರು.

"ಅವ್ಯಕ್ತಕ್ಕಿಂತ ಶ್ರೇಷ್ಠನೂ ಸರ್ವಾತ್ಮನೂ ಪರಮಾತ್ಮನೂ ಆದ ನಾರಾಯಣನು, ತನ್ನನ್ನು ಅನೇಕ ವಿಧವಾಗಿ ವಿಂಗಡಿಸಿಕೊಳ್ಳುತ್ತಾನೆ ಎಂಬುದನ್ನು ನಾವು ಒಪ್ಪುತ್ತೇವೆ. ಛಾಂದೋಗ್ಯದಲ್ಲಿ(7-26-2)ಆತನು ಒಂದು ರೂಪದಲ್ಲಿ ಇರುತ್ತಾನೆ. ಮೂರು ರೂಪಗಳಲ್ಲಿ ಇರುತ್ತಾನೆ, ಎಂದು ಹೇಳಿರುವುದರಿಂದ ಭಗವಂತನ ಬಹುರೂಪತ್ವವು ಶ್ರುತಪಡುತ್ತದೆ. ಅಂತಹ ಭಗವಂತನನ್ನು ಅನವರತ ಆರಾಧಿಸಬೇಕೆಂಬುದನ್ನೂ ಒಪ್ಪುತ್ತೇವೆ. ಈಶ್ವರ ಪ್ರಣಿಧಾನವು ಶ್ರುತಿಸ್ಮೃಗಳಲ್ಲಿಯೂ ಪ್ರತಿಪಾದಿತವಾಗಿದೆ.

"ಆದರೆ ವಾಸುದೇವನೆಂಬ ಪರಮಾತ್ಮನಿಂದ ಸಂಕರ್ಷಣನೆಂಬ ಜೀವನು ಹುಟ್ಟುತ್ತಾನೆ ಎಂಬುದನ್ನು ಒಪ್ಪುವುದಿಲ್ಲ. ಏಕೆಂದರೆ ಜೀವನಿಗೆ ಅನಿತ್ಯತ್ವವೇ ಮೊದಲಾದ ದೋಷಗಳು ಪ್ರಾಪ್ತವಾಗುವುವು. ಜೀವನಿಗೆ ಭಗವತ್ಪ್ರಾಪ್ತಿಯೆಂಬ ಮೋಕ್ಷವೇ ಇಲ್ಲದಂತಾಗುವುದು.

ಏಕೆಂದರೆ ಕಾರ್ಯವು(ಜೀವವು) ಕಾರಣವನ್ನು(ವಾಸುದೇವನನ್ನು) ಹೊಂದಿದರೆ ಲಯವಾಗಬೇಕಾಗುವುದು. ಜೀವನ ಉತ್ಪತ್ತಿಯನ್ನು ಸೂತ್ರಕಾರರಾದ ಬಾದರಾಯಣರೇ ನಚಕರ್ತುಃ ಕಾರಣಮ್ ಎಂಬ ಸೂತ್ರದಲ್ಲಿ ನಿಷೇಧಿಸಿದ್ದಾರೆ. ಕರ್ತೃವಿನಿಂದ ಕಾರಣವು ಹುಟ್ಟಲಾರದೆಂದು ತಿಳಿಸಿದಾರೆ" ಎಂದು ಸುರೇಶ್ವರರು ಆಚಾರ್ಯರ ಭಾಷ್ಯದಿಂದಲೂ, ಶ್ರುತಿಗಳಿಂದಲೂ ಪ್ರಮಾಣಗಳನ್ನು ಕೊಟ್ಟು ಭಾಗವತ ಮತವನ್ನು ನಿರಾಕರಿಸಿ, ವಿಷ್ಣುವೆಂಬುದೂ ಆತನ ಪವಿತ್ರನಾಮಗಳಲ್ಲಿ ಒಂದೆದು ಸಾರಿದರು. ಆಚಾರ್ಯರು ಶೈವರನ್ನು ಸಂಸ್ಕರಿಸಿದಂತೆಯೇ, ವೈಷ್ಣವರನ್ನೂ ಸಂಸ್ಕರಿಸಿ ವೈದಿಕ ವಿಧಾನಗಳನ್ನು ಅನುಸರಿಸುವಂತೆ ಅವರೆಲ್ಲರಿಗೂ ಬೋಧಿಸಿದರು. ಅವರಲ್ಲಿದ್ದ ತಪ್ತಮುದ್ರಾಂಕನವನ್ನು ಅಸಿಂಧುವೆಂದು ಸ್ಪಷ್ಟಪಡಿಸಿದರು. ಹರಿ, ವಿಷ್ಣು, ನಾರಾಯಣ ಇತ್ಯಾದಿ ನಮಗಳನ್ನುಳ್ಳ ಪರಬ್ರಹ್ಮ ವಸ್ತುವನ್ನು ಪೌರಾಣಿಕ ವ್ಯಕ್ತಿಗಳಂತೆ ಭಾವಿಸಬಾರದು, ಎಂದು ಎಚ್ಚರಿಸಿದರು.

ಶ್ರೀ ರಂಗನಾಥನನ್ನು ದರ್ಶನ ಮಾಡಿದ ಆಚಾರ್ಯರು ಅಲ್ಲಿ ಜನಾಕರ್ಷಣಾ ಯಂತ್ರವನ್ನು ಸ್ಥಾಪಿಸಿ ವೈಷ್ಣವರೆಲ್ಲರನ್ನೂ "ನೀವೆಲ್ಲರೂ ವೇದಾಂತಧರ್ಮಕ್ಕೆ ಸೇರಿದವರು. ನಿಮ್ಮ ನಮ್ಮಲ್ಲಿ ಪರಸ್ಪರ ಭೇದಾಸೂಯೆ ಕೂಡದು" ಎಂದು ಉಪದೇಶಿಸಿದರು.

ಚೋಳ ರಾಜಧಾನಿಯನ್ನು ಪಾಂಡ್ಯ ರಾಜಧಾನಿಯನ್ನು ಸಂದರ್ಶಿಸಿ ಸಾವಿರಾರು ಜನರಿಂದ ಭಕ್ತಿಶ್ರದ್ಧೆಯಿಂದ ಸ್ವಾಗತಿಸಲ್ಪಟ್ಟಿದ್ದ ಆಚಾರ್ಯರು, ಪಲ್ಲವ ರಾಜಧಾನಿಯಾದ ಕಾಂಚೀಪುರಕ್ಕೆ ದಯಮಾಡಿಸಿದರು.

---

ಕಗ್ಗದ ಬೆಳಕಿನಲ್ಲಿ

ಲೇ: ವಿ॥ ಜಿ. ಎಸ್. ನಟೇಶ

# ವಿಶ್ವದಲ್ಲಿ ವಿರಮಿಸುವುದು ಹೇಗೆ?

**ತೆರೆಯಾಗು ವಿಶ್ವಜೀವನದ ದಿವ್ಯಾಬ್ಧಿಯಲಿ**
**ಕರಗಿಸದಿರಲಿ ನಿನ್ನ ಬೇರೆತನದರಿವ ।**
**ಮರುತನುರುಬನು ತಾಳುತೇಳುತೋಲಾಡುತ್ತ**
**ವಿರಮಿಸಾ ಲೀಲೆಯಲಿ – ಮಂಕುತಿಮ್ಮ ॥**

**ವಿಶ್ವ ಜೀವನವೆಂಬ ದಿವ್ಯ ಸಾಗರದಲ್ಲಿ ನೀನೊಂದು ತೆರೆಯಾಗು. ನಿನ್ನ ಬೇರೆತನದ ಅರಿವನ್ನು ಅದರಲ್ಲಿ ಕರಗಿಸು. ಗಾಳಿಯ ಹೊಡೆತವನ್ನು ಸಹಿಸುತ್ತಾ ಏಳುತ್ತಾ, ಓಲಾಡುತ್ತಾ ಆ ಲೀಲೆಯನ್ನು ವಿರಮಿಸು.**

ವಿಶ್ವ ಜೀವನವೆಂಬುದು ಒಂದು ದಿವ್ಯವಾದ ಸಾಗರ. ಆ ಸಾಗರದಲ್ಲಿ ನೀನೊಂದು ತೆರೆಯಾಗು. ಸಾಗರದ ತೆರೆಗಳು ಮೇಲ್ನೋಟಕ್ಕೆ ಬೇರೆಯಾಗಿ ಕಂಡರೂ ಅವು ಸಾಗರಕ್ಕೆ ಸೇರಿದವು. ನೀನೂ ಕೂಡ ವಿಶ್ವವೆಂಬ ಸಾಗರದಲ್ಲಿ ಸೇರಿಹೋಗು. ಅದರಲ್ಲಿ ನಿನ್ನನ್ನು ಕರಗಿಸಿಕೊಂಡು ಬೇರೆತನದ ಅರಿವನ್ನು ದೂರಮಾಡಿಕೊ. ತೆರೆಗಳು ಗಾಳಿಯ ಹೊಡೆತಕ್ಕೆ ಸಿಕ್ಕರೂ ಏಳುತ್ತಾ, ಬೀಳುತ್ತಾ, ಓಲಾಡುತ್ತಾ ವಿರಮಿಸುತ್ತವೆ. ಅವುಗಳಿಗೆ ಹೆದರದೆ ಅವುಗಳೊಂದಿಗೆ ಸೇರಿ ಬದುಕು, ಅದೊಂದು ಲೀಲೆಯೆಂದು ತಿಳಿ. ಸಾಗರದಲ್ಲಿ ತೆರೆಗಳು ಆಟವಾಡಿದಂತೆ ವಿಶ್ವ ಜೀವನದ ಸಾಗರದಲ್ಲಿ ಆಟವಾಡುತ್ತಾ ಬದುಕನ್ನು ಸಾಗಿಸಿ ವಿಶ್ರಾಂತಿಯನ್ನು ಪಡೆ. ಇದು ಡಿ.ವಿ.ಜಿ.ಯವರು ವಿಶ್ವಮಾನವನಿಗೆ ನೀಡಿದ ಸಂದೇಶ.

**ಸಂಸಾರದ ಸಾರ ಯಾವುದು?**

**ಬರಿಯ ಪೊಳ್ಳು ವಿಚಾರ ಮಾನುಷ ವ್ಯಾಪಾರ**
**ಪರಿಕಿಸಲು ಪುಣ್ಯವೆಂಬುದುಮಗಂಕಾರ ।**
**ಅರಳಿ ಮೊಗವನಿತಿನಿತು, ನಕ್ಕು ನಗಿಸಿರೆ ಸಾರ**
**ಹೊರೆ ಮಿಕ್ಕ ಸಂಸಾರ – ಮಂಕುತಿಮ್ಮ ॥**

**ಮನುಷ್ಯನ ವ್ಯವಹಾರ ಕೇವಲ ಹುರುಳಿಲ್ಲದ ವಿಚಾರ. ಪರೀಕ್ಷಿಸಿದರೆ ಪುಣ್ಯವೆಂಬುದು ಅಹಂಕಾರ. ಮುಖವು ಅಷ್ಟಿಷ್ಟು ಅರಳಿ, ನಕ್ಕು ನಗಿಸಿದರೆ ಅದೇ ಜೀವನದ ಸಾರ. ಉಳಿದ ಸಂಸಾರವೆಲ್ಲ ಕೇವಲ ಹೊರೆ ಮಾತ್ರ.**

ಈ ಜಗತ್ತಿನಲ್ಲಿ ಮನುಷ್ಯನ ವ್ಯವಹಾರವನ್ನು ಪರಿಗಣಿಸಿದರೆ ಅದೊಂದು ಕೇವಲ ನೀರಸ ವಿಚಾರ. 'ನಾನು ಪುಣ್ಯ ಗಳಿಸಿದ್ದೇನೆ' ಎಂಬುದು ಕೇವಲ ಅಹಂಕಾರದ ದ್ಯೋತಕ ಅಷ್ಟೆ. ನಮ್ಮೆಲ್ಲ ವ್ಯವಹಾರಗಳು ವಿಧಿಯ ನಿಯಂತ್ರಣಕ್ಕೊಳಪಟ್ಟು ನಡೆಯುತ್ತವೆ. ಬದುಕಿರುವಷ್ಟು ಕಾಲ ಆನಂದವಾಗಿ ಬದುಕಬೇಕು. ತಾನೂ ನಕ್ಕು, ಇತರರನ್ನೂ ನಗಿಸುತ್ತಾ ಬಾಳಿದರೆ ಅದೇ ಬದುಕಿನ ಸಾರ. ಈ ವಿಚಾರಕ್ಕೆ ಮಾತ್ರ ನಾವು ಗಮನ ಕೊಡಬೇಕು. ಉಳಿದುದೆಲ್ಲ ಈ ಸಂಸಾರದಲ್ಲಿ ಹೊರೆ ಮಾತ್ರ. ಬದುಕಿನ ಹೊರೆಯನ್ನು ಹಗುರವಾಗಿಸುವುದು ನಗುತ್ತಾ ಬಾಳಿದಾಗ. ಆನಂದವೇ ಬದುಕಿನ ಮುಖ್ಯ ಗುರಿ. ಆನಂದದಿಂದ ಬದುಕುತ್ತಾ ಆನಂದಸ್ವರೂಪನಾದ ಭಗವಂತನನ್ನು ಹೊಂದುವುದೇ ಬದುಕಿನ ಪರಮಗುರಿ. ಆಗಲೇ ಮಾನವನ ಬದುಕು ಸಾರ್ಥಕವಾಗುವುದು.



ರಿಲಯನ್ಸ್ ಕಪ್ ಸಂಬಂಧಿಸಿದ ಕ್ರೀಡೆ – ಕ್ರಿಕೆಟ್

**ಮಾಯೆ ಸರಸವಾಡುವುದು ಯಾವಾಗ?**

**ಜನ್ಮಸಾವಿರ ಬರಲಿ, ನಷ್ಟವದರಿಂದೇನು?**
**ಕರ್ಮ ಸಾವಿರವಿರಲಿ, ಕಷ್ಟನಿನಗೇನು? ।**
**ಬ್ರಹ್ಮ ಹೃದಯದಿ ನಿಲ್ಲೆಮಾಯೆಯೇಂಗೈದೊಡೇಂ?**
**ಇಮ್ಮಿದಳ ಸರಸವದು – ಮಂಕುತಿಮ್ಮ ॥**

**ಸಾವಿರ ಜನ್ಮಗಳು ಬರಲಿ. ಅದರಿಂದ ನಷ್ಟವೇನು? ಕರ್ಮ ಸಾವಿರವಿರಲಿ ಅದರಿಂದ ನಿನಗೆ ಕಷ್ಟವೇನು? ಭಗವಂತನು ಹೃದಯದಲ್ಲಿ ನೆಲೆಸಿದಾಗ ಮಾಯೆ ಏನು ಮಾಡಿದರೆ ಏನು? ಅದು ಪ್ರಿಯತಮೆಯ ಸರಸದಂತೆ ಆಗುತ್ತದೆ.**

ಭಗವತ್ತತ್ತ್ವವನ್ನು, ಅದರ ಲೀಲೆಯನ್ನು ಅರಿತುಬಿಟ್ಟರೆ ಜಗತ್ತಿನಲ್ಲಿ ಯಾವುದೇ ಕಷ್ಟಬಂದರೂ ಅದು ಕಷ್ಟವಾಗಿರುವುದಿಲ್ಲ. ಸಾವಿರ ಸಾವಿರ ಜನ್ಮ ಬಂದರೂ ಅದರಿಂದೇನೂ ನಷ್ಟವಿರುವುದಿಲ್ಲ. ಸಾವಿರ ಕರ್ಮವಿದ್ದರೂ ಅದು ಪರಿಗಣನೆಗೆ ಸಿಕ್ಕದು. ಪ್ರಪಂಚವನ್ನು ಆವರಿಸಿದ ಮಾಯೆ ಆಗ ಏನೂ ಪ್ರಭಾವ ಬೀರುವುದಿಲ್ಲ. ಮಾಯೆಯ ಆಟವೂ ಸುಂದರಿಯಾದ ಪ್ರಿಯತಮೆಯ ಸರಸದಂತೆ ಆಗುತ್ತದೆ. ಬ್ರಹ್ಮತತ್ತ್ವವನ್ನು ತಿಳಿದವನು ಸಾರ್ಥಕ ಬದುಕನ್ನು ನಿರ್ವಹಿಸುತ್ತಾನೆ. ಭಗವಂತನಲ್ಲಿ ನಮ್ಮ ಮನಸ್ಸನ್ನು ಲೀನಗೊಳಿಸಿ ಎಲ್ಲವೂ ಅವನೇ ಎಂದು ತಿಳಿದರೆ ಬದುಕಿನಲ್ಲಿ ಯಾವ ಸಂಕಟವೂ ಇರದು.

**ಎಂತಹ ವರವನ್ನು ನಾವು ಬೇಡಿಕೊಳ್ಳಬೇಕು?**

**ನಗುವು ಸಹಜದ ಧರ್ಮ; ನಗಿಸುವುದು ಪರಧರ್ಮ**
**ನಗುವ ಕೇಳುತ ನಗುವುದತಿಶಯದ ಧರ್ಮ ।**
**ನಗುವ ನಗಿಸುವ ನಗಿಸಿ ನಗುತ ಬಾಳುವ ವರವ**
**ಮಿಗೆ ನೀನು ಬೇಡಿಕೊಳೊ – ಮಂಕುತಿಮ್ಮ ॥**

**ನಗುವುದು ಸಹಜವಾದ ಧರ್ಮ. ನಗಿಸುವುದು ಪರಧರ್ಮ. ನಗುವನ್ನು ಕೇಳುತ್ತಾ ನಗುವುದೊಂದು ವಿಶೇಷವಾದ ಧರ್ಮ. ನಗುವ, ನಗಿಸುವ, ನಕ್ಕು ನಗುತ್ತಾ ಬಾಳುವ ವರವನ್ನು ನೀನು ಹೆಚ್ಚಾಗಿ ಬೇಡಿಕೋ.**

ಮನುಷ್ಯ ಹುಟ್ಟುವಾಗ ಅಳುತ್ತಾ ಹುಟ್ಟುತ್ತಾನೆ. ಅದು ಎಲ್ಲರ ಜೀವನದಲ್ಲಿ ಸಹಜ. ನಗು ಕ್ರಮೇಣ ವಿಕಾಸವಾಗುತ್ತದೆ. ಅದು ಸಹಜವಾದ ಧರ್ಮ ಎಂದು ಗುಂಡಪ್ಪನವರು ಅಭಿಪ್ರಾಯಪಡುತ್ತಾರೆ. ನಗುವಿನ ಸಾಮ್ರಾಜ್ಯವೇ ಭಗವಂತನ ಸಾಮ್ರಾಜ್ಯ. ತಾನೂ ನಕ್ಕು ಇತರರನ್ನು ನಗಿಸಬೇಕು. ಇತರರನ್ನು ನಗಿಸಿದರೆ ಪರಧರ್ಮ. ಇನ್ನೊಬ್ಬರ ನಗುವನ್ನು ಕೇಳುತ್ತಾ ತಾನೂ ನಗುತ್ತಾ ಜೀವನ ಸಾಗಿಸಿ, ಇತರರನ್ನು ನಗಿಸಿ ಬಾಳುವ ವರವನ್ನು ನಾವು ಬೇಡಿಕೊಳ್ಳಬೇಕು. ಈ ವರದ ಮುಂದೆ ಇನ್ನಾವ ವರವೂ ಶ್ರೇಷ್ಠವಾಗದು. 'ಜಗವ ನೀಂ ಬಿಡುವಾಗ ನಗುತ ಬಿಡು ನಿನಗಾಗಿ ಜಗವೆಲ್ಲವಳುತಿರಲಿ' ನಾವು ಸಾಯುವಾಗಲೂ ನಗುತ್ತಾ ಸಾಯಬೇಕಂತೆ. ನಮ್ಮ ಸಾವನ್ನು ಕಂಡು ಜನರೆಲ್ಲಾ ಅಳಬೇಕು. ಒಳ್ಳೆಯ ಕೆಲಸ ಮಾಡಿದರೆ ಮಾತ್ರ ಇದು ಸಾಧ್ಯ.

**ನಾವು ಯಾವುದಕ್ಕೆ ಕೈ ಮುಗಿಯಬೇಕು?**

**ನೆನೆನೆನೆದು ಗಹನವನು, ಜೀವನರಹಸ್ಯವನು**
**ಮನವಬಳಲಿಸಿ ಸೋಲಿಸಿರುವ ತತ್ತ್ವವನು ।**
**ಮನನದೇಕಾಂತದಲಿ ಮಾನದ ಧ್ಯಾನದಲಿ**
**ಮಣಿಮಣಿದು ಕೈಮುಗಿಯೋ – ಮಂಕುತಿಮ್ಮ ॥**

**ಗಂಭೀರವಾದ, ಜೀವನ ರಹಸ್ಯವಾದ, ಮನಸ್ಸನ್ನು ಬಳಲಿಸಿ ಸೋಲಿಸುವ ತತ್ತ್ವವಾದ, ಬ್ರಹ್ಮ ವಸ್ತುವನ್ನು ಮತ್ತೆ ಮತ್ತೆ ನೆನೆ. ಏಕಾಂತದಲ್ಲಿ ಮನನ ಮಾಡುತ್ತಾ, ಮೌನದಲಿ ಧ್ಯಾನ ಮಾಡುತ್ತಾ ಅದಕ್ಕೆ ಮತ್ತೆ ಮತ್ತೆ ಶರಣಾಗಿ ಕೈಮುಗಿದುಬಿಡು.**

ಮನುಷ್ಯನ ಜನ್ಮ ಪರಮ ಶ್ರೇಷ್ಠವಾಧ ಜನ್ಮ. ವಿವೇಕ ಅವನು ಪಡೆದುಕೊಂಡ ಅಪೂರ್ವವರ. ಆ ವಿವೇಕವನ್ನು ಜೀವನದ ರಹಸ್ಯವಾದ ತತ್ತ್ವವನ್ನು ತಿಳಿಯಲು ಬಳಸಬೇಕು. ಆ ಗಹನವಾದ ತತ್ವವನ್ನು ಮನಸ್ಸಿನಲ್ಲಿ ನೆನೆಯುತ್ತಾ, ಅದನ್ನು ಅರ್ಥಮಾಡಿಕೊಂಡು ಸಾಕ್ಷಾತ್ಕರಿಸಿಕೊಳ್ಳುವತ್ತ ಪ್ರಯತ್ನ ಸಾಗಬೇಕು. ಆ ಗಹನವಾದ ತತ್ತ್ವ ನಮ್ಮ ಮನಸ್ಸನ್ನು ಬಳಲಿಸಿ ಸೋಲಿಸುತ್ತದೆ. ಏಕಾಂತದಲ್ಲಿ ಮನನ ಮಾಡುತ್ತಾ, ಮೌನದಲ್ಲಿ ಧ್ಯಾನ ಮಾಡುತ್ತಾ ಆ ವಿಶ್ವ ತತ್ತ್ವಕ್ಕೆ ಶರಣಾಗಿ ಕೈಮುಗಿಯಬೇಕು. ನಮ್ಮೆಲ್ಲರನ್ನೂ ಸಲುಹುವವನು ಆ ಭಗವಂತ. ಅವನಿಗೆ ಶರಣಾಗಿ ಬದುಕಿದರೇ ನಿಜವಾದ ಬದುಕು.

**ಯಾವುದು ತತ್ತ್ವ? ಯಾವುದು ವಿಶ್ವ? ಯಾವುದು ಬ್ರಹ್ಮ?**

**ಜೀವದುದಯ ರಹಸ್ಯ, ಜೀವವಿಲಯ ರಹಸ್ಯ**
**ಜೀವನದ ದೃಶ್ಯ ಮರುವಿನ ಬಿಸಿಲ್ಗುದುರೆ ।**
**ಭಾವಿಸಲಿದೇ ತತ್ತ್ವ: ಬ್ರಹ್ಮಮಾಯೆಯೇ ವಿಶ್ವ**
**ಕೇವಲಾತ್ಮ ಬ್ರಹ್ಮ – ಮಂಕುತಿಮ್ಮ ॥**



ವಿಶ್ವಕಪ್ ಸಂಬಂಧಿಸಿದ ಕ್ರೀಡೆ – ಫುಟ್ಬಾಲ್

**ಜೀವನದ ಉದಯವು ರಹಸ್ಯ, ಲಯವೂ ರಹಸ್ಯ. ಜೀವನದ ದೃಶ್ಯ ಮರುಭೂಮಿಯ ಮರೀಚಿಕೆ. ಭಾವಿಸಿದರೆ ಇದೇ ತತ್ತ್ವ ವಿಶ್ವವೆಂಬುದು ಬ್ರಹ್ಮನ ಮಾಯೆ. ಬ್ರಹ್ಮವೇ ಕೇವಲಾತ್ಮ ಶಾಶ್ವತ.**

ಸೃಷ್ಟಿಯ ರಹಸ್ಯವನ್ನು ಅರಿಯಲು ಯಾರಿಗೂ ಸಾಧ್ಯವಿಲ್ಲ. ಹುಟ್ಟುಸಾವುಗಳ ಹಿಂದಿನ ಶಕ್ತಿಯನ್ನು ಹಾಗೂ ಅವುಗಳ ರಹಸ್ಯವನ್ನು ಇದುವರೆಗೆ ತಿಳಿಯಲು ಸಾಧ್ಯವಾಗಿಲ್ಲ. ಮುಂದೆಯು ಸಾಧ್ಯವಾಗದು. ಎಲ್ಲಿಂದಲೋ ಬಂದ ಜೀವ ಎಲ್ಲಿಗೋ ಹೋಗಿ ಬಿಡುತ್ತದೆ. ಆದ್ದರಿಂದ ಜೀವನದ ಉದಯವೂ ರಹಸ್ಯಮಯ. ಅಂತ್ಯವೂ ರಹಸ್ಯಮಯ. ಹುಟ್ಟು ಸಾವುಗಳ ನಡುವಿನ ಬದುಕು ಮಾತ್ರ ನಮ್ಮ ಅನುಭವಕ್ಕೆ ಬರುತ್ತದೆ. ಡಿ.ವಿ.ಜಿ.ಯವರು ಕಾಣುವ ಈ ಬದುಕನ್ನು ಮರಳುಗಾಡಿನಲ್ಲಿ 'ಕಾಣುವ' ಮರೀಚಿಕೆಯಂತೆ ಕಂಡೂ ಕಾಣದಂತಿರುವ ಸ್ಥಿತಿ ಎಂದು ಬಣ್ಣಿಸಿದ್ದಾರೆ. ಆಳವಾಗಿ ಚಿಂತಿಸಿದರೆ ಇದೇ ನಿಜವಾದ ತತ್ತ್ವ. ಬ್ರಹ್ಮವಸ್ತು ತನ್ನ ಮಾಯೆಯ ಮೂಲಕ ವಿಶ್ವದ ಪರಿಚಯ ಮಾಡಿಸುತ್ತದೆ. ಮೂಲ ಸ್ವರೂಪದಲ್ಲಿರುವುದು, ಯಾವ ಬದಲಾವಣೆಗೂ ಒಳಗಾಗದೇ ಇರುವಂಥದ್ದು. ಈ ವಿಶ್ವಮಾಯೆ ಎಲ್ಲದಕ್ಕೂ ಕಾರಣವಾದುದು. ಅ ಬ್ರಹ್ಮವಸ್ತುವೇ ಕೇವಲಾತ್ಮ. 'ಅಜೋ ನಿತ್ಯಃ, ಶಾಶ್ವತೋಯಂ ಪುರಾಣೋನ ಹನ್ಯತೇ ಹನ್ಯಮಾನೇ ಶರೀರೇ' ಎಂದು ಭಗವದ್ಗೀತೆಯಲ್ಲಿ ಆತ್ಮದ ಸ್ವರೂಪವನ್ನು ಹೇಳಲಾಗಿದೆ. ಆತ್ಮ ಹುಟ್ಟುವುದಿಲ್ಲ. ಅನಾದಿ, ನಿತ್ಯ ಸ್ವರೂಪವುಳ್ಳದ್ದು. ನಾಶವಾಗುವ ಶರೀರದಲ್ಲಿ ಆತ್ಮ ಮಾತ್ರ ನಾಶವಾಗದು. ಇಂಥ ಬಿಸಿಲ್ಗುದುರೆಯಂಥಹ ಬದುಕನ್ನು ಆತ್ಮೋದ್ಧಾರಕ್ಕೆ ಬಳಸಿದರೆ ಚೆನ್ನ. ಈ ಬದುಕು 'ಆತ್ಮನಃ ಹಿತಾರ್ಥಂ ಜಗತಃ ಕಲ್ಯಾಣಾರ್ಥಂ' ಆಗಬೇಕು.

**ವಚನಭಾಗವತ** **ಲೇ: ತ. ಸು. ಶಾಮರಾಯ**

# ಸಗರ ಚಕ್ರವರ್ತಿ

ಹರಿಶ್ಚಂದ್ರನ ತರುವಾಯ ರೋಹಿತನು ರಾಜನಾದ. ಆತನ ತರುವಾಯ ಆತನ ಮಗ ಚಂಪನು ರಾಜ್ಯಭಾರ ಮಾಡುತ್ತಾ ಚಂಪಾಪುರವನ್ನು ಕಟ್ಟಿಸಿ, ತನ್ನ ಹೆಸರನ್ನು ಸಾರ್ಥಕಪಡಿಸಿಕೊಂಡ. ಇವನ ತರುವಾಯ ಕೆಲವು ತಲೆಗಳಾದ ಮೇಲೆ ಬಾಹುಕನೆಂಬುವವನು ಪಟ್ಟಕ್ಕೆ ಬಂದ. ಈತ ಹಗೆಗಳಿಗೆ ರಾಜ್ಯವನ್ನು ಸೋತು, ಮಡದಿಯರೊಡನೆ ಅಡವಿಯ ಪಾಲಾದ. ಕೆಲಕಾಲವಾದ ಮೇಲೆ ಅವನು ಮೃತ್ಯುವಿಗೆ ತುತ್ತಾಗಲು, ಅವನ ಹೆಂಡತಿಯೂ ಅವನೊಡನೆ ಸಹಗಮನಕ್ಕೆ ಸಿದ್ಧಳಾದಳು. ಆಗ ಆಕೆ ಗರ್ಭಿಣಿ. ಇದನ್ನು ತಿಳಿದ ಔರ್ವನೆಂಬ ಮಹರ್ಷಿ ಆಕೆಯನ್ನು ಸಹಗಮನ ಮಾಡದಂತೆ ತಡೆದ. ಆಕೆ ಗರ್ಭಿಣಿಯೆಂಬುದನ್ನು ಕೇಳಿ, ಆಕೆಯ ಸವತಿಯರು ಹೊಟ್ಟೆಕಿಚ್ಚಿನಿಂದ ಆಕೆಗೆ ವಿಷವಿಟ್ಟರು. ಆದರೂ ಔರ್ವಋಷಿಯ ಅನುಗ್ರಹದಿಂದ ಆಕೆ ಸಾಯದೆ ಉಳಿದುಕೊಂಡು, ಒಬ್ಬ ಮಗನನ್ನು ಹೆತ್ತಳು. ಆ ಕೂಸಿನೊಡನೆ ವಿಷವೂ ಹೊರಕ್ಕೆ ಬಂತು. ಇದರಿಂದ ಆ ಕೂಸಿಗೆ 'ಸಗರ' ಎಂದು ಹೆಸರಾಯಿತು. ಔರ್ವಮಹರ್ಷಿಯೆ ಆ ಮಗುವನ್ನು ಬೆಳೆಸಿ, ವಿದ್ಯಾವಂತನನ್ನಾಗಿ ಮಾಡಿದನು. ವಯಸ್ಸಿನೊಡನೆ ಕ್ಷಾತ್ರತೇಜಸ್ಸೂ ಬೆಳೆಯಿತು. ಆತ ಹಗೆಗಳನ್ನು ಗೆದ್ದು ತನ್ನ ರಾಜ್ಯವನ್ನು ಮತ್ತೆ ಸಂಪಾದಿಸಿದುದಲ್ಲದೆ ದಿಗ್ವಿಜಯಕ್ಕೆ ಹೊರಟು ತಾಳಜಂಘ, ಯವನ, ಶಕ, ಬರ್ಬರ ಮೊದಲಾದ ದುಷ್ಟರನ್ನು ಜಯಿಸಿ, ತನ್ನ ರಾಜ್ಯವನ್ನು ವಿಸ್ತರಿಸಿದನು.

ತನ್ನ ಶಿಷ್ಯನ ಪರಾಕ್ರಮಕ್ಕೆ ಮೆಚ್ಚಿದ ಔರ್ವಮಹರ್ಷಿಯು ಅಶ್ವಮೇಧಯಾಗವನ್ನು ಕೈಗೊಳ್ಳುವಂತೆ ಸಗರನಿಗೆ ಉಪದೇಶಿಸಿದನು. ಸಗರನು ಅತ್ಯಂತ ಸಂತೋಷದಿಂದ ಅದನ್ನು ಕೈಗೊಂಡು ವೈಭವದಿಂದ ನೆರವೇರಿಸಿದನು. ಆತನಿಗೆ ನೂರು ಅಶ್ವಮೇಧಯಾಗಗಳನ್ನು ಮಾಡಬೇಕೆನಿಸಿತು. ಔರ್ವಮಹರ್ಷಿಯೂ ಸಂತೋಷದಿಂದ ಅದಕ್ಕೆ ಒಪ್ಪಿಗೆಯಿತ್ತನು. ಸಗರನು ಒಂದಾದಮೇಲೊಂದರಂತೆ ತೊಂಬತ್ತೊಂಬತ್ತು ಯಾಗಗಳನ್ನು ನಿರ್ವಿಘ್ನವಾಗಿ ನೆರವೇರಿಸಿ, ನೂರನೆಯ ಯಾಗವನ್ನು ಕೈಗೊಂಡನು. ಅದೊಂದನ್ನು ಮಾಡಿ ಮುಗಿಸಿದರೆ ಆತನಿಗೆ ಇಂದ್ರಪದವಿ ದೊರಕುತ್ತಿತ್ತು. ಇದನ್ನು ಕಂಡು ದೇವೇಂದ್ರನಿಗೆ ಭಯಹತ್ತಿತು. ತನ್ನ ಪದವಿಗೆ ಮೋಸವಾಗದಿರಬೇಕಾದರೆ ಈ ಯಾಗವನ್ನು ಕುಲಗೆಡಿಸಬೇಕೆಂದು ಆತನು ನಿಶ್ಚಯಿಸಿದ. ಆದ್ದರಿಂದ ಆತನು ಯಾಗದ ಕುದುರೆಯನ್ನು ಕದ್ದೊಯ್ದು ಪಾತಾಳದಲ್ಲಿ ತಪಸ್ಸು ಮಾಡುತ್ತಾ ಕುಳಿತಿದ್ದ ಕಪಿಲಮಹರ್ಷಿಗಳ ಹಿಂದೆ ಬಚ್ಚಿಟ್ಟನು. ಸಗರನು ತನ್ನ ಕಿರಿಯ ಹೆಂಡತಿ, ಸುಮತಿಯ ಅರವತ್ತು ಸಾವಿರ ಮಕ್ಕಳನ್ನು ಕರೆದು, ಯಜ್ಞದ ಕುದುರೆಯನ್ನು ಹುಡುಕಿತರುವಂತೆ ನೇಮಿಸಿದನು. ಅವರು ಭೂಮಂಡಲವನ್ನೆಲ್ಲ ಹುಡುಕಿ, ಎಲ್ಲಿಯೂ ಆ ಕುದುರೆ ಕಾಣಿಸದಿರಲು, ನೆಲವನ್ನು ತೋಡಿ ಪಾತಾಳವನ್ನು ಪ್ರವೇಶಿಸಿದರು. ಅಲ್ಲಿ ಹುಡುಕುತ್ತಾ ಹೊರಟಾಗ ಕಪಿಲಋಷಿಗಳ ಹಿಂದೆ ಕುದುರೆ ಕಾಣಿಸಿತು. ಅವರಿಗೆ ಆ ಋಷಿಯೇ ಕುದುರೆಯ ಕಳ್ಳನೆಂದು ಭ್ರಮೆ. ಆದ್ದರಿಂದ 'ಕಳ್ಳ ಸಿಕ್ಕ, ಅವನನ್ನು ಬಡಿಯಿರಿ, ಕಡಿಯಿರಿ, ಕಳ್ಳಕೊರಮ ಕಣ್ಣುಮುಚ್ಚಿ ಕುಳಿತಿದ್ದಾನೆ' ಎಂದು ಗರ್ಜಿಸಿದರು. ಅರವತ್ತು ಸಾವಿರಜನದ ಕೂಗಿಗೆ ಯಾವ ತಪಸ್ಸು ನಿಂತೀತು? ಋಷಿಯು ಸಮಾಧಿಯಿಂದೆದ್ದು ಕಣ್ಣುತೆರೆದನು. ಒಡನೆಯೆ ಅವರೆಲ್ಲ ಸುಟ್ಟು ಬೂದಿಯಾಗಿ ಹೋದರು. ಕಪಿಲಮಹರ್ಷಿ ಶಾಂತಮೂರ್ತಿ. ಆತನೇನೂ ಅವರನ್ನು ಸುಡಬೇಕೆಂದು ಬಗೆಯಲಿಲ್ಲ. ಆ ಸಗರನ ಮಕ್ಕಳ ಅವಿವೇಕವೇ ಅವರನ್ನು ಸುಟ್ಟುಹಾಕಿತು ಅಷ್ಟೆ.

ಕುದುರೆ ಬರಲಿಲ್ಲ. ಮಕ್ಕಳೂ ಹಿಂದಿರುಗಲಿಲ್ಲ. ಯಜ್ಞ ಅರ್ಧಕ್ಕೆ ನಿಂತಿದೆ. ಸಗರ ಚಕ್ರವರ್ತಿ ಮುಂದೇನು ಮಾಡಬೇಕು? ಆತನ ಹಿರಿಯ ಹೆಂಡತಿ ಕೇಶಿನಿಗೆ ಒಬ್ಬನೇ ಮಗ ಅಸಮಂಜ. ಆತನು ಪೂರ್ವ ಜನ್ಮದಲ್ಲಿ ತಪಸ್ಸು ಕೆಟ್ಟು ಹುಟ್ಟಿದವನು. ಆತನಿಗೆ



ರಾಥ್ಮನ್ಸ್ ಟ್ರೋಫಿ ಸಂಬಂಧಿಸಿದ ಕ್ರೀಡೆ – ಕ್ರಿಕೆಟ್

ಈ ಜನ್ಮದ ಸ್ಮರಣೆಯಿದೆ. ಆದ್ದರಿಂದ ಆತ ಜನರಿಂದ ಸದಾ ದೂರವಾಗಿರುತ್ತಿದ್ದನು. ನೋಡಿದವರಿಗೆ ಹುಚ್ಚನಂತೆ ಕಾಣಿಸುತ್ತಿದ್ದನು. ಮಕ್ಕಳು ಯಾರಾದರೂ ಸಿಕ್ಕರೆ ಅವರನ್ನು ಸರಯೂ ನದಿಯಲ್ಲಿ ಎತ್ತಿ ಹಾಕಿ ಬಿಡುತ್ತಿದ್ದನು. ಇದರಿಂದ ಕುಪಿತನಾದ ಸಗರ ಚಕ್ರವರ್ತಿ ಅವನು ಮಗನೆಂಬ ಮೋಹವನ್ನೂ ತೊರೆದು ಅವನನ್ನು ದೇಶದಿಂದ ಓಡಿಸಿಬಿಟ್ಟಿದ್ದನು. ಅವನಿಗೆ ಬೇಕಾಗಿದ್ದದೂ ಅಷ್ಟೆ. ತನ್ನ ಯೋಗಶಕ್ತಿಯಿಂದ ಸರಯೂ ನದಿಗೆ ತಳ್ಳಿದ್ದ ಮಕ್ಕಳನ್ನೆಲ್ಲ ಬದುಕಿಸಿಕೊಟ್ಟು ಅಡವಿಗೆ ಹೊರಟುಹೋಗಿದ್ದನು. ಅವನಿಗೆ ಅಂಶುಮಂತನೆಂಬ ಒಬ್ಬ ಮಗನಿದ್ದ. ಅವನಿಗಿನ್ನೂ ಚಿಕ್ಕವಯಸ್ಸು. ಆದರೂ ಈಗ ಕುದುರೆಯನ್ನೂ ಚಿಕ್ಕಪ್ಪಂದಿರನ್ನೂ ಹುಡುಕಿಕೊಂಡು ಬರಲು ಅವನೇ ಹೋಗಬೇಕಾಯಿತು. ಅವನು ತನ್ನ ಚಿಕ್ಕಪ್ಪಂದಿರು ಅಗೆದು ಮಾಡಿದ್ದ ಹಾದಿಯಿಂದಲೆ ಪಾತಾಳಕ್ಕೆ ಹೋದನು. ಅಲ್ಲಿ ತಪಸ್ಸು ಮಾಡುತ್ತಿರುವ ಕಪಿಲಋಷಿ, ಎದುರಿಗೆ ಬೂದಿ ರಾಶಿ, ಪಕ್ಕದಲ್ಲಿ ಕುದುರೆ ಕಾಣಿಸಿದವು. ಆತ ನೇರವಾಗಿ ಋಷಿಯ ಬಳಿಗೆ ಹೋಗಿ, ಭಕ್ತಿಯಿಂದ ಅವರಿಗೆ ಅಡ್ಡಬಿದ್ದ. ಅವರು ಆತನನ್ನು ಅಕ್ಕರೆಯಿಂದ ನೋಡಿ, 'ಮಗು, ಇಲ್ಲಿರುವ ಬೂದಿಯ ರಾಶಿ ನಿನ್ನ ಚಿಕ್ಕಪ್ಪಂದಿರದು. ದೇವಗಂಗೆಯನ್ನು ಇವರ ಮೇಲೆ ಹರಿಸಿದ ಹೊರತು ಇವರಿಗೆ ಸದ್ಗತಿಯಿಲ್ಲ. ಅದು ನಿನ್ನಿಂದ ಆಗದ ಕೆಲಸ. ಈಗ ನೀನು ಈ ಯಜ್ಞದ ಕುದುರೆಯನ್ನು ಕೊಂಡೊಯ್ದು ತಾತನಿಗೆ ಒಪ್ಪಿಸು' ಎಂದರು. ಅಂಶುಮಂತನು ಅವರ ಅಪ್ಪಣೆಯಂತೆ ಕುದುರೆಯನ್ನು ಸಗರನಿಗೆ ಒಪ್ಪಿಸಿದ. ಯಾಗವೇನೋ ಮುಗಿಯಿತು. ಆದರೆ ಸಗರನ ಮನಸ್ಸು ಮಕ್ಕಳ ಸಾವಿನಿಂದ ಕಲಕಿಹೋಗಿತ್ತು. ಆತನು ಅಂಶುಮಂತನಿಗೆ ಪಟ್ಟಕಟ್ಟಿ, ತಪಸ್ಸಿಗೆ ಹೊರಟುಹೋದ.

# ಜೀವನ ಮೌಲ್ಯ

ಸಂಗ್ರಹ : ಡಾ. ಜಿ. ಟಿ. ಹೆಗಡೆ

ಈ ಬದುಕು ಮನುಷ್ಯನಿಗೆ ಎಲ್ಲಾ ಪಾಠಗಳನ್ನು ಕಲಿಸಿಕೊಡುತ್ತದೆ. ಬಾಲ್ಯದ ಸಹಜ ನಗು, ಸುಖ-ಸಂತೋಷ ಕಾಲಕ್ರಮೇಣ ಔಪಚಾರಿಕವಾಗಿ, ಅನಂತರ ಮಾಂತ್ರಿಕ ಎನಿಸುತ್ತದೆ.

ಪ್ರತಿಯೊಬ್ಬ ಮನುಷ್ಯನಿಗೂ ಬದುಕಿನಲ್ಲಿ ಗಳಿಸುವುದಕ್ಕಿಂತ ಕಳೆದುಕೊಂಡಿದ್ದೇ ಹೆಚ್ಚು ಎನಿಸುತ್ತದೆ. ಆದರೆ ಕಳಿಕೆ-ಗಳಿಕೆ ಎಲ್ಲವೂ ಬಹುಶಃ ಮನಸ್ಸಿನ ಭಾವನೆ. ಮನುಷ್ಯನಿಗೆ ಪರಿಮಿತಿಯೊಳಗೆ ಲಭ್ಯವಿದ್ದಷ್ಟು ಮಾತ್ರವೇ ಆತನಿಗೆ ಲಭ್ಯವಾಗುವುದು ಎಂಬ ಕಠೋರ ಸತ್ಯ ಕಿಂಡಿಯೊಳಗಿನ ಮುತ್ತಂತೆ ಕೆಲವರಿಗೆ ಮಾತ್ರ ತಿಳಿಯುತ್ತದೆ.

ಜೀವನದ ಬಗ್ಗೆ ಒಂದೊಂದು ಸಲ ಅಚ್ಚರಿಯೆನಿಸುತ್ತದೆ. ಈ ಬದುಕು ತುಂಬಾ ಕ್ಷಣಿಕ. ಆದರೂ ಮನುಷ್ಯ ತನ್ನ ಮಿತಿಗೆ ಎಟುಕಲಾರದ ವಸ್ತು, ವ್ಯಕ್ತಿಗಳಿಗೆ ಆಸೆಪಡುತ್ತಾನೆ. ಬದುಕಿನಲ್ಲಿ ಹಂಬಲಿಸುವುದು ಖಂಡಿತ ತಪ್ಪಲ್ಲ. ಆದರೆ ಅದು ಮಿತಿಯಲ್ಲಿರಬೇಕು. ಮಿತಿಯನ್ನು ದಾಟಿ ವರ್ತಿಸಿದೇ ಆದಲ್ಲಿ ಅಲ್ಲಿ ಆದಾಯ, ನೋವು, ನಿರಾಶೆಗಳು ಖಂಡಿತಾ ಇದ್ದೇ ಇರುತ್ತದೆ ಎಮಬ ಮಾತಂತೂ ಸತ್ಯ. ಬದುಕಿನಲ್ಲಿ ನಾವಂದುಕೊಂಡದ್ದೆಲ್ಲ ನಡೆಯುವದಿಲ್ಲ. ಜೀವನವನ್ನು ಬಂದಂತೆ ಎದುರಿಸಬೇಕು. ಸ್ವೀಕರಿಸಬೇಕು. ಅನುಭವಿಸಬೇಕು. ಆಗಲೇ ಈ ಬದುಕಿಗೊಂದು ಅರ್ಥ ಒದಗಲು ಸಾಧ್ಯ.

ಈ ಬದುಕು ಪ್ರತಿಕ್ಷಣವೂ ಮನುಷ್ಯನಿಗೆ ಪಾಠ ಕಲಿಸಿಕೊಡುತ್ತದೆ. ಬದುಕಿಗೆ ಸವಾಲೆನಿಸುವಂಥದ್ದನ್ನು ಸ್ವೀಕರಿಸುವ, ಪ್ರತಿಕ್ಷಣವು ಎಚ್ಚರಿಕೆಯಿಂದ ನಡೆಯುವ, ಇನ್ನೊಬ್ಬರಿಗೆ ಉಪದ್ರವ ಕೊಡದಂತೆ ಬದುಕುವ, ಮನುಷ್ಯರನ್ನು 'ಸರಿಯಾಗಿ' ಅರ್ಥ ಮಾಡಿಕೊಂಡು ಬದುಕುವ ಪಾಠಗಳನ್ನು ಕಲಿಸುತ್ತದೆ.

"Experience is knowledge" ಎಂಬ ಮಾತಿನಂತೆ ಅನುಭವ ಎನ್ನುವುದು ಜ್ಞಾನವಾಗಿ ಪರಿವರ್ತಿತವಾದಾಗ ಅಲ್ಲಿ 'ಬದುಕಿನ ಪರಿಕಲ್ಪನೆ' ಜನ್ಮ ತಾಳಿರುತ್ತದೆ. ಅದರ ಮೂಲಕ ಬದುಕನ್ನು ಹೊಸದಾಗಿ ನೋಡುವ, ವಿಶ್ಲೇಷಿಸುವ ಪರಿಪಾಠ ಬೆಳೆಯುತ್ತದೆ.

ಮನುಷ್ಯ ತಾನು ಹೀಗೆ ಬದುಕಬೇಕು ಎಂದು ಒಂದು ಪಕ್ಕಾದ ನಿರ್ಣಯ ಕೈಗೊಂಡು ಅದರಂತೆ ಬದುಕಲು ಸಿದ್ಧತೆ ಮಾಡಿಕೊಳ್ಳುತ್ತಿರುವಾಗಲೇ ಬಹುಶಃ ಬದುಕು ಮುಗಿದಿರುತ್ತದೆನೋ? ಆದ್ದರಿಂದ ಹೀಗೇ ಬದುಕುತ್ತೇನೆ ಎಂದು ಅಂದುಕೊಳ್ಳುವುದು ಸಂಪೂರ್ಣವಾಗಿ ಅಸಾಧ್ಯವಾದರೂ ಕನಿಷ್ಠ ಪಕ್ಷ ಹೀಗಾದರೂ ಬದುಕಬೇಕೆಂದು ಅಂದುಕೊಳ್ಳುವುದು ತಪ್ಪಲ್ಲ. ಈ ಹಿನ್ನಲೆಯಲ್ಲಿ ಮಾನವೀಯ ಮೌಲ್ಯಗಳಿಗೆ ಅಂಟಿಕೊಂಡಂತೆ ಬದುಕುವುದು ಸೂಕ್ತವಾಗುತ್ತದೆ. ಅರ್ಥಪೂರ್ಣವಾಗುತ್ತದೆ.

ಮನುಷ್ಯನ ದುಃಖಕ್ಕೆ ಮುಖ್ಯವಾಗಿ ಮೂರು ಕಾರಣಗಳು. ವಿವೇಕಿಯಾದವನು ದುಃಖ ಕಾರಣವಾದ ಮೂರು ಸಂಗತಿಗಳಿಂದ ದೂರವಿರುತ್ತಾನೆ.

1. ನಮಗೆಂದೂ ಸಿಗಲಾರದ ವಸ್ತು-ವಿಷಯಗಳ ಕುರಿತಾದ ದುರಾಸೆ.
2. ನಷ್ಟವಾಗಿ ಹೋದ ವಸ್ತು-ವಿಷಯಗಳ ಕುರಿತು ಚಿಂತೆ.
3. ಆಪತ್ತಿನ ಸಂದರ್ಭದಲ್ಲಿ ಅಧೈರ್ಯ.



ರೋವರ್ಸ್ ಕಪ್ ಸಂಬಂಧಿಸಿದ ಕ್ರೀಡೆ – ಫುಟ್ಬಾಲ್

1. ನಮ್ಮ ಪಾಲಿಗೆ ಅಲಭ್ಯವಾದ, ಎಂದೆಂದಿಗೂ ಸಿಗಲಾರದ ವಸ್ತುಗಳ ಬಗ್ಗೆ ಆಸೆ ಪಡುವುದರಿಂದ ನಿರಾಸೆ, ದು:ಖಗಳಲ್ಲದೇ ಮತ್ತೇನೂ ಫಲವಿಲ್ಲ. ಎಲ್ಲಾ ಆಸೆಗಳು ಆಕಾಶಕ್ಕೆ ಏಣಿ ಇಟ್ಟಂತೆ. ಇದರಿಂದ ನಿತ್ಯ ಕಳವಳ, ತಳಮಳ, ಇವುಗಳನ್ನು ದೂರ ಮಾಡುವುದೇ ಲೇಸು.
2. ಕಳೆದುಕೊಂಡ, ಇನ್ನೆಂದಿಗೂ ಕೈಗೆಬಾರದ ವಸ್ತು–ವಿಷಯಗಳ ಕುರಿತು ಚಿಂತಿಸಿ ಫಲವಿಲ್ಲ. ಕಳೆದುಹೋದ ಕಾಲ, ಕರಗಿಹೋದ ಯೌವನ, ಕಾಲವಶರಾದ ಬಂಧು–ಮಿತ್ರರು, ಯಾರೂ ಮತ್ತೆ ನಮಗೆ ಸಿಗಲಾರವು. ಇಂತಹ ಚಿಂತೆ, ವಿಷಾದಗಳೂ ದುಃಖ ಕಾರಣಗಳಾಗಿವೆ.
3. ನಮಗೆ ಎದುರಾಗುವ ಆಪತ್ತುಗಳನ್ನು ವಿವೇಕಿಗಳ ರೀತಿ ಧೈರ್ಯ, ಸಹನೆಗಳಿಂದ ಎದುರಿಸಬೇಕು. ಈಸಬೇಕು, ಈಸಿ ಜೈಸಬೇಕು.

ಇಲ್ಲ ಎಂಬುದು ಒಂದು ತೆರನಾದ ಚಿಂತೆಯಾದರೆ, ಇದ್ದದ್ದು ಇಲ್ಲವಾಯಿತು ಎನ್ನುವುದು ಇನ್ನೊಂದು ಚಿಂತೆ. ಇವೆರಡು ಅಭಾವ ವಿಯೋಗಗಳು. ಎಂತಹ ಪರಿಸ್ಥಿತಿಯಲ್ಲೂ ಧೈರ್ಯಗೆಡದಿರುವವನೆ ಜ್ಞಾನಿ, ಪಂಡಿತ.

"ದುಃಖಗಳೆಲ್ಲ ಸ್ನೇಹ ಮೂಲಗಳು. ಭಯ, ವ್ಯಥೆ, ಹರ್ಷ, ಆಯಾಸ ಎಲ್ಲವೂ ವಸ್ತುವಿನಲ್ಲಿ ಇಟ್ಟಿರುವ ಸ್ನೇಹದಿಂದ ಉಂಟಾಗುತ್ತದೆ. ಎಲ್ಲಕ್ಕೂ ಸ್ನೇಹವೇ ಕಾರಣ."

ಇಲ್ಲಿ ಸ್ನೇಹವೆಂದರೆ ಬಂಧ, ವಿಶ್ವಾಸ, ಪ್ರೀತಿ, ಎಲ್ಲವೂ. ನಾವು ಯಾರಲ್ಲಿ ಪ್ರೀತಿಯನ್ನು ಇಟ್ಟುಕೊಂಡಿರುತ್ತೇವೆಯೋ, ಅವರ ವಿಷಯದಲ್ಲಿ ನಮ್ಮ ಮನಸ್ಸಿನಲ್ಲಿ ಭಯ, ದುಃಖ, ಮುಂತಾದ ಭಾವಗಳೆಲ್ಲ ಉಂಟಾಗುತ್ತದೆ.

ಆದುದರಿಂದ ನಾವು ಅನುಭವಿಸುವ ಸುಖ ದುಃಖಗಳೆಲ್ಲ ಸ್ನೇಹ ಮೂಲಗಳು. ಮನುಷ್ಯನು ಸ್ನೇಹವಿಲ್ಲದೆ ಬದುಕುವುದು ಸಾಧ್ಯವಿಲ್ಲ. ಆದರೆ ಈ 'ಸ್ನೇಹ'ದಲ್ಲಿ ಪಶುತ್ವವಿರಬಾರದು. ಪ್ರೀತಿಯಿಂದ ಸುಖ–ದುಃಖ ಅನುಭವಿಸುವುದು, ದ್ವೇಷದಿಂದ ಅನುಭವಿಸುವುದಕ್ಕಿಂತ ಮೇಲು.

ಸ್ನೇಹ 'ಸಂಗ'ಕ್ಕೆ ಕಾರಣವಾಗುತ್ತದೆ. ಈ 'ಸ್ನೇಹಬಂಧ' ಸತ್ಸಂಗವಾಗಿಸಿಕೊಳ್ಳಬೇಕು. ಅದರಿಂದ ಸಮುದಾಯಕ್ಕೆ ಒಳ್ಳೆಯದಾಗುವಂತೆ ನೋಡಿಕೊಳ್ಳಬೇಕು. ಆಗ ಮಾತ್ರ ಸ್ನೇಹ ಮೂಲವಾದ ಸುಖ, ದುಃಖಾದಿಗಳನ್ನು ಅನುಭವಿಸುವುದು ಸಾರ್ಥಕವಾಗುತ್ತದೆ. ಆಗ ಅದು ನಿಸ್ಸಂಗತ್ವಕ್ಕೆ ಹೆಜ್ಜೆಯಿಡಲು ಸಿದ್ಧವಾಗುತ್ತದೆ.

---

ಸುಂದರಕಾಂಡದ ಸೌಂದರ್ಯ

ಲೇ॥ ರಾಮಕೃಷ್ಣ ಎನ್. ಹೆಗಡೆ

# ಶ್ರೀ ವೀರಾಂಜನೇಯ

ಸೀತಾಮಾತೆಯ ವಿಚಾರವಾಗಿ ಚೆನ್ನಾಗಿ ತಿಳಿದಿರುವ ಹನುಮಂತನು ಶ್ರೀರಾಮನಿಗೆ ತನಗೆ ತಿಳಿದಿರುವ ವಿಚಾರಗಳನ್ನು ವಿಸ್ತಾರವಾಗಿ ತಿಳಿಸುತ್ತಾನೆ. ಸೀತೆಯು ತನ್ನ ಸ್ವಾಮಿಯಾದ ಶ್ರೀರಾಮನ ಪರಾಕ್ರಮದ ಮೇಲೆ ಬಹಳಷ್ಟು ನಂಬಿಕೆಯನ್ನು ಹೊಂದಿದ್ದಾಳೆ. ನನ್ನನ್ನು ಈ ದುಃಖ ಸಮುದ್ರದಿಂದ ಬಿಡುಗೊಳಿಸುವ ಶಕ್ತಿಯು ಶ್ರೇಷ್ಠನಾದ ತನ್ನ ಪತಿಗೆ ಇದೆಯೆನ್ನುವುದನ್ನೂ ತಿಳಿದಿದ್ದಾಳೆ. ಅದರಂತೆ ರಾಜಶ್ರೇಷ್ಠನಾದ ನೀನು ಅವಳು ಬದುಕಿರುವ ವಿಚಾರದಲ್ಲಿ ವಿಶ್ವಾಸವನ್ನಿಟ್ಟು ಪೂಜ್ಯಳಾದ ಅವಳನ್ನು ಕರೆದುಕೊಂಡು ಬರುವಂತವನಾಗೆಂದು ಹೇಳುತ್ತಾನೆ ಅದನ್ನು ಕವಿಯು ಹೀಗೆ ವರ್ಣಿಸುತ್ತಾನೆ.

ಏತತ್ತವಾರ್ಯ ನೃಪರಾಜಸಿಂಹ<br>
ಸೀತಾವಚಃ ಪ್ರಾಹ ವಿಷಾದಪೂರ್ವಮ್ ।<br>
ಏತಚ್ಚ ಬುದ್ಧ್ವಾ ಗದಿತಂ ಮಯಾತ್ವಂ<br>
ಶ್ರದ್ಧತ್ಸ್ವ ಸೀತಾಂ ಕುಶಾಲಾಂ ಸಮಗ್ರಾಮ್ ॥

ಸೀತಾದೇವಿಯು ವಿಷಾದದಿಂದ ಹೇಳಿರುವ ಈ ಎಲ್ಲಾ ವಿಷಯಗಳನ್ನು ಗಮನಿಸಿ ಆ ಮಾತುಗಳಲ್ಲಿ ವಿಶ್ವಾಸವಿಡಬೇಕೆಂದು ಆಂಜನೇಯ ತನ್ನ ಪ್ರಭುವಾದ ಶ್ರೀರಾಮನಲ್ಲಿ ಕೇಳಿಕೊಳ್ಳುತ್ತಾನೆ. ದೂರದಲ್ಲಿರುವ ಸೀತೆಯನ್ನು ಪುನಃ ಪಡೆಯುವುದಕ್ಕೆ ಈ ವಿಶ್ವಾಸವೆನ್ನುವುದು ಬೇಕಾಗುತ್ತದೆ. ಆ ಆತ್ಮವಿಶ್ವಾಸದಿಂದ ಕಾರ್ಯನಿರ್ವಹಿಸಿದಾಗ ಯಶಸ್ಸು ಲಭ್ಯವಾಗುತ್ತದೆ. ಹಾಗಾಗಿ ಈ ಮಾತುಗಳಲ್ಲಿ ವಿಶ್ವಾಸವನ್ನಿಟ್ಟು ಮುಂದಿನ ಕಾರ್ಯಕ್ಕೆ ಸಿದ್ಧವಾಗುವುದು ಉತ್ತಮವೆನ್ನುವುದು. ಆಂಜನೇಯನ ಅಭಿಪ್ರಾಯವಾಗಿದೆ. ಇಂತಹ ವಿಶ್ವಾಸವನ್ನು ಮೂಡಿಸುವ ಚಾತುರ್ಯ ಹನುಮಂತನಲ್ಲಿದೆಯೆನ್ನುವುದನ್ನೂ ಇಲ್ಲಿ ಗಮನಿಸಬಹುದಾಗಿದೆ ಇದಲ್ಲದೇ ಸೀತೆಯು ಹೇಳಿರುವ ಇನ್ನಷ್ಟು ವಿಚಾರಗಳನ್ನು ಹನುಮಂತನು ಶ್ರೀರಾನಿಗೆ ತಿಳಿಸುತ್ತಾನೆ.

ದುಷ್ಟರಾದ ರಾಕ್ಷಸರನ್ನು ಸಂಹಾರಮಾಡಿ ನನ್ನನ್ನು ಅಯೋಧ್ಯೆಗೆ ಕರೆದುಕೊಂಡು ಹೋಗುವ ಸಾಮರ್ಥ್ಯ ನಿನಗಿದೆ. ಆದರೆ ಅದರಿಂದಾಗುವ ಶ್ರೀರಾಮನಿಗೆ ಯಶಸ್ಸು ಲಬ್ಯವಾಗುವುದಿಲ್ಲ. ಕಾರ್ಯದ ಯಶಸ್ಸೆನ್ನುವುದು ತನ್ನ ಪತಿಗೆ ಸಿಗಬೇಕು. ಇದರಿಂದ ಜಗತ್ತಿಗೆ ಒಂದು ಪಾಠವಾಗುತ್ತದೆ..

ಕಾಮಮಸ್ಯ ತ್ವಮೇವೈಕಃ
ಕಾರ್ಯಸ್ಯ ಪರಿಸಾಧನೇ ।
ಪರ್ಯಾಪ್ತಃ ಪರವೀರಘ್ನ
ಯಶಸ್ಯಸ್ತೇ ಬಲೋದಯಃ ॥

ಎನ್ನುವುದು ಸೀತಾಮಾತೆಯ ಅಭಿಪ್ರಾಯವಾಗಿದೆ. ಹಾಗಾಗಿ ಶ್ರೀರಾಮನು ಲಂಕೆಗೆ ಬರಬೇಕು. ಇಲ್ಲಿ ಶ್ರೀರಾಮನಿಗೂ ಮತ್ತು ದುಷ್ಟನಾಗಿರುವ ರಾವಣನಿಗೂ ಯುದ್ಧವಾಗಿ ಶ್ರೀರಾಮನು ವಿಜಯಿಯಾಗುತ್ತಾನೆ. ಶ್ರೀರಾಮನು ರಾವಣನನ್ನು ಕೊಂದು ನನ್ನನ್ನು ಕರೆದುಕೊಂಡು ಹೋದ ವಿಚಾರವೇ ಲೋಕಪ್ರಸಿದ್ಧವಾಗುತ್ತದೆ.

ಬಲೈಃ ಸಮಗ್ರೈರ್ಯದಿ ಮಾಂ ಹತ್ವಾ ರಾವಣಮಾಹವೇ ।
ವಿಜಯ ಸ್ವಾಂ ಪುರೀಂ ರಾಮೋ ನಯೇತ್ತತ್ ಸ್ಯಾದ್ಯಶಸ್ಕರಮ್ ॥

ಹೀಗೆ ಸೀತೆಯು ಆಲೋಚನೆ ಮಾಡಿ ನುಡಿದಿರುವ ಮಾತುಗಳನ್ನು ಹನುಮಂತನು ತನ್ನ ಸ್ವಾಮಿಯಾದ ಶ್ರೀರಾಮನಿಗೆ ಹೇಳುತ್ತಾನೆ.

–ಮುಂದುವರಿಯುವುದು

# ಮರೆಯಲಾಗದ ವೆಂಭ ವಂದೂರು

ಕನ್ನಡ ಸಾರಸ್ವತ ಲೋಕದ ಅಪ್ರತೀಮ ಪ್ರತಿಭೆ ವೆಂಭ ವಂದೂರನ್ನು ಕಳೆದುಕೊಂಡು ಸಾಹಿತ್ಯಕ್ಷೇತ್ರ ಖಿನ್ನವಾಗಿದೆ. ಉತ್ತರಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ವಂದೂರು ಗ್ರಾಮದಲ್ಲಿ ಜನಿಸಿ, ವೆಂಕಟ್ರಮಣ ಭಟ್ಟ ವಂದೂರವರು ಕಾವ್ಯನಾಮದಿ ವೆಂ.ಭ. ವಂದೂರು ಎಂದು ಪ್ರಸಿದ್ಧರಾಗಿದ್ದರು. ಹೊನ್ನಾವರದಲ್ಲಿ ಶಿಕ್ಷಣ ಪಡೆದು ಮುಂಬೈಯಲ್ಲಿ ಉದ್ಯೋಗಿಯಾಗಿ ಕನ್ನಡದ ಕಹಳೆ ಊದಿದರು. ಕನ್ನಡ – ಇಂಗ್ಲಿಷ್ ಬಹುಭಾಷಾ ಪರಿಣಿತರಾದ ವೆಂಭ ತಮ್ಮ ಪರಿಣಿತ ಸಾಹಿತ್ಯ ರಚನೆಯ ಮೂಲಕ ಜನರ ಹೃದಯ ಗೆದ್ದರು. ಭಗವದ್ಗೀತೆಯ 700 ಶ್ಲೋಕಗಳನ್ನು 400 ಭಾಮಿನಿಯಲ್ಲಿ ಪರಿವರ್ತಿಸಿದ್ದಾರೆ. 400 ಕ್ಕೂ ಹೆಚ್ಚು ಕವನ ಸಂಕಲನ ಪ್ರಕಟಿಸಿದ ಹೆಗ್ಗಳಿಕೆ ಇವರದ್ದು. 33 ಕ್ಕೂ ಹೆಚ್ಚು ಕೃತಿಗಳನ್ನೂ ಪ್ರಕಟಿಸಿ ಸಾಹಿತ್ಯ ಪ್ರೇಮಿಗಳ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಸಸಿಮರ, ಶೋಧ, ಅನ್ವೇಷಣೆ, ದ್ವೇಷ, ಭೂದೇವಿ ಕುಡುಕೇಶ, ಚಂಡಿಚಾಮುಂಡಿ, ಮಾಲಿ ಇವರ ಪ್ರಸಿದ್ಧ ಕವನ ಸಂಕಲನಗಳು.

ಹೊನ್ನಾವರ ತಾಲೂಕಾ ಸಮ್ಮೇಳನ ಸರ್ವಾಧ್ಯಕ್ಷತೆ, ಅಷ್ಟೇ ಅಲ್ಲದೆ ಮಾಸ್ಕೇರಿ ಸಾಹಿತ್ಯಾರಾಧನೆ ವೇದಿಕೆ ನೀಡುವ 'ಅಭಿನವ ಕುಮಾರವ್ಯಾಸ' ಬಿರುದು ಪಡೆದ ಗೌರವಾನ್ವಿತರು ಇವರು.

ಅವಿವಾಹಿತರಾದ ವೆಂಭ ಸಮಾಜದ ಸಾಮಾಜಿಕ ಪಿಡುಗಿನ ವಿರುದ್ಧ ಸಮರ ಸಾರಿದ್ದರು. ಸಾಮಾಜಿಕ ಕಳಕಳಿಯ ಅವರ ಕವನಗಳಲ್ಲಿ ಸ್ವಾರ್ಥ, ದ್ವೇಷ, ಅನ್ಯಾಯ, ಅನಾಗರಿಕತೆಯ ವಿರುದ್ಧ ಧ್ವನಿ ಎತ್ತಿ ನಿಲ್ಲುತ್ತಿತ್ತು. ಸದಾ ತತ್ವ, ನಿಷ್ಠೆ, ಸಿದ್ಧಾಂತಗಳಿಂದ ತನ್ನದೇ ಆದ ಛಾಪು ಹೊಂದಿದ್ದ ವೆಂಭ ನಿಷ್ಠುರವಾಗಿ ವಾಸ್ತವಿಕತೆಯಿಂದ ರಾಜಿ ಮಾಡಿಕೊಳ್ಳುತ್ತಿರಲಿಲ್ಲ. ಅಂತಃ ಶಕ್ತಿ ಪಡೆದ ಅವರ ಕಾವ್ಯ ಸಾಹಿತಿಗಳ ಕಾವ್ಯಾಸಕ್ತರ ಹೃದಯದಲ್ಲಿ ಸದಾ ಮಿನುಗುತ್ತದೆ. ಪರಾತ್ಮನಲ್ಲಿ ಲೀನವಾದ ವೆಂಭರ ಆತ್ಮಕ್ಕೆ ಚಿರಶಾಂತಿಯನ್ನು ಭಗವಂತ ಕರುಣಿಸಲಿ.



**–: ನುಡಿ ನಮನ :-**

ಉಸಿರು ಕೊನೆಯುಸಿರಾಯ್ತೆ ವಂದೂರು ವೆಂಭ
ಕಣ್ಣೀರು ಹರಿಯಿತೇ ಸಾಹಿತ್ಯ ಕ್ಷೇತ್ರದ ತುಂಬ ॥ 1 ॥
ತತ್ವ ನಿಷ್ಠೆಗಳ ಪ್ರತಿಪಾದಕ ಸೈದ್ಧಾಂತಿಕ ರಾಜ
ಕವಿ ಹೃದಯ ಸಾರಿತು ನಿಷ್ಕಳಂಕ ಆತ್ಮ ತೇಜ ॥ 2 ॥

ಸಸಿಮರವೋ, ಚಂಡಿ ಚಾಮುಂಡಿಯೋ ಅನ್ವೇಷಣಗಳ ಕವನಸಂಕಲನ
ಪದಪುಂಜ, ಪ್ರಾಸಬಂಧ ಅರ್ಥಗಾಂಭೀರ್ಯದಿ ಕಂಡಿತು ರೊಮಾನಂಚನ
ಸಮರ್ಥ ಸಾಹಿತ್ಯ, ಆತ್ಮೀಯ ಪ್ರೇಮ ಮರೆಯಲಾಗದ ನಿಮ್ಮ ಗಾನ
ಪುನಃ ಜನ್ಮಪಡೆದು ಭುವಿಗೆ ಬನ್ನಿ ಇದು ಅಂತರಂಗದ ನುಡಿ ನಮನ

ವಿ.ಜಿ ಗುಡ್ಗೆ
ನಿವೃತ್ತ ಪ್ರಾಚಾರ್ಯ



ದಿವಾನ್ ಕಪ್ ಸಂಬಂಧಿಸಿದ ಕ್ರೀಡೆ – ಬ್ಯಾಡ್ಮಿಂಟನ್



# ಭಾವಪೂರ್ಣ ಶ್ರದ್ಧಾಂಜಲಿ.

ಶ್ರೀಕ್ಷೇತ್ರದ ಆಪ್ತಭಕ್ತರೂ, ಪ್ರಸಿದ್ಧ ಸಾಹಿತಿಗಳೂ ಹಾಗೂ ನಮ್ಮ ಹೆಮ್ಮೆಯ 'ಹೇಮಪುರ' ಮಾಸಪತ್ರಿಕೆಯ ಆರಂಭದ 5ವರ್ಷಗಳ ಸಂಪಾದಕರೂ ಆಗಿದ್ದ ಹೊನ್ನಾವರದ ವಂದೂರಿನ ಶ್ರೀ ವೆಂಕಟ್ರಮಣ ಭಟ್ಟ (ವೆಂ.ಭ. ವಂದೂರು) ರವರು ದಿನಾಂಕ:–09–06–2019ರಂದು ಈಹಲೋಕ ತ್ಯಜಿಸಿದರು. ಇದು ನಮ್ಮೆಗೆಲ್ಲ ದುಃಖವನ್ನು ಉಂಟು ಮಾಡಿದೆ. ಇವರ ಆತ್ಮಕ್ಕೆ ಚಿರಶಾಂತಿ ಲಭಿಸಲೆಂದು ಶ್ರೀದೇವರಲ್ಲಿ ಪ್ರಾರ್ಥಿಸುತ್ತೇವೆ.

ಮೇಲ್ವಿಚಾರಕರು, ಶ್ರೀಕ್ಷೇತ್ರ ಬಮಗಾರಮಕ್ಕಿ
ಹಾಗೂ 'ಹೇಮಪುರ' ಬಳಗ.

# ಪದಬಂಧ–46

–ಶ್ರೀ ಗುರು ದಾಸ.

**ಎಡದಿಂದ ಬಲಕ್ಕೆ :–**

1. ವೈದಿಕ ವಾಙ್ಮಯದಲ್ಲಿ ಹೇಳಲ್ಪಟ್ಟ 4 ಯುಗದಲ್ಲಿ ಕೊನೆಯ ಯುಗ –4
3. ನಂಬಿಕೆಯ ಪ್ರಕಾರ ಮರಣಾನಂತರ ಶಿಕ್ಷೆಗೊಳಪಡುವ ಸ್ಥಳ –3
5. ತಾಲೀಮು ನಡೆಸುವ ಮನೆ ತಿರುಗಿದೆ –3
6. ಉತ್ತಮವಾದಂತಹ ವಿಚಾರಗಳು –4
8. ಮನಸ್ಸಿನ ವ್ಯಾಕುಲತೆ –3

| | | | | | | | |
|---|---|---|---|---|---|---|---|
| 1 | | | 2 | ■ | 3 | | 4 |
| | ■ | ■ | 5 | | | ■ | |
| 6 | 7 | | | ■ | 8 | 9 | |
| ■ | | ■ | 10 | 11 | ■ | | ■ |
| 12 | | 13 | ■ | 14 | | | 15 |
| | ■ | 16 | | | ■ | ■ | |
| | ■ | | ■ | 17 | 18 | ■ | |
| 19 | | | | ■ | 20 | | |

**(ಉತ್ತರ ಮುಂದಿನ ಸಂಚಿಕೆಯಲ್ಲಿ)**

10. ವ್ಯವಸ್ಥಿತವಾಗಿ ನಿರ್ಮಿಸಿದ ಮಾರ್ಗ ತಿರುಗಿಬಿಟ್ಟಿದೆ –2
12 ಮೋಹಕವಾದ ರೂಪವುಳ್ಳ ಕೃಷ್ಣ –3
14. ಒಂದು ನಿರ್ದಿಷ್ಟ ಜಾತಿಯ ಬಗ್ಗೆ ಧೋರಣೆಗಳನ್ನು ಹೊಂದಿರುವುದು –4
16. ಮನೆಗೆ ಹಾಗೂ ಮನಸ್ಸಿಗೆ ಒಡತಿ –3
17. ಇದು ಮನುಷ್ಯನು ಹೌದು, ಮನುಷ್ಯನ ಒಂದು ಅಂಗಾಂಶವು ಹೌದು –2
19. ಮಳೆಯ ತೀವ್ರತೆಯನ್ನು ಗುರುತಿಸುವ ಜೋಡುನುಡಿ–4
20. ನೆನಪಿಲ್ಲದೆ ಬಿಟ್ಟು ಹೋದ –3

**ಮೇಲಿನಿಂದ ಕೆಳಕ್ಕೆ:–**

1. ಕಣ್ಮುಚ್ಚಿದಾಗ ಕಂಡ ಸ್ವಪ್ನ –3
2. ಗಡಿಭಾಗದಲ್ಲಿರುವ ದಾರಿಗಳು –4
3. ಹಣದ ಭೌತಿಕ ರೂಪ, ನಗದೇ ಇರಬೇಡಿ –3
4. ಭಾವನೆಗಳಿಂದ ಕೂಡಿದ ಅರ್ಥ ಬದ್ಧವಾದ ಪದಗಳ ಸಾಲುಗಳು –3
7. ವಿಶೇಷವಾದ ಪ್ರತಿಮೆ –3
9. ಸವದತ್ತಿಯ ಪ್ರಸಿದ್ಧ ದೇವಿ ಇಲ್ಲಿ ತಿರುಗಿ ನಿಂತಿದ್ದಾಳೆ –3
11. ಮಕ್ಕಳು ಸಾಮಾನ್ಯವಾಗಿ ಅಜ್ಜನ ಊರಿಗೆ ಹೋಗುವ ದಿನಗಳು –4
12. ತಮಾಷೆಯಿಂದಿರುವಾತ –4
13. ನಾವು ತಿಳಿಸುವ ವಂದನೆ –4
15. ತೆರೆಯನು ಸರಿಸಿದರು –4
18. ರಾಮನಂತಹ ಇನಿಯ –2

ಪದಬಂಧ–45ರ ಉತ್ತರ

**ಎಡದಿಂದ ಬಲಕ್ಕೆ:–** 1.ಮಮತೆ, 3.ವಹಿವಾಟು, 5.ರಿಪೇರಿ, 6.ಕೆದಗೆ, 8.ಸುಸ್ಥಿರತೆ, 11.ಮನಶಾಂತಿ, 12.ಗಗನ, 14.ಅನತಿ, 16.ನಾಜೂಕು, 18.ಲವಂಗ, 19.ಕಷ್ಟ. ***** **ಮೇಲಿಂದ ಕೆಳಕ್ಕೆ:–** 1.ಮಡಿಕೆ, 2.ತೆರಿಗೆ, 3.ವರಿಸು, 4.ವಾನರ, 7.ದಮನ, 9.ಸ್ಥಿತಿಗತಿ, 10.ಥಿತಿಅ(ಅತಿಥಿ), 11.ಮಲೆನಾಡು, 13.ನತದೃಷ್ಟ, 15.ನಜಾಗ(ಗಜಾನ), 17.ಕುಲ.



ಚಾರ್ಮಿನಾರ್ ಟ್ರೋಫಿ ಸಂಬಂಧಿಸಿದ ಕ್ರೀಡೆ – ಅಥ್ಲೆಟಿಕ್ಸ್